بِسۡمِ اللّٰہِ الرَّحۡمٰنِ الرَّحِیۡمِ    نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ    وَعَلٰی عَبۡدِہِ الۡمَسِیۡحِ الۡمَوۡعُوۡدِ


ಪ್ರವಾದಿ ಮುಹಮ್ಮದ್(ಸ)
ವಿಶೇಷ ಸಂಚಿಕೆ

ಸಂಪುಟ: 01

ವಾರ್ಷಿಕ ಶುಲ್ಕ:
ರೂ.500/-

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

# ಕನ್ನಡ ಬದರ್ ವಾರ ಪತ್ರಿಕೆ

Weekly **BADAR** Qadian KANNADA

ಸಂಚಿಕೆ: 31


ಸಂಪಾದಕರು
ತಾರಿಖ್ ಅಹ್ಮದ್
ಇದ್ರೀಸ್

13 ಆಗಸ್ಟ್ 2020,     13 ಝುಹೂರ್, ಹಿಜರಿ ಶಮ್ಸಿ 1399,     22 ಝಿಲ್‌ಹಜ್ಜ್, ಹಿಜರಿ ಖಮರಿ 1441


## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಖಾನ ಕಅಬ ಸತ್ಯ ಪ್ರೇಮಿಗಳಿಗೆ ಒಂದು ಭೌತಿಕ ಮಾದರಿಯಾಗಿ ನೀಡಲ್ಪಟ್ಟಿದೆ, ಅಲ್ಲಾಹನು ಹೇಳಿದನು. ನೋಡಿರಿ! ಇದು ನನ್ನ ಮನೆಯಾಗಿದೆ ಮತ್ತು ಈ ಹಜ್‌ರೆ ಅಸ್ವದ್ (ಕಪ್ಪು ಕಲ್ಲು) ನನ್ನ ದ್ವಾರದ ಕಲ್ಲಾಗಿದೆ. ಇಂತಹ ಆದೇಶ ನೀಡಲು ಕಾರಣ ಏನೆಂದರೆ ಮನುಷ್ಯನು ದೈಹಿಕ ನೆಲೆಯಲ್ಲಿ ತನ್ನ ಉತ್ಸಾಹ ಬರಿತ ಪ್ರೀತಿ ಪ್ರೇಮವನ್ನು ಪ್ರಕಟಿಸುವವನಾಗಬೇಕು. ಆ ಕಾರಣದಿಂದಲೆ ಹಜ್ಜ್ ಮಾಡುವವರು ಹಜ್ಜ್‌ನ ಸ್ಥಳದಲ್ಲಿ ಬಾಹ್ಯವಾಗಿ ಆ ಮನೆಯನ್ನು ಸುತ್ತು ಹಾಕುತ್ತಾರೆ. ಸುತ್ತುತ್ತಿರುವಾಗ ಅಲ್ಲಾಹನ ಪ್ರೇಮದಲ್ಲಿ ಮುಳುಗಿ ಹುಚ್ಚರ ರೀತಿಯಲ್ಲಿ ತಮ್ಮ ಪ್ರೀತಿಯನ್ನು ಪ್ರದರ್ಶಿಸುತ್ತಾರೆ."

(ಚಶ್ಮ-ಎ-ಮಅರಿಫತ್, ರೂಹಾನಿ ಖಝಾಯೀನ್, ಸಂಪುಟ-23, ಪುಟ-100)



Printed

# ನಾಮ್ ಉಸ್‌ಕ ಹೈ ಮುಹಮ್ಮದ್[ಸ]
# ದಿಲ್‌ಬರ್ ಮೆರಾ ಯಹೀ ಹೈ

## ಹಝ್ರತ್ ಮಸೀಹ್ ಮೌಊದ್
## ಅಲೈಹಿಸ್ಸಲಾಮ್‌ರವರ ರಚನೆ

ಓಹ್ ಪೇಶ್ವಾ ಹಮಾರ ಜಿಸ್‌ಸೆ ಹೈ ನೂರ್ ಸಾರಾ
ನಾಮ್ ಉಸ್‌ಕ ಹೈ ಮುಹಮ್ಮದ್[ಸ] ದಿಲ್‌ಬರ್ ಮೆರಾ ಯಹೀ ಹೈ

ಎಲ್ಲಾ ಪ್ರಕಾಶಗಳು ಯಾರಿಂದ ಪ್ರಸಾರವಾಗುತ್ತಿವೆಯೋ ಅವರೇ ನಮ್ಮ ನೇತಾರ, ಅವರ ಹೆಸರು ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ನನ್ನ ಹೃದಯದಲ್ಲಿ ಅವರೇ ತುಂಬಿರುವರು.

ಸಬ್ ಪಾಕ್ ಹೈ ಪಯಂಬರ್ ಎಕ್ ದೂಸ್ರೇ ಸೆ ಬೆಹ್ತರ್
ಲೈಕ್ ಅಝ್ ಖುದಾ ಎ ಬರ್‌ತರ್ ಖೈರುಲ್‌ವರಾ ಯಹೀ ಹೈ.

ಎಲ್ಲಾ ಪ್ರವಾದಿಗಳು ಪರಿಶುದ್ಧರು, ಕೆಲವರು ಬೇರೆ ಕೆಲವರಿಗಿಂತ ಶ್ರೇಷ್ಠರು. ಆದರೆ ಸರ್ವೋನ್ನತನಾದ ಅಲ್ಲಾಹನ ಸೃಷ್ಟಿಗಳಲ್ಲಿ ಇವರೇ ಅತ್ಯಂತ ಶ್ರೇಷ್ಠರು.

ಪೆಹ್ಲೋಂ ಸೆ ಖೂಬ್ ತರ್ ಹೈ ಖೂಬಿ ಮೆ ಇಕ್ ಖಮರ್ ಹೈ
ಉಸ್‌ಪರ್ ಹರ್ ಎಕ್ ನಝರ್ ಹೈ ಬದರುದ್ದುಜಾ ಯಹೀ ಹೈ.

ಎಲ್ಲರಿಗಿಂತಲೂ ಶ್ರೇಷ್ಠ, ಶ್ರೇಷ್ಠತೆಯಲ್ಲಿ ಒಬ್ಬ ಚಂದ್ರನಾಗಿದ್ದಾರೆ. ಪ್ರತಿಯೊಬ್ಬರ ದೃಷ್ಟಿ ಅವರ ಮೇಲಿದೆ. ಅವರು ಪೂರ್ಣಿಮೆಯ ಚಂದ್ರನಂತೆ ಅಂಧಕಾರದಲ್ಲಿ ಬೆಳಕನ್ನು ಬೀರುತ್ತಿದ್ದಾರೆ.

ಓಹ್ ಯಾರೆ ಲಾ ಮಕಾನಿ ಓಹ್ ದಿಲ್ ಬರೇ ನಿಹಾನಿ,
ದೇಖಾ ಹೈ ಹಮ್‌ನೆ ಉಸ್ ಸೆ ಬಸ್ ರೆಹ್ನುಮಾ ಯಹೀ ಹೈ.

ಆ ಸರ್ವವ್ಯಾಪಿಯಾದ, ಹೃದಯ ಕುರುಹುಗಳಲ್ಲೂ ತುಂಬಿರುವ ನಮ್ಮ ಪ್ರೀಯಕ್ರನಾದ ದೇವರನ್ನು ಅವರ ಮೂಲಕವೇ ನೋಡಿದೆವು, ಅವರೇ ಏಕೈಕ ಮಾರ್ಗದರ್ಶಿಯಾಗಿರುವರು.

ಓಹ್ ಆಜ್ ಶಾಹೆ ದೀನ್ ಹೈ ಓಹ್ ತಾಜೆ ಮುರ್ಸಲೀನ್ ಹೈ,
ಓಹ್ ತಯ್ಯಬ್ ವ ಅಮೀಂ ಹೈ ಉಸ್ಕೀ ಸನಾ ಯಹೀ ಹೈ.

ಅವರು ಇಂದು ಧರ್ಮದ ದೊರೆಯಾಗಿದ್ದಾರೆ, ಆವರು ಪ್ರವಾದಿಗಳ ಕಿರೀಟವಾಗಿದ್ದಾರೆ.

ಉಸ್ ನೂರ್ ಪರ್ ಫಿದಾ ಹೂಂ, ಉಸ್ಕಾ ಹಿ ಮೈಂ ಹುವಾ ಹೂಂ
ಓ ಹೈ ಮೈಂ ಚೀಝ್ ಕ್ಯಾ ಹೂಂ ಬಸ್ ಫೈಸ್ಲಾ ಯಹೀ ಹೈ.

ಆ ಪ್ರಕಾಶದಿಂದ ಆಕರ್ಷಿತನಾಗಿ ನಾನು ಅವರದ್ದೇ ಆಗಿಬಿಟ್ಟಿದ್ದೇನೆ, ಅವರೇ ಲಕ್ಷಿಸಲ್ಪಡಲು ಅರ್ಹರು, ನಾನು ನಿಸ್ಸಾರನು, ಇದೇ ಯೀರ್ಮಾನವಾಗಿದೆ."

❁❁❁

## ಕನ್ನಡ ವಾರ ಪತ್ರಿಕೆ ಬದರ್ "ಪ್ರವಾದಿ ಮುಹಮ್ಮದ್(ಸ) ವಿಷೇಶ ಸಂಚಿಕೆ"


| | ವಿಷಯ ಸೂಚಿಕೆ | ಪುಟ |
|---|---|---|
| 01 | ಅಲ್ಲಾಹನ ಉಪದೇಶ | 02 |
| 02 | ಪ್ರವಾದಿ ಮುಹಮ್ಮದ್(ಸ) ಅವರ ಉಪದೇಶಗಳು | 02 |
| 03 | ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳು | 03 |
| 04 | ಸಯ್ಯದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರವರ ಹೃದಯಸ್ಪರ್ಶ ಭಾಷಣ. | 04 |
| 05 | ಹಝ್ರತ್ ರಸೂಲುಲ್ಲಾಹ್(ಸ) ವಿಶಿಷ್ಠ ಶ್ರೇಷ್ಠತೆಯುಳ್ಳ ಪ್ರವಾದಿಯ ನೆಲೆಯಲ್ಲಿ | 10 |
| 06 | ಹಝ್ರತ್ ರಸೂಲುಲ್ಲಾಹ್(ಸ) ರವರ ಜೀವನ ಚರಿತ್ರೆ | 15 |


## ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ತಮ್ಮ ಸಂಗಡಿಗರೊಂದಿಗೆ ಸುವರ್ತನೆ

ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೀಹಿವಸಲ್ಲಮರ ಸಹಾಬ (ಸಂಗಡಿಗರು) ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ತಮ್ಮ ಜೀವಕ್ಕಿಂತ ಹಾಗೂ ತಮ್ಮ ಪೋಷಕರ ಜೀವಕ್ಕಿಂತ ಹೆಚ್ಚಾಗಿ ಆತ್ಮೀಯರಾಗಿದ್ದರು. ಯಾವಾಗಲು ಅವರ ಮೇಲೆ ತಮ್ಮ ಜೀವ ಅರ್ಪಿಸಲು ಸಿದ್ಧರಾಗಿರುತ್ತಿದ್ದರು. ಅಲ್ಲಾಹ್ ಹಾಗೂ ಅಲ್ಲಾಹನ ಸಂದೇಶ ವಾಹಕರಿಗಿಂತ ಹೆಚ್ಚು ಯಾವ ವಸ್ತು ಆತ್ಮೀಯವಾಗಿರಲಿಲ್ಲ. ಅದರ ಫಲವಾಗಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ತಮ್ಮ ಸಂಗಡಿಗರೊಂದಿಗೆ ಅತೀ ಹೆಚ್ಚು ಆತ್ಮೀಯತೆ ಹಾಗೂ ಸಹಾನುಭೂತಿಯಿಂದ ವರ್ತಿಸುತ್ತಿದ್ದರು. ಪ್ರತಿಯೊಂದು ರೀತಿಯಿಂದ ಅವರ ಮನರಂಜಿಸುತ್ತಿದ್ದರು. ಸಾಂಪತ್ತಿಕ ಸಹಾಯ ಮಾಡುತ್ತಿದ್ದರು. ಯಾರಾದರು ಸಾಲಗಾರನಾಗಿರುತ್ತಿದ್ದರು ಆತನ ಸಾಲವನ್ನು ತೀರಿಸುತ್ತಿದ್ದರು. ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಹಾಗೂ ಅವರ ಸಂಗಡಿಗರ ಇಂತಹ ಕೆಲವು ಘಟನೆಗಳು ಕೆಳಕಂಡಂತಿವೆ.

ಹಝ್ರತ್ ಜಾಬಿರ್(ರ) ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಒರ್ವ ನಿಷ್ಠಾವಂತ ಸಹಾಬಿಯಾಗಿದ್ದರು. ಅವರ ತಂದೆಯ ಹೆಸರು ಅಬ್ದುಲ್ಲಾ ಬಿನ್ ಉಮರೋ ಬಿನ್ ಹರಾಮ್(ರ) ಆಗಿತ್ತು. ಹಝ್ರತ್ ಜಾಬಿರ್(ರ) ರವರ ತಂದೆ ಉಹದ್ ಯುದ್ಧದಲ್ಲಿ ಶಹೀದರಾದರು. ಉಹದ್ ಯುದ್ಧದಲ್ಲಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ತಮಗೆ ಜೀವ ನೀಡಲು ಸಿದ್ದರಾಗಿದ್ದ 70 ನಿಷ್ಠಾವಂತ ಸಹಾಬರನ್ನು ಕಳೆದುಕೊಂಡು ದುಃಖ ಅನುಭವಿಸಬೇಕಾಯಿತು ಅವರಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಚಿಕ್ಕಪ್ಪ ಹಝ್ರತ್ ಹಮ್‌ಝ(ರ) ರವರು ಸೇರಿದ್ದರು.

ಒಂದು ಹದೀಸಿನಲ್ಲಿ ಹೀಗೆ ವರದಿ ಆಗಿದೆ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ಹೇಳುತ್ತಾರೆ: ಒಮ್ಮೆ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನನ್ನನ್ನು ಭೇಟಿಯಾಗಿ ಹೇಳಿದರು: ಎಲೈ ಜಾಬಿರ್ ಇಂದು ನಾನು ನಿಮ್ಮನ್ನು ಬಹಳ ನಿಸ್ಸಹಾಯಕ ಹಾಗೂ ದುಃಖಿತರಾಗಿರುವುದಾಗಿ ಏಕೆ ಕಾಣುತ್ತಿದ್ದೇನೆ? ಅದಕ್ಕೆ ನಾನು ಉತ್ತರಿಸಿದೆ ಯಾ ರಸೂಲಲ್ಲಾಹ್!! ನನ್ನ ತಂದೆ ಶಹೀದ್ ಆಗಿದ್ದಾರೆ ಮತ್ತು ಅವರು ಬಹಳಷ್ಟು ಸಾಲ ಹಾಗೂ ಸಂತಾನವನ್ನು ತ್ಯಜಿಸಿ ಹೋಗಿದ್ದಾರೆ. ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು ನಾನು ನಿಮಗೆ ಒಂದು ಸುವಾರ್ತೆಯನ್ನು ತಿಳಿಸ ಬಹುದೇ? ಹೇಗೆ ನಿಮ್ಮ ತಂದೆ ಅವರು ಅಲ್ಲಾಹನ ಮುಂದೆ ಹಾಜರಾದರು ಎಂದು. ನಾನು ಅದಕ್ಕೆ ಉತ್ತರಿಸಿದೆ ಹೌದು ಯಾ ರಸೂಲಲ್ಲಾಹ್ ಅವಶ್ಯವಾಗಿ ತಿಳಿಸಿರಿ. ಇದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ಅಲ್ಲಾಹನು ಯಾರನ್ನಾದರು ಉದ್ದೇಶಿಸಿ ಮಾತನಾಡಬೇಕಾದರೆ ಪರದೆಯ ಹಿಂಭಾಗದಿಂದ ಮಾತನಾಡುತ್ತಿದ್ದನು. ಆದರೆ ನಿಮ್ಮ ತಂದೆಯವರಿಗೆ ಮೊದಲು ಜೀವಂತವಾಗಿಸಿ ಅವರೊಂದಿಗೆ ಮುಖಾಮುಖಿಯಾಗಿ ಸಂಬೋಧಿಸಿದನು ಮತ್ತು ಹೀಗೆ ಹೇಳಿದನು: ದಾಸನೆ ನನ್ನಿಂದ ನಿನಗೆ ಬೇಕಾಗಿದ್ದನ್ನು ಕೇಳು ನಾನು ನಿನಗೆ ನೀಡುವೆನು. ಆಗ ನಿಮ್ಮ ತಂದೆಯವರು ಹೇಳಿದರು: ಅಲ್ಲಾಹನೇ!! ನನಗೆ ನೀನು ಪುನಃ ಲೋಕಕ್ಕೆ ಜೀವಂತಗೊಳಿಸಿ ಕಳುಹಿಸು. ನಾನು ಮತ್ತೊಮ್ಮೆ ನಿನಗಾಗಿ ಮೃತನಾಗಲು ಬಯಸುತ್ತೇನೆ. ಇದಕ್ಕೆ ಅಲ್ಲಾಹನು ಹೇಳುತ್ತಾನೆ ಇದಾಗುವುದಿಲ್ಲ ಏಕೆಂದರೆ ಯಾರಾದರು ಮರಣ ಹೊಂದಿದರೆ ಅವರನ್ನು ಪುನಃ ಜೀವಂತಗೊಳಿಸಿ ಲೋಕಕ್ಕೆ ಮರಳಿಸುವುದಿಲ್ಲ ಎಂದು ನಾನು ಖಾಯಿದೆ ಜಾರಿಗೊಳಿಸಿರುವೆನು. (ತಿರ್‌ಮಿಝಿ ಅಬ್ವಾಬುತ್ತಫ್ಸೀರ್, ತಫ್‌ಸೀರ್ ಸೂರಃ ಆಲಿ ಇಮ್ರಾನ್, ಹದೀಖತುಸ್ಸಾಲಿಹೀನ್, ಮಲಕ್ ಸೈಫುರ್ರಹ್ಮಾನ್ ಹದೀಸ್–320)

ಹಝ್ರತ್ ಜಾಬಿರ್(ರ) ಅವರಿಗೆ ಅವರ ತಂದೆ ಅಬ್ದುಲ್ಲ ಹೇಳಿದ್ದರು: ನಾನು ಆ ಯಹೂದಿಯಿಂದ ಪಡೆದ ಸಾಲದ ಹಣವನ್ನು ನನ್ನ ತೋಟದ ಹಣ್ಣುಗಳನ್ನು ಮಾರಾಟವಾಡಿ ಯಹೂದಿಗೆ ಪಾವತಿಸಿ ಎಂದು ಹೇಳಿದ್ದರು. ಹಝ್ರತ್ ಜಾಬಿರ್(ರ)ರವರು ತಮ್ಮ ತಂದೆಯವರ ವಸಿಯ್ಯತ್ ಪ್ರಕಾರ ಯಹೂದಿಯ ಸಾಲವನ್ನು ಪಾವತಿಸಿದರು. (ಖುತ್‌ಬ ಜುಮುಅ 30–03–2018)

ಆ ಕಾಲದಲ್ಲಿ ತೋಟಗಳ ಅಥವಾ ಬೆಳೆಯ ಮೇಲೆ ಸಾಲವನ್ನು ಪಡೆಯುವ ಸಂಪ್ರದಾಯ ಇತ್ತು. ಹಝ್ರತ್ ಜಾಬಿರ್(ರ) ರವರು ಸಹ ತಮ್ಮ ಖರ್ಚು ವೆಚ್ಚಗಳಿಗಾಗಿ ಸಾಲವನ್ನು ಪಡೆಯುತ್ತಿದ್ದರು. ಅದೇ ರೀತಿಯ ಒಂದು ಸಾಲದ ಬಗ್ಗೆ ಹದೀಸಿನಲ್ಲಿ ವರದಿ ಆಗಿದೆ. ಹಝ್ರತ್ ಜಾಬಿರ್(ರ) ರವರು ಒರ್ವ ಯಹೂದಿಗೆ ಹೇಳಿದರು ಈ ವರ್ಷ ನನ್ನ ಫಸಲು ಕಡಿಮೆ ಆಗಿದೆ. ಆದ್ದರಿಂದ ನನಗೆ ಸಾಲ ಮರುಪಾವತಿಸುವಲ್ಲಿ

لَا إِلٰهَ إِلَّا اللهُ مُحَمَّدٌ رَسُولُ اللهِ

ಸ್ವಲ್ಪ ಕಾಲವಕಾಶ ನೀಡಿರಿ ಎಂದು ಕೇಳಿಕೊಂಡರು ಆದರೆ ಆ ಯಹೂದಿ ಅದಕ್ಕೆ ಒಪ್ಪಲಿಲ್ಲ. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಇದ ಬಗ್ಗೆ ತಿಳಿದುಬಂದಾಗ ರಸೂಲುಲ್ಲಾಹ್(ಸ) ಅವತ್ತು ಆ ಯಹೂದಿಗೆ ಕಾಲವಕಾಶ ನೀಡಲು ಕೇಳಿಕೊಳ್ಳುತ್ತಾರೆ. ಆದರೂ ಆ ಯಹೂದಿ ಅದಕ್ಕೆ ಒಪ್ಪುವುದಿಲ್ಲ. ತದನಂತರ ಪ್ರವಾದಿ(ಸ) ರವರು ಹೇಗೆ ತಮ್ಮ ಸಹಾಬಿಯವರನ್ನು ಸಾಲ ಪಾವತಿಸಲು ವರ್ತಿಸಿದರು, ದುಆ ಮಾಡಿದರು, ಮತ್ತು ಹೇಗೆ ಅಲ್ಲಾಹನು ಕರುಣಿಸಿದನು, ಅದರ ಪ್ರಸ್ತಾವನೆ ಒಂದು ವರದಿಯಲ್ಲಿ ಹೀಗೆ ಬಂದಿದೆ:

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ವರದಿ ಮಾಡುತ್ತಾರೆ: ಮದೀನದಲ್ಲಿ ಒಬ್ಬ ಯಹೂದಿ ನನ್ನ ಖರ್ಜೂರದ ತೋಟದ ಹೊಸ ಬೆಳೆ ಹಣ್ಣಾಗುವ ತನಕ ನನಗೆ ಸಾಲ ಕೊಡುತ್ತಿದ್ದನು. ಒಂದು ಸಲ ಹಣ್ಣಿನ ಫಸಲು ಕಡಿಮೆಯಾಗಿತ್ತು. ಯಹೂದಿ ರೂಢಿ ಪ್ರಕಾರ ತನ್ನ ಸಾಲದ ವಸೂಲಿಗೆ ಬಂದನು. ನಾನು ಅವನೊಂದಿಗೆ ಇನ್ನೊಂದು ವರ್ಷದ ತನಕ ಸಾಲ ಮರುಪಾವತಿಗೆ ಕಾಲಾವಕಾಶವನ್ನು ಕೇಳಿದೆನು. ಆದರೆ ಆ ಯಹೂದಿ ನಿರಾಕರಿಸಿದನು. ಆ ವಿಷಯ ಪ್ರವಾದಿ ಮುಹಮ್ಮದ್ ಸಲ್ಲಲ್ಲಹು ಅಲೈಹಿವಸಲ್ಲಮರಿಗೆ ತಿಳಿದಾಗ ಅವರು ಸಹಾಬರೊಂದಿಗೆ ಹೇಳಿದರು: ನಾವು ಹೋಗಿ ಆ ಯಹೂದಿಯೊಂದಿಗೆ ಜಾಬಿರ್‌ಗೋಸ್ಕರ ಕಾಲಾವಕಾಶವನ್ನು ಅಪೇಕ್ಷಿಸೋಣ. ಹಾಗೆ ಪ್ರವಾದಿ ಮುಹಮ್ಮದ್ ಸಲ್ಲಲ್ಲಹು ಅಲೈಹಿವಸಲ್ಲಮರು ಕೆಲವು ಸಹಾಬರೊಂದಿಗೆ ನನ್ನ ತೋಟಕ್ಕೆ ಆಗಮಿಸಿದರು ಮತ್ತು ಯಹೂದಿಯರೊಂದಿಗೆ ಮಾತನಾಡಿದರು. ಆದರೆ ಯಹೂದಿ "ಓ ಅಬುಲ್ ಖಾಸಿಮ್ ನಾನು ಅವನಿಗೆ ಸಮಯಾವಕಾಶ ನೀಡಲಾರೆ" ಎಂದು ಹೇಳಿದನು. ಯಹೂದಿಯ ಈ ವರ್ತನೆಯನ್ನು ನೋಡಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಹು ಅಲೈಹಿವಸಲ್ಲಮರು ಖರ್ಜೂರದ ಮರಗಳ ಸುತ್ತಲೂ ತಿರುಗಾಡಿ ಮರಳಿ ಬಂದು ಯಹೂದಿಯೊಂದಿಗೆ ಪುನಃ ಮಾತನಾಡಿದರು. ಆದರೆ ಯಹೂದಿ ಅವರ ಮಾತನ್ನು ಪುನಃ ತಿರಸ್ಕರಿಸಿದನು. ಹಝ್ರತ್ ಜಾಬಿರ್ ಹೇಳುತ್ತಾರೆ: ಆ ಸಂದರ್ಭದಲ್ಲಿ ನಾನು ಖರ್ಜೂರದ ಕೆಲವು ಹಣ್ಣುಗಳನ್ನು ಕೊಯ್ದು ಪ್ರವಾದಿ ಮುಹಮ್ಮದ್ ಸಲ್ಲಲ್ಲಹು ಅಲೈಹಿವಸಲ್ಲಮರಿಗೆ ತಿನ್ನಲು ನೀಡಿದೆ. ಅವರು ಖರ್ಜೂರ ತಿಂದ ನಂತರ ಹೇಳಿದರು. ನಿಮ್ಮ ತೋಟದಲ್ಲಿ ಚಪ್ಪರವಿರುತ್ತಿತ್ತು ಅದು ಎಲ್ಲಿದೆ? ನಾನು ಅದಲ್ಲಿದೆ ಎಂದು ಹೇಳಿದಾಗ ಅವರು ಹೇಳಿದರು: ಅಲ್ಲಿ ಚಾಪೆ ಹಾಸಿರಿ ಅಲ್ಲಿ ನಾನು ಸ್ವಲ್ಪ ವಿಶ್ರಾಂತಿ ಪಡೆಯುವೆನು. ನಾನು ಅಲ್ಲಿ ಚಾಪೆ ಹಾಸಿದಾಗ ಅಲ್ಲಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಹು ಅಲೈಹಿವಸಲ್ಲಮರು ನಿದ್ರಿಸಿದರು. ಅವರು ನಿದ್ರೆಯಿಂದ ಎಚ್ಚರಗೊಂಡಾಗ ನಾನು ಪುನಃ ಅವರಿಗೆ ಒಂದು ಮುಷ್ಠಿ ತುಂಬಾ ಖರ್ಜೂರ ನೀಡಿದೆನು. ಅವರು ಅದರಿಂದ ಸ್ವಲ್ಪ ಕರ್ಜೂರ ತಿಂದರು. ಅನಂತರ ಎದ್ದು ನಿಂತು ಯಹೂದಿಯೊಂದಿಗೆ ಪುನಃ ಮಾತನಾಡಿದಾಗ ಅವರ ಮಾತನ್ನು ಯಹೂದಿ ಅಂಗೀಕರಿಸಲಿಲ್ಲ. ಆಗ ಪ್ರವಾದಿ ಮುಹಮ್ಮದ್ ಸಲ್ಲಲ್ಲಹು ಅಲೈಹಿವಸಲ್ಲಮರು ಪುನಃ ತೋಟದೊಳಗೆ ಸುತ್ತಾಡಿದರು. ಅನಂತರ ನನ್ನೊಂದಿಗೆ ಹೇಳಿದರು: ಜಾಬಿರ್(ರ), ಖರ್ಜೂರದ ಹಣ್ಣುಗಳನ್ನು ಕೊಯ್ಯಲು ಪ್ರಾರಂಬಿಸಿದಾಗ ಪ್ರವಾದಿ ಮುಹಮ್ಮದ್ ಸಲ್ಲಲ್ಲಹು ಅಲೈಹಿವಸಲ್ಲಮರು ಖರ್ಜೂರದ ಮರಗಳ ಮಧ್ಯೆ ನಿಂತಿದ್ದರು. ನಾನು ಖರ್ಜೂರದ ಹಣ್ಣುಗಳನ್ನು ಕೊಯ್ದು ಯಹೂದಿಯ ಸಾಲ ಸಂಪೂರ್ಣವಾಗಿ ಮರುಪಾವತಿ ಮಾಡಿದೆ. ಯಹೂದಿಯ ಸಾಲವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿದ ನಂತರ ಸ್ವಲ್ಪ ಖರ್ಜೂರ ಬಾಕಿಯಾಗಿ ಉಳಿದಿತ್ತು. ನಾನು ಪ್ರವಾದಿ ಮುಹಮ್ಮದ್ ಸಲ್ಲಲ್ಲಹು ಅಲೈಹಿವಸಲ್ಲಮರೊಂದಿಗೆ ಈ ಶುಭ ಸಮಚಾರ ಹೇಳಿದಾಗ ಅವರು ಹೇಳಿದರು: ನಾನು ಅಲ್ಲಾಹನ ಸಂದೇಶವಾಹಕನೆಂದು ಸಾಕ್ಷಿ ಹೇಳುತ್ತೇನೆ. (ಸಹೀಹ್ ಬುಖಾರಿ ಕುತಾಬುಲ್ ಅತ್‌ಇಮ ಬಾಬುರ್ರತ್ಬ್.. ಹದೀಸ್–5443, ಖುತ್‌ಬ ಜುಮುಅ 30–03–2018)

ಹಝ್ರತ್ ಜಾಬಿರ್(ರ) ಅವರಿಗೆ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಪ್ರೀತಿ ಮತ್ತು ಸಹಾನುಭೂತಿಯ ಇನ್ನೊಂದು ಘಟನೆ ಹೀಗಿದೆ: ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ಸ್ವತಃ ವರದಿ ಮಾಡುತ್ತಾರೆ: ನಾನು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗೆ ಒಂದು ಯುದ್ಧದಲ್ಲಿದ್ದೆ. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ನನ್ನ ಬಳಿ ಬಂದು ಕೇಳಿದರು ನಿನ್ನ ಒಂಟೆಗೆ ಏನಾಗಿದೆ ಅದು ಓಡುತ್ತಿಲ್ಲವಲ್ಲ ಎಂದು. ಅದಕ್ಕೆ ನಾನು ಹೇಳಿದೆ ಹುಝೂರ್!! ಇದು ನಡೆಯಲು ಅಸಮರ್ಥನಾಗಿದೆ. ಅದಕ್ಕೆ ಹುಝೂರ್(ಸ) ಅದರ ಮೇಲೇರಿ ಅದನ್ನು ಓಡಿಸಿದರು ಅದರೊಂದಿಗೆ ದುಆ ಮಾಡುತ್ತಿದ್ದರು ಎಲ್ಲಿಯ ತನಕ ಎಂದರೆ ಅದು ಅತೀ ವೇಗವಾಗಿ ಓಡಲು ಪ್ರಾರಂಭಿಸಿತು. ಅನಂತರ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಕೇಳಿದರು ಈಗ ನಿನ್ನ ಒಂಟೆ ಹೇಗಿದೆ? ಅದಕ್ಕೆ ನಾನು ಉತ್ತರಿಸಿದೆ ಹುಝೂರ್ ನಿಮ್ಮ ಅನುಗ್ರಹದಿಂದ ಮತ್ತು ದುಆವಿನಿಂದ ಅದು ಅತೀ ವೇಗವಾಗಿ ಚಲಿಸಲು ಪ್ರಾರಂಭಿಸಿದೆ. ಇದಕ್ಕೆ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು ಏನು ನೀವು ಇದನ್ನು ಮಾರುವಿರಾ? ಹಝ್ರತ್ ಜಾಬಿರ್(ರ) ಹೇಳುತ್ತಾರೆ: ನನ್ನ ಬಳಿ ನೀರು ತರಲು ಯಾವ ಒಂಟೆಯೂ ಇರಲಿಲ್ಲ ಆದರೂ ನಾನು ಸಂಕೋಚದಿಂದ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಈ ಒಂಟೆಯನ್ನು ಮಾರುವೆನು ಎಂದು ಹೇಳಿದೆ. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: ಸರಿ ಇದು ನನಗೆ ನೀಡಿರಿ. ನಾನು ಈ ಒಂಟೆಯನ್ನು ನಿಮಗೆ ಈ ಷರತ್ತಿನ ಮೇರೆಗೆ ಮಾರುತ್ತೇನೆ. ಅಂದರೆ ನಾನು ಇದರ ಮೇಲೇರಿ ಮದೀನದ ವರೆಗೆ ಹೋಗುವೆನು. ಪ್ರವಾಸದಲ್ಲಿ ನಾನು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಹೇಳಿದೆ ಹುಝೂರ್ ನಾನು ಹೊಸದಾಗಿ ವಿವಾಹನಾಗಿದ್ದೇನೆ. ಆದ್ದರಿಂದ ನಾನು ಬೇಗ ಮದೀನಕ್ಕೆ ಹೋಗಬೇಕೆಂದು ಬಯಸುತ್ತೇನೆ. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ನನಗೆ ಇದಕ್ಕೆ ಅವಕಾಶ ನೀಡಿದರು. ನಾನು ಅನ್ಯರಿಂದ ಮುಂಚಿತವಾಗಿ ಮದೀನಕ್ಕೆ ತಲುಪಿದೆ. ಮಾರ್ಗದಲ್ಲಿ ನನ್ನ ತಾಯಿಯ ಸಹೋದರ ಭೇಟಿಯಾದರು ಅವರು ಕೇಳಿದರು ನಿನ್ನ ಈ ಒಂಟೆ ಹೇಗೆ ಇಷ್ಟು ವೇಗವಾಗಿ ಚಲಿಸಲು ಪ್ರಾರಂಭಿಸಿದೆ ಎಂದು. ಆಗ ನಾನು ಎಲ್ಲಾ ವಿಷಯವನ್ನು ಅವರಿಗೆ ತಿಳಿಸಿದಾಗ ಅವರು ನನಗೆ ದೂಶಿಸಿದರು.

ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರಲ್ಲಿ ನಾನು ಮದೀನಕ್ಕೆ ಹೋಗುವುದಕ್ಕೆ ಅಪ್ಪಣೆ ಕೇಳಿದಾಗ ಹುಝೂರ್(ಸ) ಅವರು ನನಗೆ ಪ್ರಶ್ನಿಸಿದರು ನೀವು ಕುಮಾರಿಯನ್ನು ವಿವಾಹವಾಗಿದ್ದೀರ ಅಥವಾ ವಿಧವೆಯನ್ನು ವಿವಾಹವಾಗಿದ್ದೀರಿ ಅದಕ್ಕೆ ನಾನು ಉತ್ತರಿಸಿದೆ

*(ಉಳಿದ ಭಾಗ ಪುಟ ಸಂಖ್ಯೆ 17ರಲ್ಲಿ ಮುಂದುವರಿಸಲಾಗಿದೆ)*

# ಪ್ರವಾದಿ ಮುಹಮ್ಮದ್(ಸ)ರವರ ಉತ್ತುಂಗ ಸ್ಥಾನ ಪವಿತ್ರ ಖುರ್‌ಆನ್ ಹಾಗೂ ಹದೀಸಿನ ಬೆಳಕಿನಲ್ಲಿ

## ಪ್ರವಾದಿ(ಸ)ರವರ ಬೈಅತ್ ಅಲ್ಲಾಹನ ಬೈಅತ್ ಆಗಿದೆ

إِنَّ الَّذِينَ يُبَايِعُونَكَ إِنَّمَا يُبَايِعُونَ اللّٰهَ ؕ يَدُ اللّٰهِ فَوْقَ أَيْدِيهِمْ (الفتح:11)

ನಿನ್ನೊಡನೆ ನಿಷ್ಠೆಯ ಪ್ರತಿಜ್ಞೆಯನ್ನು (ಬೈಅತ್) ಮಾಡುವವರು ನಿಜವಾಗಿಯೂ ಅಲ್ಲಾಹನೊಡನೆಯೇ ನಿಷ್ಠೆಯ ಪ್ರತಿಜ್ಞೆ ಮಾಡುತ್ತಾರೆ. ಅವರ ಕೈಗಳ ಮೇಲೆ ಅಲ್ಲಾಹನ ಕೈಯಿದೆ.

## ಪ್ರಾವಾದಿ(ಸ)ರವರ ಕಾರ್ಯ ಅಲ್ಲಾಹನ ಕಾರ್ಯಗಳಾಗಿವೆ

وَمَا رَمَيْتَ إِذْ رَمَيْتَ وَلٰكِنَّ اللّٰهَ رَمٰى ۚ وَلِيُبْلِيَ الْمُؤْمِنِينَ مِنْهُ بَلَاءً حَسَنًا ؕ إِنَّ اللّٰهَ سَمِيعٌ عَلِيمٌ (انفال:18)

ನೀನು ಎಸೆದಾಗ ನೀನಲ್ಲ ಎಸೆದದ್ದು, ಬದಲು ಅಲ್ಲಾಹನು ಎಸೆದದ್ದು. ಆ ಮೂಲಕ ಅವನು (ಶತ್ರುಗಳನ್ನು ಪರಾಭಯಗೊಳಿಸಿ) ಸತ್ಯವಿಶ್ವಾಸಿಗಳನ್ನು ತನ್ನ ಕಡೆಯಿಂದ ಒಂದು ಉತ್ತಮ ಪರೀಕ್ಷೆಗೊಳಪಡಿಸಲಿಕ್ಕಾಗಿ. ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲವನ್ನು ಕೇಳುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ.

## ಪ್ರಾವಾದಿ(ಸ)ರವರಿಗೆ ವಿಧೇಯವಾಗುವುದು ಅಲ್ಲಾಹನ ವಿಧೇಯ ಆಗಿದೆ

مَنْ يُّطِعِ الرَّسُوْلَ فَقَدْ أَطَاعَ اللّٰهَ ۚ وَمَنْ تَوَلّٰى فَمَا أَرْسَلْنٰكَ عَلَيْهِمْ حَفِيظًا (النساء:81)

ಯಾರು ಈ ಸಂದೇಶವಾಹಕನನ್ನು ಅನುಸರಿಸುತ್ತಾನೋ, ನಿಶ್ಚಯವಾಗಿಯೂ ಅವನು ಅಲ್ಲಾಹನನ್ನು ಅನುಸರಿಸಿದನು (ಎಂದು ತಿಳಿದುಕೋ). ಯಾರು ಹಿಂತಿರುಗಿ ಹೋಗುತ್ತಾರೋ, ಅವರ ಮೇಲೆ ನಾವು ನಿನ್ನನ್ನು ಕಾವಲುಗಾರನಾಗಿ ನಿಯೋಜಿಸಿಲ್ಲ (ಎಂದು ನೆನಪಿರಲಿ).

## ಪ್ರಾವಾದಿ(ಸ)ರವರ ಪದವಿಯು ಖಾಬೆ ಕೌಸೈನ್ ಆಗಿದೆ

فَكَانَ قَابَ قَوْسَيْنِ أَوْ أَدْنٰى (النجم:10)

ಹಾಗೆ ಅಲ್ಲಾಹನಿಗೆ ಅವರು (ಪ್ರವಾದಿ) ಎರಡು ಬಿಲ್ಲುಗಳಿಗೆ ಒಂದೇ ದಾರದಂತೆ ಅಥವಾ ಅದಕ್ಕಿಂತಲೂ ಸಮೀಪವಾದರು.

## ಸ್ಪಷ್ಟವಾದೊಂದು ಪ್ರಕಾಶ

يٰۤأَيُّهَا النَّاسُ قَدْ جَآءَكُمْ بُرْهَانٌ مِّنْ رَّبِّكُمْ وَأَنْزَلْنَآ إِلَيْكُمْ نُوْرًا مُّبِيْنًا (النساء:175)

ಎಲೈ ಜನರೇ, ನಿಮಗೆ ನಿಮ್ಮ ಪ್ರಭುವಿನ ಕಡೆಯಿಂದ ಸ್ಪಷ್ಟವಾದೊಂದು ಪುರಾವೆ ಬಂದಿರುತ್ತದೆ. ನಾವು ನಿಮಗೆ ಸ್ಪಷ್ಟವಾದೊಂದು ಪ್ರಕಾಶವನ್ನು ಸಹ ಇಳಿಸಿ ಕೊಟ್ಟಿದ್ದೇವೆ.

يٰۤأَهْلَ الْكِتٰبِ قَدْ جَآءَكُمْ رَسُوْلُنَا يُبَيِّنُ لَكُمْ كَثِيْرًا مِّمَّا كُنْتُمْ تُخْفُوْنَ مِنَ الْكِتٰبِ وَيَعْفُوْا عَنْ كَثِيْرٍ ۬ؕ قَدْ جَآءَكُمْ مِّنَ اللّٰهِ نُوْرٌ وَّكِتٰبٌ مُّبِيْنٌ (المائده:16)

ಎಲೈ ಗ್ರಂಥದವರೇ, ಗ್ರಂಥದಲ್ಲಿ ನೀವು ಮರೆಮಾಚಿಟ್ಟಿದ್ದ ಅನೇಕ ವಿಚಾರಗಳನ್ನು ನಿಮಗೆ ಬಹಿರಂಗಪಡಿಸುವ ಮತ್ತು ಹಲವು ಸಂಗತಿಗಳನ್ನು (ನಿಮಗೆ) ಕ್ಷಮಿಸಿಕೊಡುವ ನಮ್ಮ ಸಂದೇಶವಾಹಕ ನಿಮ್ಮೆಡೆಗೆ ಬಂದಿದ್ದಾರೆ. ನಿಶ್ಚಯವಾಗಿಯೂ ಅಲ್ಲಾಹನಿಂದ ಒಂದು ಪ್ರಕಾಶ ಮತ್ತು ಸ್ಪಷ್ಟವಾದೊಂದು ಗ್ರಂಥ ನಿಮಗೆ ಬಂದಿರುತ್ತದೆ.

نُوْرٌ عَلٰى نُوْرٍ ؕ يَهْدِى اللّٰهُ لِنُوْرِهٖ مَنْ يَّشَآءُ ؕ وَيَضْرِبُ اللّٰهُ الْأَمْثَالَ لِلنَّاسِ ؕ وَاللّٰهُ بِكُلِّ شَيْءٍ عَلِيْمٌ (النور:36)

ಪ್ರಕಾಶದ ಮೇಲೆ ಪ್ರಕಾಶ. ಅಲ್ಲಾಹನು ತಾನಿಚ್ಛಿಸುವವರನ್ನು ತನ್ನ ಪ್ರಕಾಶದ ಕಡೆಗೆ ಕೊಂಡೊಯ್ಯುತ್ತಾನೆ. ಜನರಿಗೋಸ್ಕರ ಅಲ್ಲಾಹನು ಉಪಮೆಗಳನ್ನು ನೀಡುತ್ತಾನೆ. ಅಲ್ಲಾಹನು ಎಲ್ಲ ವಿಚಾರಗಳನ್ನು ಬಲ್ಲವನಾಗಿದ್ದಾನೆ.

## ರಸೂಲುಲ್ಲಾಹ್(ಸ) ಅತ್ಯಮತ ಅನುಕಂಪ ಹೊಂದಿದವರು, ಮೃದು ಸ್ವಭಾವ ಮತ್ತು ಸಹನಶೀಲರಾಗಿದ್ದರು.

عَنْ أَبِي سَعِيدٍ الْخُدْرِيِّ رَضِيَ اللّٰهُ عَنْهُ أَنَّ رَسُوْلَ اللّٰهِ صَلَّى اللّٰهُ عَلَيْهِ وَسَلَّمَ كَانَ يَعْلِفُ الْبَعِيرَ وَيُقِيمُ الْبَيْتَ وَيَخْصِفُ النَّعْلَ وَيَرْقَعُ الثَّوْبَ وَيَحْلِبُ الشَّاةَ وَيَأْكُلُ مَعَ الْخَادِمِ وَيَطْحَنُ مَعَهُ إِذَا أَعْيَا وَكَانَ لَا يَمْنَعُهُ الْحَيَاءُ أَنْ يَحْمِلَ بِضَاعَتَهُ مِنَ السُّوقِ إِلَى أَهْلِهِ وَكَانَ يُصَافِحُ الْغَنِيَّ وَالْفَقِيرَ وَيُسَلِّمُ مُبْتَدِيًا وَلَا يَحْتَقِرُ مَا دُعِيَ إِلَيْهِ وَلَوْ إِلَى حَشَفِ التَّمْرِ وَكَانَ هَيِّنَ الْمُؤْنَةِ لَيِّنَ الْخُلُقِ كَرِيمَ الطَّبِيعَةِ جَمِيلَ الْمُعَاشَرَةِ طَلِقَ الْوَجْهِ بَسَّامًا مِنْ غَيْرِ ضَحِكٍ مَحْزُونًا مِنْ غَيْرِ عُبُوسَةٍ مُتَوَاضِعًا مِنْ غَيْرِ مَذَلَّةٍ جَوَّادًا مِنْ غَيْرِ سَرَفٍ رَقِيقَ الْقَلْبِ رَحِيمًا بِكُلِّ مُسْلِمٍ لَمْ يَتَجَشَّأْ قَطُّ مِنْ شَبَعٍ وَلَمْ يَمُدَّ يَدَهُ إِلَى طَمَعٍ۔

ಹಝ್ರತ್ ಅಬೂ ಸಯೀದ್ ಖುದ್ರಿ(ರ) ವರದಿ ಮಾಡುತ್ತಾರೆ. ಹಝ್ರತ್ ರಸೂಲುಲ್ಲಾಹ್(ಸ) ಅವರ ಜೀವನ ತುಂಬ ಸರಳವಾಗಿತ್ತು. ಅವರಿಗೆ(ಸ) ಯಾವ ಕೆಲಸದಲ್ಲಿಯೂ ಕೀಳರಿಮೆ ಇರಲಿಲ್ಲ. ತನ್ನ ಒಂಟೆಗೆ ಸ್ವಯಂ ಮೇವು ಹಾಕುತ್ತಿದ್ದರು. ಮನೆ ಕೆಲಸ ಕಾರ್ಯಗಳು ಮಾಡುತ್ತಿದ್ದರು. ತನ್ನ ಪಾದರಿಕ್ಷೆಗಳನ್ನು ತಾವೇ ದುರಸ್ತಿ ಮಾಡಿಕೊಳ್ಳುತ್ತಿದ್ದರು. ಬಟ್ಟೆಯ ಮೇಲೆ ತೇಪೆ ಹಾಕಿಕೊಳ್ಳುತ್ತಿದದರು. ಆಡುಗಳ ಹಾಲು ಕರೆಯುತ್ತಿದ್ದರು. ಸೇವಕರನ್ನು ತನ್ನ ಜೊತೆಯಲ್ಲಿ ಕುಳ್ಳರಿಸಿಕೊಂಡು ಊಟ ಮಾಡುತ್ತಿದ್ದರು. ಹಿಟ್ಟು ಬೀಸುತ್ತ ಬೀಸುತ್ತ ಅವನು ದಣಿದುಕೊಂಡರೆ ಅವನಿಗೆ ಸಹಾಯ ಮಾಡುತ್ತಿದ್ದರು. ಪೇಟೆಯಿಂದ ಮನೆಯ ಸಾಮಗ್ರಿಗಳನ್ನು ಹೊತ್ತುಕೊಂಡು ಬರಲು ನಾಚುತ್ತಿರಲಿಲ್ಲ. ಬಡವ ಸಿರಿಮಂತ ಎಲ್ಲರೊಂದಿಗೆ ಹಸ್ತಲಾಘವ ಮಾಡುತ್ತಿದ್ದರು. ಸಹಾಯ ಮಾಡಲು ಮೊದಲಾಗುತ್ತಿದ್ದರು. ಯಾರೇ ಆಗಲಿ ಖರ್ಜೂರದ ಔತಣ ನೀಡಿದರು ಅದನ್ನು ಕೀಳೆಂದು ಭಾವಿಸದೇ ಸ್ವೀಕರಿಸುತ್ತಿದ್ದರು. ರಸೂಲುಲ್ಲಾಹ್(ಸ) ಅತ್ಯಮತ ಅನುಕಂಪ ಹೊಂದಿದವರು, ಮೃದು ಸ್ವಭಾವ ಮತ್ತು ಸಹನಶೀಲರಾಗಿದ್ದರು. ಅವರ ಜೀವನ ಕ್ರಮವು ಅತ್ಯಂತ ಶುದ್ಧಮಯವಾಗಿತ್ತು. ನಗುಮುಖದಿಂದ ವರ್ತಿಸುತ್ತಿದ್ದರು. ಯಾವಾಗಲೂ ಅವರ(ಸ) ಮುಖದ ಮೇಲೆ ಮುಗುಳ್ನಗೆ ರಾರಾಜಿಸುತ್ತಿತ್ತು. ಅವರು ಬಿದ್ದು ಬಿದ್ದು ನಗುತ್ತಿರಲಿಲ್ಲ. ಅಲ್ಲಾಹನ ಭಯ ಮತ್ತು ಚಿಂತನೆಯುಳ್ಳವರಾಗಿದ್ದರು. ಆದರೆ ದುರ್ವರ್ತನೆ ಅಥವಾ ನಿರಾಸಕ್ತಿಯ ಭಾವ ತೋರುತ್ತಿರಲಿಲ್ಲ. ನಯ ವಿನಯದ ಗುಣ ಹೊಂದಿದವರಾಗಿದ್ದರು. ಆದರೆ ಅವರಲ್ಲಿ ಯಾವುದೇ ದೌರ್ಬಲ್ಯ, ಅಸಮರ್ಪಕತೆಯಿರಲಿಲ್ಲ. ಅತ್ಯಂತ ಉದಾರಿ ಸ್ವಭಾವದವರಾಗಿದ್ದರು. ಆದರೆ ದುಂದುವೆಚ್ಚ ಮಾಡುತ್ತಿರಿಲ್ಲ. ಮೃದು ಹೃದಯ, ದಯವಂತರು ಹಾಗೂ ಕರುಣೆಯುಳ್ಳವರಾಗಿದ್ದರು. ಪ್ರತಿ ಮುಸ್ಲಿಮರೊಂದಿಗೆ ಪ್ರೀತಿಯಿಂದ ವ್ಯವಹರಿಸುತ್ತಿದ್ದರು. ಜೀರ್ಣವಾಗುವ ಸ್ಥಿರ ಮಟ್ಟಿಗೆ ಹೊಟ್ಟೆ ತುಂಬಾ ಊಟ ಮಾಡುತ್ತಿರಲಿಲ್ಲ. ಆಸೆಪಟ್ಟು ಕೈ ಚಾಚುತ್ತಿರಲಿಲ್ಲ. ಬದಲು ತಾಳ್ಮೆ, ಕೃತಜ್ಞರು ಮತ್ತು ಇದ್ದದ್ದಲ್ಲಿ ಸಂತೃಪ್ತರಾಗಿದ್ದರು. **(ಉಸದುಲ್‌ಗಾಬ ಸಂಪುಟ–1, ಪುಟ–29, ಖಷೀರಿಯ ಪುಟ–75, ಅಶ್ಶಿಫಾ ಸಂಪುಟ–1, ಪುಟ–77, ಹದೀಖತುಸಾಲಿಹೀನ್ ಹದೀಸ್–43)**

## ನೀವು ನಮಾಝಿನಲ್ಲಿ ದುಆ ಮಾಡಬೇಕಾದರೆ ಮೊದಲು ಅಲ್ಲಾಹನ ಸ್ತುತಿಗೈಯಿರಿ ಮತ್ತು ನಬಿ ಕರೀಮ್(ಸ) ರವರ ಮೇಲೆ ದುರೂದ್ ಕಳುಹಿಸಿರಿ.

عَنْ فَضَالَةَ بْنِ عُبَيْدٍ رَضِيَ اللّٰهُ عَنْهُ قَالَ : سَمِعَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ رَجُلًا يَدْعُوْ فِيْ صَلٰوتِهٖ لَمْ يُمَجِّدِ اللّٰهَ تَعَالٰى ، وَلَمْ يُصَلِّ عَلَى النَّبِيِّ صَلَّى اللّٰهُ عَلَيْهِ وَسَلَّمَ فَقَالَ رَسُوْلُ اللّٰهِ صَلَّى اللّٰهُ عَلَيْهِ وَسَلَّمَ : عَجِلَ هٰذَا ثُمَّ دَعَاهُ فَقَالَ لَهٗ ۔ أَوْ لِغَيْرِهٖ ۔ إِذَا صَلّٰى أَحَدُكُمْ فَلْيَبْدَأْ بِتَحْمِيْدِ رَبِّهٖ سُبْحَانَهٗ وَالثَّنَاءِ عَلَيْهِ ثُمَّ يُصَلِّيْ عَلَى النَّبِيِّ صَلَّى اللّٰهُ عَلَيْهِ وَسَلَّمَ ثُمَّ يَدْعُوْ بَعْدُ بِمَا شَاءَ۔

ಹಝ್ರತ್ ಫಝಾಲ(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲುಲ್ಲಾಹ್(ಸ) ಓರ್ವ ವ್ಯಕ್ತಿಯನ್ನು ನಮಾಝಿನಲ್ಲಿ ದುಆ ಮಾಡುತ್ತಿದ್ದನ್ನು ಕೇಳಿದರು. ಅವನು ಅಲ್ಲಾಹನನ್ನು ಸ್ತುತಿಸಿರಲಿಲ್ಲ ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ದುರೂದೂ ಕಳುಹಿಸುತ್ತಿರಲಿಲ್ಲ. ಆಗ ರಸೂಲುಲ್ಲಾಹ್(ಸ) ಹೇಳಿದರು: ಅವನು ಅವಸರಪಡುತ್ತಿದ್ದಾನೆ ಮತ್ತು ಸರಿಯಾದ ರೀತಿಯಲ್ಲಿ ದುಆ ಮಾಡಲಿಲ್ಲ. ಅವರು(ಸ) ಆತನನ್ನು ಕರೆದು ಹೀಗೆ ಹೇಳಿದರು: ನಿಮ್ಮಲ್ಲಿ ಯಾರೊಬ್ಬರು ನಮಾಝಿನಲ್ಲಿ ದುಆ ಮಾಡಲು ಹೊರಟರೆ ಮೊದಲು ತನ್ನ ಪರಿಪಾಲಕನಾದ ಅಲ್ಲಾಹನ ಸ್ತುತಿಗೈಯಿರಿ, ಮತ್ತು ನಬಿ ಕರೀಮ್(ಸ)ರವರ ದುರೂದ್ ಕಳುಹಿಸಬೇಕು ಅನಂತರ ಬಯಕೆ ಅನುಸಾರವಾಗಿ ದುಆ ಮಾಡಬೇಕು. **(ಅಬೂ ದಾವೂದ್ ಕಿತಾಬುಸ್ಸಲಾತ್ ಬಾಬುದ್ದುಆ)**

## ಹಝ್ರತ್ ರಸೂಲುಲ್ಲಾಹ್(ಸ) ತನ್ನ ಆಧ್ಯಾತ್ಮಿಕ ಪರಿಶುದ್ಧತೆ ಹಾಗೂ ಹೃದಯ ವೈಶಾಲ್ಯ ಮತ್ತು ಮಾನ, ಲಜ್ಜೆ, ಸಂತ್ಯಸಂಧತೆ, ಅಲ್ಲಾಹನ ಮೆಲೆ ಭರವಸೆ, ನಿದ್ದೆ ಹಾಗೂ ದೈವಿಕ ಪ್ರೇಮದ ಎಲ್ಲ ಗುಣಗಳಲ್ಲಿಯೂ ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಅನುಗ್ರಹಿತ ಉನ್ನತ ಮಹೋನ್ನತ, ಪ್ರಾವಿಣ್ಯತೆ, ಶ್ರೇಷ್ಠ ಹಾಗೂ ಗೌರಾವಾನ್ವಿತ ಸ್ಥಾನ ಹೊಂದಿದ್ದರು.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆ

### ಮಹೋನ್ನತ ದರ್ಜೆಯ ಆಧ್ಯಾತ್ಮಿಕ ಪರಿಶುದ್ಧತೆಯುಳ್ಳ ಪ್ರವಾದಿ

ಹಝ್ರತ್ ಖಾತಮಲ್ ಅಂಬಿಯಾದವರ ದೃಷ್ಟಾಂತಗಳನ್ನು ಅವಲೋಕಿಸಿದರೆ ಈ ವಿಷಯ ಬಹು ಸ್ಪಷ್ಟವಾಗುತ್ತದೆ ಮತ್ತು ಪ್ರಕಾಶಗೊಳ್ಳುತ್ತದೆ. ಹಝ್ರತ್ ರಸೂಲುಲ್ಲಾಹ್(ಸ) ಮಹೋನ್ನತ ದರ್ಜೆಯ ಆಧ್ಯಾತ್ಮಿಕ ಪರಿಶುದ್ಧಿಯುಳ್ಳವರು ಮತ್ತು ಅಲ್ಲಾಹನನ್ನು ಸಮಿಪಿಸುವವರು ಮತ್ತು ಮಾನವ ಭಯ ಲಾಲಸೆಗಳಿಂದ ಮುಕ್ತರು, ಅಲ್ಲಾಹನ ಮೇಲೆ ಮಾತ್ರ ಭರವಸೆಯುಳ್ಳವರಾಗಿದ್ದರು. ಅವರು ಅಲ್ಲಾಹನ ಸಂಪ್ರೀತಿ ಸಂತುಷ್ಟಿಗೋಸ್ಕರ ಎಂದೂ ಈ ಮಾತುಗಳನ್ನು ಗಣನಗೆಗೆ ತೆಗೆದುಕೊಳ್ಳಲಿಲ್ಲ. ಏಕದೇವತ್ವ ಪ್ರಚಾರದಲ್ಲಿ ಏನೆಲ್ಲ ಆಪತ್ತುಗಳು ನನ್ನ ಮೇಲೆ ಎರಗಿರಬಹುದು ಮತ್ತು ಬಹುದೇವಾರಾಧಕರಿಂದ ಏನೆಲ್ಲ ಹಿಂಸೆ ದು:ಖಗಳನ್ನು ಎದುರಿಸಲಾಗುವುದು. ಅದಾಗ್ಯೂ ಆ ಎಲ್ಲ ಆತಂಕಗಳನ್ನು ಕಠಿಣತೆಗಳನ್ನು ಮತ್ತು ಉಪದ್ರವಗಳನ್ನು ಸಹಿಸಿಕೊಂಡು ತನ್ನ ಪ್ರಭುಗೆ ನಿಷ್ಠರಾಗಿದ್ದರು. ಯಾವ್ಯಾವ ಆರಾಧನೆ, ಉಪದೇಶ ಮತ್ತು ಆದೇಶಗಳಿದ್ದವು ಅವೆಲ್ಲ ಪಾಲಿಸಿದರು. ಯಾರ ಭಯ ದೌರ್ಜನ್ಯಗಳಿಗೆ ಕಿವಿಗೊಡಲಿಲ್ಲ. ನಾನು ಸತ್ಯವಾಗಿ ಹೆಳುತ್ತೇನೆ. ಎಲ್ಲಾ ನಬಿಗಳ ದೃಷ್ಟಾಂತಗಳಲ್ಲಿ ಇಂತಹ ಘಟನೆಗಳು ಅಪಾಯಗಳು ಎದುರಾಗಲಿಲ್ಲ. ಈ ಪರಿಯ ಅಲ್ಲಾಹನ ಮೇಲೆ ಭರವಸೆ ಹೊಂದಿದವರು, ಬಹುದೇವತಾರಾಧನೆ ಮತ್ತು ಸೃಷ್ಟಿಗಳ ಪೂಜೆಗಳಿಂದ ತಡೆಯುವವನು ಮತ್ತು ಅಷ್ಟೆಲ್ಲ ಶತ್ರುಗಳನ್ನು ಎದುರಿಸಿ ದೃಢತೆ, ಸಹಿಷ್ಣುತೆ ತೋರುವವರು ಒಬ್ಬರೂ ಸಹ ಕಂಡು ಬಂದಿಲ್ಲ.

ಆದುದರಿಂದ ನ್ಯಾಯಸಮ್ಮತವಾಗಿ ಯೋಚಿಸಿ ಆ ಎಲ್ಲ ಪರಿಸ್ತಿತಿಗಳು ಹಝ್ರತ್ ರಸೂಲುಲ್ಲಾಹ್(ಸ) ಅವರ ಸತ್ಯತೆಗೆ ಹೇಗೆ ಸಾಕ್ಷ್ಯ ವಹಿಸಿವೆ ಎಂಬುದು. ಅದಾಗ್ಯೂ ಬುದ್ಧಿಜೀವಿ ಎನಿಸಿಕೊಳ್ಳುವವರು ಹಝ್ರತ್ ರಸೂಲುಲ್ಲಾಹ್(ಸ) ರವರು ಆಗಮಿಸಿದ ಕಾಲ ಹೇಗಿತ್ತು ಎಂಬುದನ್ನು ಪರಿಶೀಲಿಸಿ ನೋಡಲಿ. ಆ ಕಾಲವು ಓರ್ವ ಶ್ರೇಷ್ಠ ಸುಧಾರಕ, ದೈವಿಕ ಸುಧಾರಕರನ್ನು ಬಯಸುವ ಕಾಲವಾಗಿತ್ತು. ಅವರಿಗೆ ನೀಡಲಾದ ಶಿಕ್ಷಣವು ವಾಸ್ತವವಾಗಿಯೂ ಆ ಕಾಲಕ್ಕೆ ಅಗತ್ಯವಾಗಿರುವಂತಿತ್ತು. ಅಲ್ಲದೆ ಎಲ್ಲಾ ಕಾಲಗಳಿಗೆ ಅನುಗುಣವಾಗಿ ಬೇಕಾಗಿರುವ ಅಗತ್ಯಗಳಿಗೆ ಪೂರೈಸುವಂತಿತ್ತು. ಆ ಶಿಕ್ಷಣವು ಪರಿಣಾಮ ಬೀರಿದ ಪರಿಸ್ಥಿತಿಗಳನ್ನು ನಾವು ಕಾಣಬಹುದು. ಅದೇನೆಂದರೆ ಲಕ್ಷಾಂತರ ಹೃದಯಗಳನ್ನು ಸತ್ಯ ಹಾಗೂ ಸನ್ಮಾರ್ಗದತ್ತ ಸೆಳೆಯಿತು ಮತ್ತು ಅವರ ಎದೆಗೂಡಿನಲ್ಲಿ "ಲಾ ಇಲಾಹ್ ಇಲ್ಲಲ್ಲಾಹ್" (ಅಲ್ಲಾಹನ ಹೊರತು ಯಾರೂ ಆರಾಧ್ಯರಲ್ಲ) ಅಚ್ಚು ಹಾಕಿತು. ಅದುವೇ ಪ್ರವಾದಿತ್ವದ ಧ್ಯೇಯವಾಗಿದೆ. ಅಂದರೆ ಮುಕ್ತಿಗೋಸ್ಕರ ಬೇಕಾದ ತತ್ವ ಶಿಕ್ಷಣವನ್ನು ಅತ್ಯಂತ ಶಿಖರಕ್ಕೆ ಮುಟ್ಟಿಸಿದ ಕೀರ್ತಿ ದೃಷ್ಟಿ ಹಾಯಿಸಿ ನೋಡಿದರೆ ಸಹಜವಾಗಿ ಮನಸ್ಸು ಸಾಕ್ಷಿ ನೀಡುತ್ತದೆ. ಹಝ್ರತ್ ರಸೂಲುಲ್ಲಾಹ್(ಸ) ಅವಶ್ಯವಾಗಿಯೂ ಅಲ್ಲಾಹನ ಕಡೆಯಿಂದ ಬಂದ ಸತ್ಯ ಮಾರ್ಗದರ್ಶಕರಾಗಿದ್ದಾರೆಂದು. ದ್ವೇಷ ಹಟಮಾರಿತನ ಹೊಂದಿದ ವ್ಯಕ್ತಿಗಳ ಆ ರೋಗಕ್ಕೆ ಮದ್ದು ಇರುವುದಿಲ್ಲ. ಅವರಲ್ಲಿದ್ದ ಸಾಕ್ಷ್ಯಗಳು ಇನ್ಯಾವುದೆ ನಬಿಗಳಲ್ಲಿದ್ದರೆ ಸಾಬೀತು ಮಾಡಿ ತೋರಿಸಿದರೆ ನಾವು ತಿಳಿಯುವವರಾಗಿರುತ್ತೇವೆ. (ಬರಾಹೀನ್ ಅಹ್ಮದಿಯಾ ರೂಹಾನಿ ಖಝಾಯೀನ್, ಸಂಪುಟ–1, ಪುಟ–111).

### ಹಝ್ರತ್ ರಸೂಲುಲ್ಲಾಹ್(ಸ) ರವರ ಎದೆಗೂಡಿನ ಹೃದಯವು ಎಲ್ಲ ಆದಿ ಅಂತ್ಯದವರ ಎದೆ ಹೃದಯಗಳಿಂದಲೂ ಅಪ್ರತಿಮ, ಪರಿಶುದ್ಧ, ಮುಗ್ಧ ಹಾಗೂ ಅಪ್ರತಿಮ ಪ್ರಕಾಶಮಯವಾಗಿತ್ತು.

ಏಕೆಂದರೆ ಹಝ್ರತ್ ರಸೂಲುಲ್ಲಾಹ್(ಸ) ತನ್ನ ಆಧ್ಯಾತ್ಮಿಕ ಪರಿಶುದ್ಧತೆ ಹಾಗೂ ಹೃದಯ ವೈಶಾಲ್ಯ ಮತ್ತು ಮಾನ, ಲಜ್ಜೆ, ಸತ್ಯಸಂಧತೆ ಅಲ್ಲಾಹನ ಮೇಲೆ ಭರವಸೆ, ನಿಷ್ಠೆ ಹಾಗೂ ದೈವಿಕ ಪ್ರೇಮದ ಎಲ್ಲ ಗುಣಗಳಲ್ಲಿಯೂ ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಅನುಗ್ರಹಿತ, ಉನ್ನತ ಮಹೋನ್ನತ, ಪ್ರಾವಿಣ್ಯತೆ, ಶ್ರೇಷ್ಠ ಹಾಗೂ ಗೌರವಾನ್ವಿತ ಸ್ಥಾನ ಹೊಂದಿದ್ದರು. ಆದುದರಿಂದ ಅಲ್ಲಾಹನು ಅವರಿಗೆ ಸುಗಂಧಮಯ ವಿಶಿಷ್ಠ ಮಹೋನ್ನತ ಗುಣಗಳಿಂದ ಎಲ್ಲರಿಗಿಂತ ಅಧಿಕ ಸುಗಂಧಿಸಿದನು. ಅವರ ಎದೆಗೂಡು ಮತ್ತು ಹೃದಯವು ಎಲ್ಲ ಆದಿ ಅಂತ್ಯದವರ ಎದೆ ಹೃದಯಗಳಿಂದಲೂ ಅಪ್ರತಿಮ ವೈಶಾಲ್ಯ, ಪರಿಶುದ್ಧ, ಮುಗ್ದ ಹಾಗೂ ಅಪ್ರತಿಮ ಪ್ರಕಾಶಮಯವಾಗಿತ್ತು. ಆದುದರಿಂದ ಅವರು ಎಲ್ಲಾ ಆದಿ ಅಂತ್ಯದವರಲ್ಲಿ ಉಂಟಾದ ವಹಿ (ದೇವಾವಾಣಿ) ಗಿಂತ ಶಕ್ತಿಯುತ, ಪ್ರಾವಿಣ್ಯತೆ ಹೊಂದಿದ ಶ್ರೇಷ್ಠ, ಪರಿಪೂರ್ಣ ದೈವಿಕ ಗುಣಗಳನ್ನು ಪ್ರದರ್ಶಿಸುವ ಒಂದು ಅತ್ಯಂತ ಸ್ವಚ್ಛ ಮತ್ತು ವಿಶಾಲ ಕನ್ನಡಿಯಂತಾದರು. ಅದೇ ಕಾರಣದಿಂದ ಪವಿತ್ರ ಖುರ್‌ಆನ್ ಮಹೋನ್ನತವಾದ ಅನುಗ್ರಹಗಳನ್ನು ಹೊಂದಿದೆ. ಅದರ ತೀಕ್ಷ್ಣವಾದ ಬೆಳಕು ಮತ್ತು ಉಜ್ವಲ ಕಿರಣಗಳ ಮುಂದೆ ಎಲ್ಲಾ ಗತಕಾಲದ ಗ್ರಂಥಗಳ ಪ್ರಕಾಶ ಕುಂದಿ ಹೋಗಿವೆ. (ಸುರ್ಮ ಚಶ್ಮೆ ಆರಿಯಾ, ರೂಹಾನಿ ಖಝಾಯೀನ್, ಸಂಪುಟ–2, ಪುಟ–71)

### ಹಝ್ರತ್ ರಸೂಲುಲ್ಲಾಹ್(ಸ) ರವರ ಶಾಶ್ವತ ಜೀವನಕ್ಕಿರುವ ಒಂದು ಪ್ರಬಲ ಸಾಕ್ಷ್ಯ

ಹಝ್ರತ್ ರಸೂಲುಲ್ಲಾಹ್(ಸ) ರವರ ಶಾಶ್ವತ ಜೀವನಕ್ಕಿರುವ ಒಂದು ಪ್ರಬಲವಾದ ಸಾಕ್ಷ್ಯವೆಂದರೆ ಅವರ ಅನುಗ್ರಹಗಳು ನಿರಂತರವಾಗಿ ಜಾರಿಯಲ್ಲಿವೆ. ಯಾವನೋ ವ್ಯಕ್ತಿ ಈ ಕಾಲದಲ್ಲಿಯೂ ರಸೂಲುಲ್ಲಾಹ್(ಸ) ರವನ್ನು ಅನುಸರಿಸುವುದಾದರೆ ನಿಸ್ಸಂದೇಹವಾಗಿಯು ಅವನು ಗೋರಿಯಿಂದ ಎತ್ತಿಸಲ್ಪಡುವವನು ಮತ್ತು ಒಂದು ಹೊಸ ಆಧ್ಯಾತ್ಮಿಕ ಜೀವನ ಪಡೆಯುವವನಾಗುವನು. ಕೇವಲ ಕಾಲ್ಪನಿಕವಾಗಿ ಅಲ್ಲ ಬದಲು ಸತ್ಯ ಸಾಕ್ಷ್ಯಗಳು ಒದಗಿ ಬರುವುವು ಮತ್ತು ದೈವಿಕ ನೆರವು ಹಾಗೂ ದೈವಿಕ ಅನುಗ್ರಹಗಳು ಮತ್ತು ರೂಹುಲ್ ಖುದುಸ್ ಜಿಬ್ರೀಲ್ ಸಹಕಾರ ಅವನಿಗೆ ದೊರೆಯುವುದು. ಅವನು ಲೋಕದ ಎಲ್ಲ ಮಾನವರಲ್ಲಿ ಒಂದು ವಿಶಿಷ್ಠವಾದ ಮಾನವನಾಗುವನು. ಅಲ್ಲಾಹನ ದಿವ್ಯವಾಣಿ ಅವನಿಗೆ ದೊರೆಯುವುದು. ತನ್ನ ವಿಶೇಷವಾದ ರಹಸ್ಯಗಳು ಅವನಿಗೆ ಗೋಚರವಾಗುವಂತೆ ದಯಪಾಲಿಸುವನು. ತನ್ನ ವಿಶೇಷವಾದ ಜ್ಞಾನ ಸಾಕ್ಷ್ಯಗಳನ್ನು ಅನಾವರಣಗೊಳಿಸವನು. ತನ್ನ ಪ್ರೀತಿ ದಯಪಾಲಿಸುವಿಕೆಯ ಕುರುಹುಗಳು ಪ್ರಕಟವಾಗುವಂತೆ ಮಡುವನು. ತನ್ನ ನೆರವಿನ ಸಹಾಯಹಸ್ತವನ್ನು ನೀಡುವನು. ತನ್ನ ಅನುಗ್ರಹಗಳನ್ನು ದಯಪಾಲಿಸುವನು. ತನ್ನ ರಬೂಬಿಯತ್ ಪಾಲನೆ ಪೊಷಣೆಯ ಗುಣವನ್ನು ಅವನಲ್ಲಿ ಅವತರಿಸುವನು. ಅವನ ನಾಲಗೆಯ ಮೇಲೆ ಜಾಣ್ಮೆಯುಳ್ಳ ಮಾತುಗಳನ್ನು ನುಡಿಸುವಷ್ಟು ಅವನ ಹೃದಯದಿಂದ ಆಧ್ಯಾತ್ಮಿಕ ಜ್ಞಾನದ ಜಲತಗೋಪುರ ಉಂಟಾಗುವುದು. ರಹಸ್ಯಜ್ಞಾನ ಅವನ ಮೇಲೆ ಉಲ್ಲೇಕಿಸುವನು. ಹೀಗೆ ಅಲ್ಲಾಹನು ಒಂದು ಮಹೋನ್ನತ ಪ್ರಕಾಶ ಅವರಲ್ಲಿ ಉಂಟು ಮಾಡುವನು. ತನ್ನ ಸಾನಿಧ್ಯ ಭಾಗ್ಯ ನೀಡುವನು ಮತ್ತು ಅವನು ಪ್ರಾರ್ಥನೆಗಳಲ್ಲಿ ಹಾಗೂ ಅದರ ಸ್ವೀಕೃತಿಯಲ್ಲಿ ಮತ್ತು ಆಧ್ಯಾತ್ಮಿಕ ನತಡೆಯಲ್ಲಿ, ಅಗೋಚರ ದೃಷ್ಟಾಂತಗಳನ್ನು ಪಡೆಯುವಲ್ಲಿ ಮತ್ತು ಅನುಗ್ರಹಗಳ ಅವತರಣೆಯಲ್ಲಿ ಎಲ್ಲರ ಮೇಲೆ ಮೇಲುಗೈ ಸಾಧಿಸುವನು. **(ಆಯಿನಾ ಕಮಾಲಾತೆ ಇಸ್ಲಾಂ, ರೂಹಾನಿ ಖಝಾಯೀನ್, ಸಂಪುಟ–05, ಪುಟ–221)**

### ಹಝ್ರತ್ ರಸೂಲುಲ್ಲಾಹ್(ಸ) ರವರ ಮಹೋನ್ನತವಾದ ಸ್ಥಾನಮಾನ

ನಮ್ಮ ನಬಿ(ಸ) ರವರ ಸತ್ಯ ಪ್ರಕಟಣೆಗೋಸ್ಕರ ಓರ್ವ ಮಹೋನ್ನತ ಧರ್ಮ ಸುಧಾರಕರಾಗಿದ್ದರು. ಅವರು ಕಳೆದು ಹೋದ ಸತ್ಯವನ್ನು ಪುನಃ ಲೋಕದಲ್ಲಿ ಸ್ಥಾಪಿಸಿದರು. ಈ ಗೌರವದಲ್ಲಿ ನಮ್ಮ ನಬಿ(ಸ) ರವರ ಸರಿಸಮಾನರು ಯಾರೂ ಇಲ್ಲ. ಅವರು ಇಡೀ ಲೋಕವನ್ನು ಅಂಧಕಾರದಲ್ಲಿ ಕಂಡರು ಮತ್ತು ಅವರ ಆಗಮನದಿಂದ ಆ ಅಂಧಕಾರವು ಪ್ರಕಾಶದಲ್ಲಿ ಪರಿವರ್ತನೆಗೊಂಡಿತು. ಯಾವ ಸಮುದಾಯದಲ್ಲಿ ಅವರು ಆಗಮಿಸಿದರೋ ಆ ಸಮುದಾಯ ಬಹದೇವತಾರಾಧನೆಯ ವಸ್ತ್ರ ಕಳಚಿ ಏಕದೇವತ್ವದ ವಸ್ತ್ರ ಧರಿಸುವವರೆಗೆ ಈ ಲೋಕದಿಂದ ಆಗಲಲಿಲ್ಲ. ಕೇವಲ ಅಷ್ಟೇ ಅಲ್ಲ. ಬದಲು ಆ ಜನರು ವಿಶ್ವಾಸದ ಉನ್ನತ ಸ್ಥಾನಗಳವರೆಗೆ ತಲುಪಿದರು ಮತ್ತು ಅವರು ಸತ್ಯನಿಷ್ಠೆ ನಿಸ್ಸಂದೇಹತೆಯ ಎಂತಹ ಸಾಧನೆಗಳನ್ನು ತೋರಿಸಿದರೆಂದರೆ ಲೋಕದ ಯಾವ ಭಾಗದಲ್ಲೂ ಅದರ ಉದಾಹರಣೆಯು ಕಾಣಸಿಗುತ್ತಿಲ್ಲ. ಈ ಯಶಸ್ಸು ಮತ್ತು ಈ ಪರಿಯ ಯಶಸ್ಸುಗಳು ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಹೊರತುಪಡಿಸಿ ಯಾವ ಪ್ರವಾದಿಗೂ ಲಭಿಸಲಿಲ್ಲ ರಸೂಲುಲ್ಲಾಹ್(ಸ) ರವರ ಪ್ರವಾದಿತ್ವಕ್ಕೆ ಬಹುದೊಡ್ಡ ಪುರಾವೆಯಾಗಿದೆ. ರಸೂಲುಲ್ಲಾಹ್(ಸ) ಒಂದು ಇಂತಹ ಕಾಲದಲ್ಲಿ ಅವತರಿಸಿದ್ದರು ಮತ್ತು ಆಗಮಿಸಿದ್ದರು. ಆ ಕಾಲವು ಅತ್ಯಂತ ಘೋರ ಅಂಧಕಾರದಲ್ಲಿ ಮುಳುಗಿ "ಸಹಜವಾಗಿಯೂ ಓರ್ವ ಮಹೋನ್ನತ ಧರ್ಮೋದ್ಧಾರಕನನ್ನು ಬಯಸುತ್ತಿತ್ತು ಮತ್ತು ಅವರು ಇಂತಹ ಕಾಲದಲ್ಲಿ ಲೋಕದಿಂದ ಅಗಲಿದರು. ಲಕ್ಷಾಂತರ ಜನರು ಬಹುದೇವರಾಧನೆಯನ್ನು ತ್ಯಜಿಸಿ ಮತ್ತು ವಿಗ್ರಹ ಪೂಜೆಗಳನ್ನು ಬಿಟ್ಟು ಏಕದೇವತ್ವ ಹಾಗೂ ಸನ್ಮಾರ್ಗವನ್ನು ಸ್ವೀಕರಿಸಿದರು.

ವಾಸ್ತವವಾಗಿಯೂ ಇಂತಹ ಪರಿಪೂರ್ಣ ಸುಧಾರಣೆಯ ವಿಶಿಷ್ಠ ಸ್ಥಾನಕ್ಕೆ ಅವರೇ ಅರ್ಹರಾಗಿದ್ದರು. ಅವರು ಒಂದು ಪಶುಸಮಾನ ಸಮಾಜವನ್ನು ಮತ್ತು ನೀತಿಗೆಟ್ಟವರಿಗೆ ಮಾನವೀಯ ಗುಣಗಳನ್ನು ಕಲಿಸಿದರು ಅಥವಾ ಬೇರೆ ಅರ್ಥದಲ್ಲಿ ಹೇಳುವುದಾದರೆ ಪಶುಗಳನ್ನು ಮನುಷ್ಯರನ್ನಾಗಿ ಮಾಡಿದರು. ಮತ್ತೆ ಮನುಷ್ಯರನ್ನು ಸುಶಿಕ್ಷಿತ ಸುಶಿಕ್ಷಿತ ಮನುಷ್ಯರನ್ನು ದೇವಮಾನ ಮನುಷ್ಯರನ್ನಾಗಿ ಮಾಡಿದರು ಮತ್ತು ಆಧ್ಯಾತ್ಮಿಕ ಆತ್ಮ ಅವರಲ್ಲಿ ಊದಿದರು. ಆ ಮೂಲಕ ಸತ್ಯ ದೇವನ ಸಾನಿಧ್ಯ ಅವರಿಗೆ ಕಲ್ಪಿಸಿದರು. ಆಗ ಅವರೇ ಅಲ್ಲಾಹನ ಮಾರ್ಗದಲ್ಲಿ ಕುರಿಗಳ ಹಾಗೆ ಕೊಲ್ಲಲ್ಪಟ್ಟರು. ಮತ್ತು ಇರುವೆಗಳ ಹಾಗೆ ಕಾಲ್ತುಳಿತಕ್ಕೆ ಒಳಗಾದರು. ಆದರೆ ವಿಶ್ವಾಸವನ್ನು ಬಿಟ್ಟು ಕೊಡಲಿಲ್ಲ. ಬದಲು ಎಲ್ಲ ಆಪತ್ತುಗಳ ನೋಡಿಯೂ ಮುಂದೆ ಹೆಜ್ಜೆ ಹಾಕಿದರು. ಆದುದರಿಂದ ನಿಸ್ಸಂದೇಹವಾಗಿ ನಮ್ಮ ನಬಿ(ಸ) ಆಧ್ಯಾತ್ಮಿಕತೆ ಸ್ಥಾಪಿಸುವುದರಲ್ಲಿ ದ್ವಿತೀಯ ಆದಮರಾಗಿದ್ದಾರೆ. ಬದಲು ವಾಸ್ತವ ಆದಮ್ ಅವರೇ ಆಗಿದ್ದಾರೆ. ಅವರ ಮೂಲಕವೇ ಎಲ್ಲ ಮಾನವೀಯ ಉತ್ತಮ ಗುಣಗಳು ಪರಿಪುರ್ಣತೆಗೆ ತಲುಪಿದವು. ಮತ್ತು ಎಲ್ಲ ಸಹಜ ಗುಣಗಳು ಸಾತ್ವಿಕ ಸ್ಥಾನಪಡೆದವು. ಮಾನವನ ಯಾವ ಹಂತವು ಫಲರಹಿತವಾಗಿರಲಿಲ್ಲ. ಪ್ರವಾದಿತ್ವ ಸಮಾಪ್ತಿ ಎಂಬುದು ಕೇವಲ ಕಾಲದ ಅಂತ್ಯ ಅರ್ಥದಲ್ಲಿ ಆಗದೇ ಪ್ರವಾದಿತ್ವದ ಪರಿಪೂರ್ಣ ಅನುಗ್ರಹಗಳು ಅವರಲ್ಲಿ ಅಂತ್ಯವಾಗಿದ್ದವು. ಏಕೆಂದರೆ ಅವರು ದೈವಿಕ ಗುಣಗಳ ಪಾರದರ್ಶಕರಾಗಿದ್ದರು. ಆದುದರಿಂದ ಅವರ ಧರ್ಮಗ್ರಂಥ (ಶರೀಯತ್) ಪ್ರತಾಪ ಗುಣಗಳನ್ನು ಅನುಗ್ರಹಿತ ಗುಣಗಳನ್ನೂ ಹೊಂದಿದ್ದಾಗಿದೆ. ಅದೇ ರೀತಿ ಅವರ ಎರಡು ಹೆಸರುಗಳು "ಮುಹಮ್ಮದ್ ಮತ್ತು ಅಹ್ಮದ್"(ಸ) ಅದೇ ಅರ್ಥ ಒಳಗೊಂಡಿದೆ. ಅವರ ಪ್ರವಾದಿತ್ವದಲ್ಲಿ ಯಾವ ಕೊನೆಯೂ ಇಲ್ಲ. ಬದಲು ಪ್ರಾರಂಭದಿಂದಲೂ ಸರ್ವಲೋಕಗಳಿಗೆ ಸಂಬಂಧಿಸಿದ್ದಾಗಿದೆ.

**(ಲೆಕ್ಚರ್ ಸಿಯಾಲ್ಕೋಟ್, ರೂ.ಖ. ಸಂ 20, ಪುಟ 206)**

**ಲೋಕದ ಉಳಿವಿವಾಗಿ ಇಂದು ಬೇಕಾಗಿರುವ ವಸ್ತು ಎಂದರೆ ಅದು ಇಸ್ಲಾಮಿಕ್ ಶಿಕ್ಷಣವಾಗಿದೆ.**

**ಲೋಕಕ್ಕೆ ಇಸ್ಲಾಮಿನ ಸುಂದರವಾದ ಶಿಕ್ಷಣದಿಂದ ಅವಗತಪಡಿಸಲು ಪ್ರತಿಯೊಬ್ಬ ಅಹ್ಮದಿಯರು ತನ್ನ ಪಾತ್ರ ನಿರ್ವಹಿಸುವ ಅವಶ್ಯಕತೆ ಇದೆ.**

**ನಬಿ ಕರೀಮ್[ಸ] ಅವರ ಪವಿತ್ರ ಜೀವನ ಚರಿತ್ರೆಯಿಂದ ಇಸ್ಲಾಮಿನ ನಿಜವಾದ ಶಿಕ್ಷಣದ ಪರಿಚಯ**

**ಅಹ್ಮದಿಯಾ ಜಮಾಅತಿಗೆ ಹುಝೂರ್[ಸ] ರವರ ಜೀವನ ಶೈಲಿಯನ್ನು ಅಳವಡಿಸಿಕೊಂಡು ಜಗತ್ತಿಗೆ ಇಸ್ಲಾಮಿನ ನಿಜವಾದ ರೂಪ ಪ್ರದರ್ಶಿಸಲು ಉಪದೇಶ**

**ಹಝ್ರತ್ ರಸೂಲುಲ್ಲಾಹ್[ಸ] ರವರ ಅದ್ವಿತೀಯ ಮಹೋನ್ನತ ನೈತಿಕ ಗುಣಗಳು, ದೈವಭಕ್ತಿ, ಜಮಾಅತ್ ಸಹಿತ ನಮಾಝ್ ನಿರ್ವಹಣೆ, ಅಲ್ಲಾಹನ ಮೇಲೆ ಭರವಸೆ, ವಿನಯ ಪರೋಪಕಾರ ಮತ್ತು ಕೃತಜ್ಞತೆ, ಪ್ರಮಾಣಿಕತೆ ಮತ್ತು ವಚನಬದ್ಧತೆ, ಮಿನರ್ವಿ ಹುಝೂರ್[ಸ] ರವರ ಭವ್ಯ ಚರಿತ್ರೆಯ ವರ್ಣನೆ.**

**ಅಲ್ಲಾಹನು ನಮಗೆ ಈ ಪರಿಪೂರ್ಣ ನಬಿ[ಸ] ರವರ ಉಮ್ಮತ್ತಿನಲ್ಲಿ ಸೇರಿದ್ದಕ್ಕೆ ಅದರ ಹಕ್ಕುಗಳನ್ನು ಪರಿಪಾಲಿಸುವ ಭಾಗ್ಯ ದಯಪಾಲಿಸಲಿ ಮತ್ತು ಈ ಸುಂದರವಾದ ಹಾಗೂ ಪ್ರಕಾಶಮಯ ಚರಿತ್ರೆಯನ್ನು ಲೋಕದ ಮುಂದೆ ಪ್ರಸ್ತುತಪಡಿಸಿ ಲೋಕದ ಅಂಧಕಾರಗಳನ್ನು ದೂರ ಮಾಡುವ ಭಾಗ್ಯ ಕರುಣಿಸಲಿ, ಆಮೀನ್.**

---

**44 ನೇ ಜಲ್ಸ ಸಾಲಾನ ಜಮಾಅತ್ ಅಹ್ಮದಿಯಾ ಜರ್ಮನಿ 5 ರಿಂದ 7 ಜುಲೈ 2019 ರಲ್ಲಿ ನಿಯೋಜಿತ, ಸ್ಥಳ ಕಾರ್ಲ್‌ಸರಯಿನ ಸಮಾರೋಪ ಸಮಾರಂಭದಿಂದ**

**ಸಯ್ಯದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್[ಅಬಅ] ರವರ ಹೃದಯಸ್ಪರ್ಶ ಭಾಷಣ.**

أَشْهَدُ أَنْ لَا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ
أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ- بِسْمِ اللهِ الرَّحْمٰنِ الرَّحِيمِ-
اَلْحَمْدُ لِلّٰهِ رَبِّ الْعٰلَمِيْنَ- الرَّحْمٰنِ الرَّحِيْمِ- مٰلِكِ يَوْمِ الدِّيْنِ-
إِيَّاكَ نَعْبُدُ وَإِيَّاكَ نَسْتَعِيْنُ- اِهْدِنَا الصِّرَاطَ الْمُسْتَقِيْمَ-
صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ-
لَقَدْ كَانَ لَكُمْ فِيْ رَسُوْلِ اللهِ أُسْوَةٌ حَسَنَةٌ لِّمَنْ كَانَ يَرْجُوا اللهَ وَالْيَوْمَ
الْاٰخِرَ وَذَكَرَ اللهَ كَثِيْرًا۔ **(ಅಲ್ ಅಹ್ಝಾಬ್:22)**

"ನಿಸ್ಸಂದೇಹವಾಗಿಯೂ ನಿಮಗೆ ಅಲ್ಲಾಹನ ಸಂದೇಶವಾಹಕನಲ್ಲಿ ಒಂದು ಉತ್ತಮವಾದ ಮಾದರಿ ಇದೆ ಅಲ್ಲಾಹ್ ಮತ್ತು ಅಂತ್ಯ ದಿನದ (ಭೇಟಿಯ) ಬಗ್ಗೆ ನಿರೀಕ್ಷೆಯಿರುವವರಿಗೆ ಹಾಗೂ ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವವರಿಗೆ," (ಅಲ್ ಅಹಝಾಬ್–22)

ಅಮುಸ್ಲಿಮ್ ಲೋಕದಲ್ಲಿ ಅಥವಾ ಪಾಶ್ಚಿಮಾತ್ಯ ಲೋಕದಲ್ಲಿ ಅಥವಾ ಅಭಿವೃದ್ಧಿಶೀಲ ಲೋಕದಲ್ಲಿ ಮುಸ್ಲಿಮರ ಬಗ್ಗೆ ಇರುವ ಆತಂಕಗಳು ಅವರು ಇಸ್ಲಾಮಿನ ಬಗ್ಗೆ ಹೊಂದಿರುವ ಅಜ್ಞಾನತೆ, ಅಲ್ಪಜ್ಞಾನ ಕಾರಣವಾಗಿದೆ. ಅದಲ್ಲದೆ ಕೆಲವು ಮುಸ್ಲಿಮ್ ಗುಂಪುಗಳು ಇಸ್ಲಾಮಿನ ಹೆಸರಿನಲ್ಲಿ ಮಾಡುವ ಹಿಂಸಾಚಾರ, ಉಗ್ರವಾದ ಮತ್ತು ಕಾನೂನುಗಳನ್ನು ತನ್ನ ಕೈಗೆ ಎತ್ತಿಕೊಳ್ಳುವುದು, ನೋಡಿ ಅವರನ್ನು ಭಯಭೀತರನ್ನಾಗಿಸಿದೆ ಇದರಿಂದ ಅವರು ಇಸ್ಲಾಮ್ ಧರ್ಮವನ್ನು ಭಯೋತ್ಪಾದಕರ ಧರ್ಮ ಎಂದು ತಿಳಿದುಕೊಂಡಿದ್ದಾರೆ. ಇಂದು ಇಸ್ಲಾಮಿಕ್ ಶಿಕ್ಷಣವನ್ನು ಲೋಕಕ್ಕೆ ಪರಿಚಯಿಸಲು, ಇಸ್ಲಾಮಿಕ್ ಶಿಕ್ಷಣದ ತಪ್ಪು ಗ್ರಹಿಕೆಗಳನ್ನು ದೂರ ಮಾಡಲು ಅಲ್ಲಾಹನು ಹಝ್ರತ್ ರಸೂಲುಲ್ಲಾಹ್ (ಸ) ರವರ ಸತ್ಯಸಂದ ಗುಲಾಮರಾದ ಮಸೀಹ್ ಮೌಊದ್ ಹಾಗೂ ಮಹದಿ ಮೌಊದ್‌ರ ಜಮಾಅತಿಗೆ ಹೊಣೆ ಹೊರಿಸಿದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿಗೆ ತೀವ್ರತರದ ಪ್ರಯುತ್ನಗಳನ್ನು ಮಾಡುವುದು ಅವಶ್ಯವಾಗಿದೆ. ಲೋಕದ ಜನರು ಮಾಧ್ಯಮಗಳಿಂದ ಕೇಳಿದ ವಿಷಯಗಳನ್ನು ಶತಪ್ರತಿ ಸರಿ ಎಂದು ನಂಬಿಕೊಂಡಿದ್ದಾರೆ. ಸಾಮಾನ್ಯವಾಗಿ ಮೊದಲೇ ಜನರಿಗೆ ಧರ್ಮದ ಮೇಲೆ ಆಸಕ್ತಿ ಇರುವುದಿಲ್ಲ. ಇಂತಹ ಪರಿಸ್ಥಿತಿಗಳಲ್ಲಿ ಇಸ್ಲಾಮಿನ ಸುಂದರವಾದ ಶಿಕ್ಷಣವನ್ನು ಜಗತ್ತಿಗೆ ಎತ್ತಿ ತೋರಿಸುವುದು ಸುಲಭದ ಕೆಲಸವಲ್ಲ. ಸತತ ಕಠಿಣ ಪರಿಶ್ರಮದ ಅವಶ್ಯಕತೆ ಇದೆ. ಇದು ನಮಗೆ ಬಹುದೊಡ್ಡ challenge ಆಗಿರುತ್ತದೆ. ಸಾಮಾನ್ಯ ಅಮುಸ್ಲಿಮರು ಮುಸ್ಲಿಮರ ವರ್ತನೆ ನೋಡಿ ಅದನ್ನೇ ಇಸ್ಲಾಮಿನ ಶಿಕ್ಷಣ ಮತ್ತು ಮುಹಮ್ಮದ್ ಪೈಗಂಬರರ[ಸ] ನಡವಳಿಕೆ ಎಂದು ತಿಳಿದುಕೊಂಡಿದ್ದಾರೆ.

ಆದುದರಿಂದ ನಾನು ಹೇಳಿದಂತೆ ಈ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಮತ್ತು ಲೋಕಕ್ಕೆ ಇಸ್ಲಾಮಿನ ಸುಂದರ ಶಿಕ್ಷಣದಿಂದ ಅವಗತಪಡಿಸಲು ಪ್ರತಿಯೊಬ್ಬ ಅಹ್ಮದಿಗೆ ತನ್ನ ಪಾತ್ರ ನಿರ್ವಹಿಸುವ ಅವಶ್ಯಕತೆ ಇದೆ. ತಮ್ಮ ನಡೆ ನುಡಿಯಿಂದ ಇಸ್ಲಾಮಿನ ಯಥಾರ್ಥವಾದ ಶಿಕ್ಷಣದಿಂದ ಮನೆಯನ್ನು ಜಗತ್ತಿಗೆ ತೋರಿಸಿಕೊಡಬೇಕಾಗಿದೆ. ಹಝ್ರತ್ ರಸೂಲುಲ್ಲಾಹ್[ಸ] ರವರ ನೈಜ ಜೀವನ ಶೈಲಿಯನ್ನು ತೋರಿಸಿಕೊಡಬೇಕಾಗಿದೆ. ಅಲ್ಲಾಹನು ಮನುಷ್ಯನಿಗೆ ಲೋಕದಲ್ಲಿ ಜನ್ಮ ನೀಡಿದ್ದಾನೆಂದರೆ ಅದಕ್ಕೆ ಕಾರಣ ಅಲ್ಲಾಹನ ಆರಾಧನೆಯ ಹಕ್ಕುಗಳನ್ನು ಮತ್ತು ಅವನ ಸೃಷ್ಟಿಗಳ ಹಕ್ಕುಗಳನ್ನು ಪಾಲಿಸುವವರಾಗಿರುತ್ತಾರೆ. ಆ ಹಕ್ಕುಗಳನ್ನು ಪಾಲಿಸಲು ಅಲ್ಲಾಹನು ತಮ್ಮ ಮುಂದೆ ತನ್ನ ಪ್ರೀತಿಯ ನೆಚ್ಚಿನ ಪ್ರವಾದಿ ಪರಿಪೂರ್ಣ ಮಾನವ ಮಾದರಿಯನ್ನು ದಯಪಾಲಿಸಿದ್ದಾನೆ. ಮತ್ತು ನಮಗೆ ಹೇಳಿರುವನು. ಈ ಪರಿಪೂರ್ಣ ಮಾಧರಿಯು ನಿಮಗೆ ಮಾರ್ಗದರ್ಶನವಾಗಿದೆ. ಅದನ್ನು ತನ್ನದಾಗಿಸಿಕೊಳ್ಳಿ. ನೀವು ಅವರ ಅನುಯಾಯಿ ಎಂದು ಹೇಳಿಕೊಳ್ಳುವವರಾದರೆ ಅವರ ಜೀವನ ಶೈಲಿಯನ್ನು ಮೈಗೂಡಿಸಿಕೊಂಡು ನಡೆಯುವವರಾಗಿರಿ, ಮತ್ತೆ ಲೋಕಕ್ಕೂ ತಿಳಿಸಿರಿ. ಇದು ಯಥಾರ್ಥ ಇಸ್ಲಾಮಾಗಿದೆ. ಮಾಧ್ಯಮಗಳು ಬಿಂಬಿಸುತ್ತಿರುವಂತೆ ಇಸ್ಲಾಮಿನ ಹೆಸರಿನಲ್ಲಿ ಉಗ್ರವಾದ ಹಿಂಸಾಚಾರ ಮಾಡುವುದು ಇಸ್ಲಾಮಲ್ಲ.

ಹಝ್ರತ್ ರಸೂಲುಲ್ಲಾಹ್[ಸ] ರವರು ಎಂತೆಂತಹ ಸುಂದರ ಮಾದರಿಗಳನ್ನು ತನ್ನ ಜೀವನ ಶೈಲಿಯಿಂದ ಪ್ರಸ್ತುತಪಡಿಸಿದ್ದಾರೆ. ಅದರ ಕೆಲವು ಮಾದರಿಗಳನ್ನು ಇಂದು ತಮ್ಮ ಮುಂದೆ ಪ್ರಸ್ತುತಪಡಿಸುವೆನು. ತಮ್ಮನ್ನು ತಾವು ಈ ಮಾದರಿಗಳನ್ನು ನೋಡಿ ಪರೀಕ್ಷಿಸಿಕೊಳ್ಳಬಹುದು. ಅವರು ತಮ್ಮ ಮಹೋನ್ನತ ಗುಣಗಳಿಂದ ವ್ಯಕ್ತಪಡಿಸಿದ ಮಾದರಿಗಳನ್ನು ತನ್ನ ಜೀವನದೊಂದಿಗೆ ಹೋಲಿಸಿಕೊಳ್ಳಬಹುದು. ಇಸ್ಲಾಮಿ ಶಿಕ್ಷಣದ ನೆಲೆಯಲ್ಲಿ ಅವರ ಉಪದೇಶಗಳನ್ನು

ಪರಿಶೀಲಿಸಿಕೊಳ್ಳಿ. ಅವರು ನೀಡಿದ ಮಾರ್ಗದರ್ಶನದ್ವಯ ನಡೆಯುವ ಪ್ರಯತ್ನ ಮಾಡಿ. ನೀವು ನಿಮ್ಮ ಜೀವನ ಶೈಲಿಯನ್ನು ರಸೂಲುಲ್ಲಾಹ್(ಸ) ರವರಂತೆ ಮಾಡಿಕೊಂಡಾಗ ಮಾತ್ರ ನಿಜ ಇಸ್ಲಾವ್ ಏನೆಂಬುದನ್ನು ಲೋಕಕ್ಕೆ ತೋರಿಸಬಲ್ಲಿರಿ. ಇಂದು ಲೋಕ ಉಳಿಯಬೇಕಾದರೆ ಅಗತ್ಯವಿರುವ ವಸ್ತು ಎಂದರೆ ಅದು ಇಸ್ಲಾಮ್‌ನ ಶಿಕ್ಷಣ ಮಾತ್ರ ಆಗಿದೆ. ಅಲ್ಲಾಹನು ಮಾನವ ಜೀವನ ಉದ್ದೇಶವು ತನ್ನ ಆರಾಧನೆಯಾಗಿರುತ್ತದೆ ಎಂದು ತಿಳಿಸಿರುವನು. ನಮ್ಮ ನೇತಾರರಾದ ರಸೂಲುಲ್ಲಾಹ್(ಸ) ಕೇವಲ ಅಲ್ಲಾಹನು ನಿಮ್ಮ ಜೀವನದ ಉದ್ದೇಶ ಅಲ್ಲಾಹನ ಆರಾಧನವಾಗಿದೆ ಎಂದು ತಿಳಿಸಲಿಲ್ಲ. ಅದಕ್ಕಾಗಿ ನೀವು ಆರಾಧನೆಯ ಕಡೆ ಗಮನಹರಿಸಿರಿ ಮತ್ತು ಆ ಉದ್ದೇಶ ಸಾಧಿಸಲು ಪ್ರಯತ್ನ ಮಾಡಿರಿ ಎಂದು ಮಾತ್ರ ತಿಳಿಸಲಿಲ್ಲ. ಬದಲು ತನ್ನ ಆರಾಧನಾ ಕ್ರಮವನ್ನು ಮಾದರಿಯಾಗಿ ನಮ್ಮ ಮುಂದೆ ಪ್ರಸ್ತುತಡಪಡಿಸಿದರು. ಅದನ್ನು ಅಲ್ಲಾಹನು ಮನ್ನಿಸಿದ ಪ್ರಮಾಣವು ಪ್ರಸ್ತುತಪಡಿಸಿದರು. ಈ ಬಗ್ಗೆ ಅಲ್ಲಾಹನು ಹೀಗೆ ಹೇಳಿದನು.

**ಅಲ್ಲಝೀ ಯರಾಕ ಹೀನ ತಖೂಮು. ವತಖಲ್ಲುಬಕ ಫಿಸ್ಸಾಜಿದೀನ್**

(ಅಶ್ಶೊರ : 219–220)

"ನೀನು (ಪ್ರಾರ್ಥನೆಗಾಗಿ ಒಬ್ಬಂಟಿಗನಾಗಿ) ನಿಲ್ಲುವಾಗ ಅವನು ನಿನ್ನನ್ನು ಕಾಣುತ್ತಾನೆ. ಹಾಗೂ ಸಾಷ್ಟಾಂಗ ಪ್ರಣಾಮ ಮಾಡುವವರ ಮಧ್ಯೆ ನಿನ್ನ ಚಲನವಲನಗಳನ್ನು ಅವನು ವೀಕ್ಷಿಸುತ್ತಾನೆ." ಇದಾಗಿದೆ ರಸೂಲುಲ್ಲಾಹ್(ಸ) ರವರ ಸಾಷ್ಟಾಂಗ ಪ್ರಣಾಮ ಮತ್ತು ಆರಾಧನ ರೀತಿ ಅದನ್ನು ಅಲ್ಲಾಹನು ಪ್ರೀತಿಯ ದೃಷ್ಟಿ ಬೀರಿ, ಆ ಚಲನವಲನವನ್ನು ಮೆಚ್ಚಿ ವರ್ಣಿಸಿರುವನು. ಈ ವ್ಯಾಕುಲತೆ ಏಕೆಯಿತ್ತು. ಯಾರಿಗಾಗಿ ಇತ್ತು? ಈ ವ್ಯಾಕುಲತೆ ಮತ್ತು ಪ್ರಾರ್ಥನೆಗಳು ತನ್ನ ಉನ್ನತಿಗೋಸ್ಕರವಿತ್ತು. ಈ ವ್ಯಾಕುಲತೆ ಮತ್ತು ಪ್ರಾರ್ಥನೆಗಳು ಮಾನವೀಯತೆಗಾಗಿ ಇತ್ತು. ಈ ವ್ಯಾಕುಲತೆ ಮತ್ತು ಪ್ರಾರ್ಥನೆಗಳು ಆ ಜನರಿಗೆ ಅವರ ಜನ್ಮದ ಉದ್ದೇಶವನ್ನು ತಿಳಿಸುವ ಸಂಬಂಧವಾಗಿತ್ತು. ಯಾರು ಅಲ್ಲಾಹನಿಂದ ದೂರವಾಗುವರೋ ಅವರು ಅಲ್ಲಾಹನ ಅಸಂತುಷ್ಟಿಗೆ ಗುರಿಯಾಗುವರು. ಆ ಸಂಬಂಧ ರಸೂಲುಲ್ಲಾಹ್(ಸ) ರವರ ವ್ಯಾಕುಲತೆ ಕಂಡು ಅಲ್ಲಾಹನು ಅವರಿಗೆ ಹೇಳಿದನು. **ಲಅಲ್ಲಕ ಬಾಖಿಉನ್ನಫ್‌ಸಕ ಅಲಾ ಯಕೂನೂ ಮುಮಿನೀನ್**. (ಅಶ್ಶೊರ: 4) ಅವರು ನಂಬುವುದಿಲ್ಲವೆಂಬ ಕಾರಣದಿಂದ (ವ್ಯಾಕುಲಗೊಂಡು) ನೀನು ನಿನ್ನ ಜೀವನವನ್ನು ಹಾನಿಗೊಳಿಸುವೆ. ನಿನ್ನ ಮನಸ್ಸು ಅವಿಶ್ವಾಸಿಗಳು ಏಕೆ ವಿಶ್ವಾಸ ತರುವುದಿಲ್ಲವೆಂಬ ವಿಷಯ ವ್ಯಾಕುಲರನ್ನಾಗಿ ಮಾಡಿದೆ. ಏಕೆ ಅಲ್ಲಾಹನ ಮೇಲೆ ವಿಶ್ವಾಸ ಹೊಂದಿ ತನ್ನ ಇಹಪರ ಜೀವನವನ್ನು ಶೃಂಗರಿಸಿಕೊಳ್ಳುವುದಿಲ್ಲ ಎಂಬ ಚಿಂತೆ ಕಾಡುತ್ತಿತ್ತು. ಆದುದರಿಂದ ಎಲ್ಲಿ ಅದರಿಂದ ಅವರ ಆರಾಧನೆಯ ಮಟ್ಟ ತಿಳಿದು ಬರುತ್ತದೆಯೋ ಅಲ್ಲಿ ಮಾನವರಿಗೆ ವಿನಾಶದಿಂದ ರಕ್ಷಿಸುವ ಅವರ ಕಳಕಳಿ ವ್ಯಕ್ತವಾಗುತ್ತದೆ. ಅವರ ವ್ಯಾಕುಲತೆಯ ಕಾರಣವು ತಿಳಿದುಬರುತ್ತದೆ. ಮಾನವೀಯತೆಯ ಕುರಿತು ಅಷ್ಟೊಂದು ಕಳಕಳಿ ಹೊಂದಿದವರಿಂದ ಹಿಂಸೆ ನಿರೀಕ್ಷಿಸುವುದು ಸಾಧು ಎನಿಸುತ್ತದೆಯೇ? ಖಂಡಿತ ಇಲ್ಲ, ಅವರು ಅಲ್ಲಾಹನ ಆರಾಧನೆಯಲ್ಲಿ, ಅವನ ಸೃಷ್ಟಿಗಳ ಸೇವೆಯಲ್ಲಿ ವ್ಯಾಕುಲಗೊಂಡು ತನ್ನ ಜೀವನದ ಪ್ರತಿ ಕ್ಷಣ ಸಮರ್ಪಿಸಿದವರಾಗಿದ್ದಾರೆ. ಅವರ ಈ ಆರಾಧನೆ ಮಾದರಿ ನೋಡುವ ಭಾಗ್ಯ ಕೆಲವು ಸಹಾಬರಿಗೂ ದೊರೆಯುತ್ತಿತ್ತು. ಓರ್ವ ಸಹಾಬಿಯರು ಹೇಳುತ್ತಾರೆ. ನಾನು ರಸೂಲುಲ್ಲಾಹ್(ಸ) ರವರನ್ನು ನಮಾಝ್ ಮಾಡುತ್ತಿರುವುದನ್ನು ಕಂಡಿರುತ್ತೇನೆ ಆ ಸಮಯ ದುಃಖದಿಂದ ಬಿಕ್ಕಳಿಸುವುದನ್ನು ಕಂಡರೆ ಅವರ ಎದೆಯಿಂದ ಗಿರಣಿಯು ಬೀಸೋಕಲ್ಲಿನಿಂದ ಹೊರಡುವ ಸದ್ದಿನಂತೆ ಭಾಸವಾಗುತ್ತಿತ್ತು. (ಸುನನ್ ಅಬೂದ್ ಕಿತಾಬುಸ್ಸಲಾತ್ ಬಾಬ್ ಅಲ್‌ಬಖಾ ಫಿಸ್ಸಲಾತ್ ಹದೀಸ್–904)

ಆ ಪ್ರಾರ್ಥನೆಗಳು ಏನಾಗಿದ್ದವು? ಇದು ಅಲ್ಲಾಹನ ಅಭಯ ಯಾಚಿಸುವ ಪ್ರಾರ್ಥನೆಗಳಾಗಿದ್ದವು. ಈ ಪ್ರಾರ್ಥನೆಗಳು ಉನ್ನತಿಗೋಸ್ಕರವಾಗಿದ್ದವು. ಇದು ಮಾನವೀಯತೆಯನ್ನು ವಿನಾಶದಿಂದ ರಕ್ಷಿಸುವ ಪ್ರಾರ್ಥನೆಗಳಾಗಿದ್ದವು. ಹಝ್‌ರತ್ ರಸೂಲುಲ್ಲಾಹ್(ಸ) ರವರ ಈ ಪ್ರಾರ್ಥನೆಗಳೇ ಆ ಸಮಯ ಒಂದು ಕ್ರಾಂತಿಯನ್ನು ಉಂಟು ಮಾಡಿತು. ಅದರಿಂದ ಶತಮಾನಗಳ ಶವಗಳು ಜೀವ ಪಡೆದು ಅಲ್ಲಾಹನ ನೈಜ ಆರಾಧನೆ ಮಾಡುವವರಾದರು. ಹಝ್‌ರತ್ ರಸೂಲುಲ್ಲಾಹ್(ಸ) ರವರ ಆ ಪ್ರಾರ್ಥನೆಗಳೇ ಸ್ವೀಕೃತಿಗೊಂಡು ಈ ಕಾಲದಲ್ಲಿ ಅವರ ಸತ್ಯಪ್ರೇಮಿಯನ್ನು ಅಧರ್ಮದ ಈ ಕಾಲದಲ್ಲಿ ಇಸ್ಲಮ್ ಧರ್ಮವನ್ನು ಪುನಶ್ಚೇತನ ನೀಡಲು ಕಳುಹಿಸುವನು. ಆದುದರಿಂದ ಇಂದು ತನ್ನ ಆರಾಧನೆಗಳ ಮಟ್ಟ ಉತ್ತಮಪಡಿಸುವ ಜವಾಬ್ದಾರಿ ನಮ್ಮೆಲ್ಲ ಅಹ್ಮದಿಯರ ಮೇಲಿದೆ. ಅಲ್ಲಾಹನಿಗೆ ಶರಣ ಹೊಂದಿ ರಸೂಲುಲ್ಲಾಹ್(ಸ) ರವರ ಜೀವನ ಶೈಲಿಯನ್ನು ಅನುಸರಿಸುವ ಪ್ರಯತ್ನ ಮಾಡುತ್ತ ಅಲ್ಲಾಹನಿಗೆ ಸಾಷ್ಟಾಂಗ ಪ್ರಣಾಮ ಮಾಡುವ ಉದ್ದೇಶ ಕೇವಲ ತನ್ನ ಸ್ವಾರ್ಥ ಹಿತಾಸಕ್ತಿಗೋಸ್ಕರ ಆಗಬಾರದು ಬದಲು ಅಲ್ಲಾಹನ ಆಡಳಿತ ಲೋಕದಲ್ಲಿ ಸ್ಥಾಪನೆ ಮಾಡುವುದು ಆಗಬೇಕು. ರಸೂಲುಲ್ಲಾಹ್(ಸ) ರವರ ಪತಾಕೆ ಲೋಕದ ಮೇಲೆ ಹಾರಿಸುವುದು ಆಗಬೇಕು ತನ್ನನ್ನು ಅಲ್ಲಾಹನ ನೈಜ ದಾಸನಾಗುವ ಉದ್ದೇಶವಾಗಿರಬೇಕು. ಮಾನವ ಕುಲವನ್ನು ಅಲ್ಲಾಹನ ಸಮೀಪ ತರುವ ಉದ್ದೇಶವಾಗಬೇಕು. ಲೋಕವನ್ನು ವಿನಾಶದಿಂದ ರಕ್ಷಿಸುವ ಉದ್ದೇಶವಾಗಿರಬೇಕು.

ಫರ್ಜ್ ಮತ್ತು ಜಮಾಅತ್ ಸಹಿತ ನಮಾಝುಗಳನ್ನು ರಸೂಲುಲ್ಲಾಹ್(ಸ) ವಿಶೇಷ ರೀತಿಯಲ್ಲಿ ಕಾಳಜಿ ವಹಿಸಿ ಏರ್ಪಾಡು ಮಾಡುತ್ತಿದ್ದರು. ಕೆಲ ಪರಿಸ್ಥಿತಿಗಳಲ್ಲಿ ತುಂಬ ಶ್ರಮಪಡುತ್ತಿದ್ದರು. ಆ ಪೈಕಿ ಒಂದು ದೃಷ್ಟಾಂತದಿಂದ ಚೆನ್ನಾಗಿ ತಿಳಿಯಬಹುದಾಗಿದೆ. ಉಹುದ್ ಯುದ್ಧದ ಒಂದು ಸಂಜೆ ಕಬ್ಬಿಣದ ಸರಪಣಿಗಳು ರಸೂಲುಲ್ಲಾಹ್(ಸ) ರವರ ಎಡ ಕಪಾಲದಲ್ಲಿ ಮುರಿದು ಬಿದ್ದವು. ಅದರಿಂದ ತುಂಬ ರಕ್ತ ಹರಿಯಿತು. ಗಾಯಗಳಿಂದ ರಸೂಲುಲ್ಲಾಹ್(ಸ) ನಿಶ್ಯಕ್ತರಾದರು. ಅದಲ್ಲದೇ 70 ಸಹಾಬರು ಹುತಾತ್ಮಗೊಂಡ ದು:ಖ ಅದಕ್ಕಿಂತ ಎಷ್ಟೋ ಪಟ್ಟು ಅಧಿಕವಾಗಿತ್ತು. ಆ ದಿನವು ಸಹ ರಸೂಲುಲ್ಲಾಹ್(ಸ) ಅಝಾನ್ ಸ್ವರ ಕೇಳಿ ಮಾಮೂಲಿನಂತೆ ಫಜ್ರ್ ನಮಾಝಿಗೋಸ್ಕರ ಆಗಮಿಸಿದರು. (ಉಸ್ವಾ ಎ ಇನ್ಸಾನೆ ಕಾಮಿಲ್ ಪುಟ–84)

ರಸೂಲುಲ್ಲಾಹ್(ಸ) ರವರ ಆರಾಧನ ಕ್ರಮ ಇದಾಗಿತ್ತು. ಸಹಾಬರಲ್ಲಿಯೂ ಆರಾಧನೆಯ ಆ ಮಟ್ಟ ಸ್ಥಾಪಿಸಿದರು.

ಆದುದರಿಂದ ಇಂದು ನಮ್ಮಲ್ಲಿ ಪ್ರತಿಯೊಬ್ಬರಿಗೆ ಆತ್ಮವಲೋಕನ ಮಾಡಿಕೊಳ್ಳುವ ಅವಶ್ಯಕತೆ ಇದೆ ನಾವು ಹಜ್‌ರತ್ ಮಸೀಹ್ ಮಳೌಊದ್(ಅ) ರವರ ಜಮಾಅತ್ ಮೂಲಕ ಇಸ್ಲಾಮ್ ಧರ್ಮವನ್ನು ಪುನರುಸ್ಥಾನಗೊಳಿಸುವ ಮಾತನಾಡುತ್ತೇವೆ. ನಾವು ಇಸ್ಲಾಮಿನ ಶಿಕ್ಷಣವನ್ನು ಪುನರಾವರ್ತಿಸುವ ಜೀವಂತಗೊಳಿಸುವ ಘೋಷಣೆ ಮಾಡುತ್ತೇವೆ. ನಮ್ಮ ಆರಾಧನೆಗಳು ಮತ್ತು ಜಮಾಅತ್ ಸಹಿತ ನಮಾಝುಗಳನ್ನು ನಿರ್ವಹಿಸುವ ಮಟ್ಟ ಅದರ ಸಮೀಪವಾದರೂ ಇದೆಯೇ? ಅಲ್ಪ ಪ್ರಮಾಣದ ಕಷ್ಟಗಳನ್ನು ಎದುರಾದರೂ ನಾವು ಮಸೀದಿಗೆ ಬಾರದಿರುವ ನೆಪಗಳನ್ನು ಹೇಳುತ್ತೇವೆ. ಮುಂಜಾನೆ ಏಳುವಾಗ ಎರಡು ಸೀನುಗಳು ಬಂದರೂ ಇಂದು ನನ್ನ ಆರೋಗ್ಯ ಸರಿ ಇಲ್ಲ. ಮನೆಯಲ್ಲಿ ನಮಾಝ್ ಮಾಡಿಕೊಳ್ಳಿ. ಆಲಸ್ಯಗಳು ಪ್ರಯತ್ನ ಮಾಡಿದರೆ ದೂರವಾಗುತ್ತವೆ. ಆದುದರಿಂದ ನಮಗೆ ನಮ್ಮ ಆರಾಧನೆ ಮಟ್ಟ ಉತ್ತಮಪಡಿಸಲು ಪ್ರಯತ್ನ ಮಾಡಬೇಕಾಗಿದೆ. ಆ ಮೂಲಕ ಮಾಡುವ ಪ್ರಾರ್ಥನೆಗಳೇ ಲೋಕದಲ್ಲಿ ಕ್ರಾಂತಿ ಉಂಟು ಮಾಡಲು ಕಾರಣವಾಗುವುವು. ಪ್ರಾರ್ಥನೆವಿಲ್ಲದೇ ನಮ್ಮ ಪ್ರಚಾರ ವ್ಯರ್ಥವಾಗುವುದು. ನಮ್ಮ ಜ್ಞಾನಗಳು ಪ್ರಾರ್ಥನೆ ಇಲ್ಲದಿದ್ದರೆ ಫಲ ನೀಡಲಾರರು. ಆದುದರಿಂದ ಲೋಕಕ್ಕೆ ನಿಜವಾದ ಇಸ್ಲಾಮ್ ಕಲಿಸ ಬಯಸುವವರಾಗ ಬೇಕಾದರೆ ಮೊದಲು ನಮಗೆ ಅಲ್ಲಾಹನೊಡನೆ ಆ ಮಟ್ಟದ ಸಾನಿಧ್ಯ, ಅಂದರೆ ಹಝ್‌ರತ್ ರಸೂಲುಲ್ಲಾಹ್(ಸ) ಮತ್ತು ಅವರ ಸಹಾಬರು ನಿರ್ವಹಿಸಿದ ಮಟ್ಟ ನಿರ್ವಹಿಸಬೇಕಾಗುವುದು. ಹಝ್‌ರತ್ ಮಸೀಹ್ ಮೌಊದ್(ಅ) ಆ ಪೈಕಿ ಹೀಗೆ ಹೇಳಿದರು. ಸರಳವಾದ ಮಾತಿಗೆ ಪವಿತ್ರ ಖುರ್‌ಆನ್ ಸಹಾಬರವರ ಪೂರ್ವ ವಿಶ್ವಾದ ವಿವರ ಹೀಗೆ ನೀಡಿದೆ. **ಯಕುಲೂನ ಕಮಾ ಯಕುಲುಲ್ ಅನ್‌ಆಮ್** (ಮುಹಮ್ಮದ್: 13) "ಅವರು ಊಟ ಮಾಡುವ ರೀತಿಯು ಪಶುಗಳ ರೀತಿಯದ್ದಾಗಿದೆ." ಇದು ಅವರು ಅವಿಶ್ವಾಸಿಗಳಾಗಿದ್ದ ಕಾಲದ ಸ್ಥಿತಿಯಾಗಿತ್ತು. ರಸೂಲುಲ್ಲಾಹ್(ಸ) ರವರ ಪರಿಶುದ್ಧ ಸಹವಾಸ ಪಡೆದ ನಂತರ ಅವರಲ್ಲಿ ಬದಲಾವಣೆಗೊಂಡ ಸ್ಥಿತಿ ಹೀಗಿತ್ತು. **"ಯಬೀತೂನ ಲಿರಬ್ಬಿಹಿಮ್ ಸುಜ್ಜದೌಂ ವ ಖಿಯಾಮಾ"** (ಅಲ್–ಪುರ್ಖಾನ್ –65) ಅವರು ರಾತ್ರಿ ಹೊತ್ತನ್ನು ತಮ್ಮ ಪ್ರಭುವಿನ ಮುಂದೆ ಪ್ರಣಾಮಮಾಡುತ್ತಲೂ ನಿಂತು ಪ್ರಾರ್ಥಿಸುತ್ತಲೂ ಕಳೆಯುತ್ತಾರೆ. (ಮಲ್ಫೂಝಾತ್, ಸಂಪುಟ–9, ಪುಟ–65)

ಆದುದರಿಂದ ನಮಗೆ ಸಹ ಆ ರೀತಿಯ ಪರಿವರ್ತನೆ ಹೊಂದಲು ಪ್ರಯತ್ನ ಮಾಡಬೇಕಾಗಿದೆಯೇ ಹೊರತು ಫಜ್ರ್ ನಮಾಝ್‌ಗೂ ಸಹ ಏಳದಷ್ಟು ಆಲಸ್ಯ. ಹಝ್‌ರತ್ ಅಲಿ(ರ) ಹೇಳುತ್ತಾರೆ. ಹಝ್‌ರತ್ ರಸೂಲುಲ್ಲಾಹ್(ಸ) ರವರ ಅಂತಿಮ ಉಪದೇಶ ಅವರು ಅಂತಿಮ ಶ್ವಾಸ ಎಳೆಯುವ ಸಮಯ ಹೇಳಿದ್ದೇನೆಂದರೆ. . ನಮಾಝ್ ಮತ್ತು ಗುಲಾಮರ ಹಕ್ಕುಗಳ ಕುರಿತು ಕಾಳಜಿ ವಹಿಸುವವರಾಗಿರಿ. (ಸುನನ್‌ಇಬ್ನುಮಾಜ, ಕಿತಾಬುಲ್ ವಸಾಯ, ಹದೀಸ್–2698)

ಇದಾಗಿದೆ ಅಲ್ಲಾಹನ ಆರಾಧನೆ ಮಾಡುವ ಹಕ್ಕು ಮತ್ತು ಅವನ ಸೃಷ್ಟಿಗಳ ಹಕ್ಕುಗಳ ಬಗ್ಗೆ ವಹಿಸುವ ಕಾಳಜಿ, ಆ ಅಂತಿಮ ಉಪದೇಶವನ್ನು ಪ್ರತಿಯೊಬ್ಬ ಸತ್ಯವಿಶ್ವಾಸಿಗನಿಗೆ ನೆನಪಿಡಬೇಕಾಗುವುದು ಮತ್ತು ಇದೇ ನಮ್ಮ ಹಝ್‌ರತ್ ಮಸೀಹ್ ಮೌಊದ್(ಅ) ರನ್ನು ನಂಬುವ ಉದ್ದೇಶವಾಗಿದೆ. ಅದನ್ನು ಸದಾ ತಮ್ಮ ಮುಂದೆ ಇರಿಸಿಕೊಳ್ಳಬೇಕೇ ಹೊರತು ಆಲಸ್ಯವಹಿಸಿ ಲೌಕಿಕ ಕಾರ್ಯದಲ್ಲಿ ಮುಳುಗುವಂತಾಗಿ ತಮ್ಮ ಜೀವನದ ಉದ್ದೇಶವನ್ನು ಮರೆಯುವವರಾಗಬಾರದು.

ಮತ್ತೆ ಅಲ್ಲಾಹನ ಮೇಲೆ ಭರವಸೆ ಹೊಂದುವ ಗುಣವಾಗಿದೆ. ಆ ಕುರಿತು ರಸೂಲುಲ್ಲಾಹ್(ಸ) ರವರ ಮಾದರಿಗಳು ಮಹೋನ್ನತವಾಗಿವೆ, ಆ ಪೈಕಿ ಅಲ್ಲಾಹನು ಹೇಳಿದನು. **"ತವಕ್ಕಲ್ ಅಲಲ್ಲಾಹಿ ವಕಫಾ ಬಿಲ್ಲಾಹಿ ವಕೀಲಾ"**

(ಅನ್ನಿಸಾಅ–82) “ಅಲ್ಲಾಹನ ಮೇಲೆ ಭರವಸೆಯನ್ನಿಡು, ಕಾರ್ಯನಿರ್ವಾಹಕನಾಗಿ ಅಲ್ಲಾಹನು ಸಾಕು.”

ರಸೂಲುಲ್ಲಾಹ್(ಸ) ರವರ ಜೀವನದ ಎಲ್ಲ ಹಂತದಲ್ಲೂ ಈ ಮಾದರಿಗಳು ಕಾಣಲು ಸಾಧ್ಯವಿದೆ. ಅಷ್ಟೇ ಅಲ್ಲ ತಮ್ಮ ಜೀವನದ ಕೊನೆಯುಸಿರಿನಲ್ಲೂ ಅವರಿಗೆ ಈ ಚಿಂತೆ ಕಾಡುತ್ತಿತ್ತು. ನಾನು ಎಂದೂ ಅಲ್ಲಾಹನ ಮುಂದೆ ಅವನ ಭರವಸೆಯ ಮೇಲೆ ಕಿಂಚಿತ್ತೂ ಸಂಶಯ ಪಡುವ ಸ್ಥಿತಿಯಲ್ಲಿ ಹಾಜರಾಗುವಂತೆ ಆಗಬಾರದು. ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ. “ನನ್ನ ಬಳಿ ಅವರು ಏಳು ಅಥವಾ ಎಂಟು ದೀನಾರುಗಳನ್ನು ಇಟ್ಟಿದ್ದರು. ತಮ್ಮ ಕೊನೆಯ ದಿನಗಳಲ್ಲಿ ಹೇಳಿದರು. ಆಯಿಶಾ! ನಿಮ್ಮ ಬಳಿ ಇದ್ದ ಆ ಚಿನ್ನ ಏನಾಯಿತು? ಹಝ್ರತ್ ಆಯಿಶಾ ಹೇಳುತ್ತಾರೆ. ಅದು ನನ್ನ ಬಳಿ ಇದೆ. ಅವರು ಹೇಳಿದರು. ಅದನ್ನು ಸದಖಾ (ಧಾನ) ಮಾಡಿ. ತರುವಾಯ ಹಝ್ರತ್ ಆಯಿಶಾ ತಮ್ಮ ಯಾವುದೋ ಕಾರ್ಯದಲ್ಲಿ ತೊಡಗಿದ್ದರು. ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಮತ್ತೆ ಸ್ವಲ್ಪ ಎಚ್ಚರವಾದಾಗ ಕೇಳಿದರು. ಅದನ್ನು ಸದಖಾ (ದಾನ) ಮಾಡಿ ಆಯಿತೆ? ಹಝ್ರತ್ ಆಯಿಶಾ ಉತ್ತರ ನೀಡಿದರು. ಇನ್ನೂ ಮಾಡಲಿಲ್ಲ. ಹುಝೂರ್(ಸ) ಹೇಳಿದರು. ಹೋಗಿ ಈಗಲೇ ಹೋಗಿ, ಅದನ್ನು ನನ್ನ ಬಳಿಗೆ ತನ್ನಿ, ಅದನ್ನು ತರಿಸಿ ಕೈಯ ಮೇಲೆ ಇಟ್ಟು ಹೇಳಿದರು. ನಾನು ಅಲ್ಲಾಹನ ಮುಂದೆ ಆಗಲಿ ಹೋಗುವ ಸಮಯ ಈ ದೀನಾರುಗಳು ನಮ್ಮ ಬಳಿಯಿದ್ದರೆ ಅಲ್ಲಾಹನ ಮೇಲೆ ಭರವಸೆಯ ಮಾತು ಹೇಗೆ ಸತ್ಯವಾಗುವುದು. ಅದನ್ನು ಹೇಳಿ ದಾನ ಮಾಡಿಸಿದರು. (ಅತ್ತಬಕಾತುಲ್ ಕುಬ್ರಾ, ಸಂಪುಟ–2, ಪುಟ–183, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990)

ಆದರೆ ಇತರರಿಗೆ ಅವರು ಈ ಉಪದೇಶ ಮಾಡಿದರು. ನಾನು ಅಲ್ಲಾಹನ ಸಂದೇಶವಾಹಕ ಮತ್ತು ಅವನ ಪ್ರೀತಿಗೆ ಪಾತ್ರನಾಗಿರುವವನಾಗಿದ್ದೇನೆ. ಇದು ನನ್ನ ವರ್ತನೆ ಆಗಿದೆ. ನೀವು ಅಲ್ಲಾಹನ ಮೇಲೆ ಭರವಸೆಯನ್ನು ಹೊಂದಿದವರಾಗಿ ಮತ್ತು ತನ್ನ ಪರಿವಾರವನ್ನು ಕಷ್ಟ ಕಾಲದಿಂದ ರಕ್ಷಿಸಲು ನಿಮ್ಮ ಬಳಿ ಆಸ್ತಿ ಏನಾದರೂ ಇದ್ದರೆ ಅಥವಾ ಸಂಪತ್ತು ಇದ್ದರೆ 1/3 ಕ್ಕಿಂತ ಹೆಚ್ಚು ವಸಿಯ್ಯತ್ ಮಾಡಲು ಅನುಮತಿ ನೀಡಲಿಲ್ಲ (ಸಹಿಹುಲ್ ಬುಖಾರಿ, ಕಿತಾಬುಲ್ ವಸಾಯ, ಹದೀಸ್–2742)

ಆದುದರಿಂದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಆಸ್ತಿಪಾಲು ಮಾಡುವ ಬಗ್ಗೆ ಸವಿವರವಾಗಿ ಉಪದೇಶ ನೀಡಿರುವನು. ಹಝ್ರತ್ ರಸೂಲುಲ್ಲಾಹ್(ಸ) ಅವರ ಜೊತೆ ಹೀಗೆ ಹೇಳಿದರು. ಅದು ಸಂಥಥೀಯ ಹೃದಯದ ನಾಲೆಯಲ್ಲಿ ಒಂದು ಕಣಿವೆ ಇರುತ್ತದೆ. ಪ್ರತಿ ಮನುಷ್ಯನ ಹೃದಯದಲ್ಲಿ ಒಂದು ಕಾಲುವೆ ಇದೆ. ಒಂದು ಕಣಿವೆ ಇದೆ. ಯಾರ ಹೃದಯವು ಇವೆಲ್ಲ ಕಣಿವೆಗಳ ಹಿಂದೆ ಇರುತ್ತದೆಯೋ ಅಲ್ಲಾಹನು ಅವನಿಗೆ ಲೆಕ್ಕಿಸುವುದಿಲ್ಲ. ಯಾವ ಕಣಿವೆ ಅವನ ನಾಶಕ್ಕೆ ಕಾರಣವಾಗುತ್ತದೆ ಹೇಳಲಿಕ್ಕಾಗದು, ಅಲ್ಲಾಹನ ಮೇಲೆ ಭರವಸೆ ಹೊಂದಿದವನಿಗೆ ಅವನು ಆ ಎಲ್ಲ ಕಣಿವೆಗಳಿಂದಲೂ ರಕ್ಷಿಸುತ್ತಾನೆ. (ಸುನನ್ ಇಬ್ನೂ ಮಾಜ, ಕಿತಾಬುಝ್ಝುಹದ್, ಬಾಬ್ ಅತ್ತವಕ್ಕಲ್ ವಲ್ ಯಖೀನ್, ಹದೀಸ್–4166)

ಹೀಗೆ ಇಸ್ಲಾಮ್ ಧರ್ಮವು ಲೌಕಿಕ ಕಾರ್ಯಗಳಿಗೂ ಅನುಮತಿ ನೀಡುತ್ತದೆ. ಆದರೆ ಹಗಲು ರಾತ್ರಿ ಎನ್ನದೇ ಆಸ್ತಿಗಳಿಸಲು ಮತ್ತು ಲೌಕಿಕ ಮೋಹಕ್ಕೆ ಒಳಗಾಗಲು ಅನುಮತಿ ನೀಡುವುದಿಲ್ಲ. ಅಲ್ಲಾಹನ ಆರಾಧನೆ ಮತ್ತು ಅವನ ಮೇಲಿನ ಭರವಸೆಯು ನೈಜ ಉದ್ದೇಶವಾಗಿರಬೇಕು. ಆಗ ಅವನು ಲೌಕಿಕ ಆಪತ್ತುಗಳಿಂದ ರಕ್ಷಿಸಲ್ಪಡುವನು.

ರಸೂಲುಲ್ಲಾಹ್(ಸ) ತನ್ನ ಉನ್ನತಿಗೆ ಅಲ್ಲಾಹನ ಮೇಲೆ ಭರವಸೆ ಹೊಂದುವ ಕುರಿತು ಉಪದೇಶ ಮಾಡುತ್ತ ಹೇಳಿದರು. ನೀವು ಅಲ್ಲಾಹನ ಮೇಲೆ ಭರವಸೆಯ ಹಕ್ಕಿಯಂತೆ ಭರವಸೆಯನ್ನು ಹೊಂದುವವರಾದರೆ ಅವನು ಆ ಹಕ್ಕಿಗಳ ರೀತಿ ಅವು ಮುಂಜಾನೆ ಖಾಲಿ ಹೊಟ್ಟೆಯಲ್ಲಿ ಹೊರಡುತ್ತವೆ ಮತ್ತು ಸಂಜೆ ಹೊಟ್ಟೆ ತುಂಬಿಸಿಕೊಂಡು ಮರಳುತ್ತವೆ. ಅದೇ ರೀತಿ ನಿಮಗೆ ಆಹಾರ ನೀಡುವೆನು. (ಸುನನ್ ಇಬ್ನು ಮಾಜ, ಕಿತಾಬುಝ್ಝುಹುದ್, ಬಾಬ್ ಅತ್ತವಖ್ಖುಲ್ ವಲ್ ಯಖೀನ್, ಹದೀಸ್–4164)

ಆದುದರಿಂದ ಈ ಮಾತು ಸದಾ ನೆನಪಿಡಿ, ಅನ್ನದಾತರಲ್ಲಿ ಅಲ್ಲಾಹನು ಅತ್ಯುತ್ತಮನಾಗಿದ್ದಾನೆ. ಅದಕ್ಕಾಗಿ ತಮ್ಮ ಆರಾಧನೆಗಳನ್ನು ಬಲಿ ಕೊಡುವ ಅವಶ್ಯಕತೆ ಇಲ್ಲ. ಕಾರ್ಯ ಅವಶ್ಯವಾಗಿ ಕೈಗೊಳ್ಳಿ. ಆದರೆ ಭರವಸೆ ಮಾತ್ರ ಅಲ್ಲಾಹನ ಮೇಲಿಡಿ. ಕೆಲಸ ಕಾರ್ಯಗಳಿಗಾಗಿ ಆರಾಧನೆಗಳು ಬಲಿಯಾಗ ಕೂಡದು. ಹಝ್ರತ್ ರಸೂಲುಲ್ಲಾಹ್(ಸ) ರವರ ಅಲ್ಲಾಹನ ಮೇಲೆ ಭರವಸೆಯ ಬಗ್ಗೆ ಒಂದು ಸಂಧರ್ಭದಲ್ಲಿ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಹಝ್ರತ್ ಖಾತಮುಲ್ ಅಂಬಿಯಾ(ಸ) ರವರ ದೃಷ್ಟಾಂತಗಳನ್ನು ಅವಲೋಕಿಸಿದರೆ ಸ್ಪಷ್ಟವಾಗುತ್ತದೆ. ಹಝ್ರತ್ ರಸೂಲುಲ್ಲಾಹ್(ಸ) ಅಂತರಂಗದಲ್ಲೂ ಬಹಿರಂಗದಲ್ಲೂ ಏಕ ರೀತಿಯ ಶುದ್ಧತೆ ಹೊಂದಿದ್ದರು ಮತ್ತು ಅಲ್ಲಾಹನಿಗೋಸ್ಕರ ಸಮರ್ಪಿತರಾಗಿದ್ದರು. ಜನರ ಭಯ ಹಾಗೂ ಅಭಯದಿಂದ ಮುಕ್ತರಾಗಿ ಕೇವಲ ಅಲ್ಲಾಹನ ಮೇಲೆ ಭರವಸೆ ಹೊಂದಿದವರಾಗಿದ್ದರು. ಅವರು ಅಲ್ಲಾಹನ ಮರ್ಜಿ ಮತ್ತು ಆಶಯದಲ್ಲಿ ತಲ್ಲೀನರಾಗಿ ಏಕದೇವತ್ವ ಸಾರುವುದರಿಂದ ಏನೆಲ್ಲ ಆಪತ್ತುಗಳು ಎದುರಾಗುವವು ಎಂದು ಲೆಕ್ಕಿಸಲಿಲ್ಲ. ಬಹುದೇವತಾರಾಧಕರ ಕೈಗಳಿಂದ ಏನೆಲ್ಲ ದುಃಖ ಕಷ್ಟಗಳನ್ನು ಎದುರಿಸಬಹುದೆಂದು ಯೋಚಿಸಲಿಲ್ಲ. ಬದಲಾಗಿ ಎಲ್ಲ ದೌರ್ಜನ್ಯಗಳನ್ನು, ಕಷ್ಟಗಳನ್ನು ಮತ್ತು ಆಪತ್ತುಗಳನ್ನು ತನ್ನ ಆತ್ಮಕ್ಕೆ ವಹಿಸಿಕೊಂಡು ತನ್ನ ಪ್ರಭುವಿನ ಆದೇಶಗಳನ್ನು ಪಾಲಿಸಿದರು. ಒಬ್ಬ ಸುಧಾರಕನಿಗಿರುವ ಮತ್ತು ಹಿತಬಯಸುವ ಹಾಗೂ ಉಪದೇಶಕನಾದ ನೆಲೆಯಲ್ಲಿ ಎಲ್ಲವೂ ನಿರ್ವಹಿಸಿದರು. ಯಾರ ಭಯವೂ ಅಡ್ಡ ಬರಲಿಲ್ಲ. ನಾವು ಸತ್ಯವಾಗಿ ಹೇಳುವೆವು. “ಎಲ್ಲಾ ಪ್ರವಾದಿಗಳ ದೃಷ್ಟಾಂತಗಳಲ್ಲಿ ಇಂತಹ ಅಪಾಯಕರ ಘಟ್ಟಗಳಲ್ಲಿ ಈ ಪರಿಯ ಅಲ್ಲಾಹನ ಮೇಲೆ ಭರವಸೆ ಹೊಂದಿ ಬಹುದೇವತಾರಾಧನೆಯಿಂದ ತಡೆದು ಸೃಷ್ಟಿ ಪೂಜೆಯಿಂದ ತಡೆದವರು ಮತ್ತು ಅದರ ಪರಿಣಾಮವಾಗಿ ಅಷ್ಟೊಂದು ಶತ್ರುಗಳನ್ನು ಎದುರಿಸಿ ತೋರಿದ ಎದೆಗಾರಿಕೆ ಮತ್ತು ದೃಢತೆ ತೋರಿದ ಒಂದೇ ಒಂದು ಉದಾಹರಣೆ ಸಾಬೀತುಗೊಂಡಿಲ್ಲ. (ಬರಾಹೀನ್ ಅಹ್ಮದಿಯಾ, ಭಾಗ–2, ರೂಹಾನಿ ಖಝಾಯೀನ್ ಸಂಪುಟ–1, ಪುಟ–111–112)

ಕೃತಜ್ಞಕಾರಿಯು ಉನ್ನತ ಗುಣಗಳಲ್ಲಿ ಒಂದಾಗಿದೆ. ಈ ಗುಣದಲ್ಲಿ ನಮ್ಮ ನೇತಾರರಾದ ರಸೂಲುಲ್ಲಾಹ್(ಸ) ರವರ ಮಾದರಿ ಮತ್ತು ಜೀವನಶೈಲಿ ಹೇಗಿತ್ತು. ರಸೂಲುಲ್ಲಾಹ್(ಸ) ಯವಾಗಲೂ ಹೇಗೆ ಕೃತಜ್ಞಕಾರಿಯಾಗಿರಬೇಕು ಎಂಬ ಹಂಬಲ ಹೊಂದಿದ್ದರು. ಅವರು ಅಲ್ಲಾಹನ ಸರ್ವಶ್ರೇಷ್ಠ ಕೃತಜ್ಞಕಾರಿ ದಾಸರಾಗಿ ಇರಬೇಕೆಂದು ಇಷ್ಟಪಡುತ್ತಿದ್ದರು. ಈ ಸಂಬಂಧದ ಹದೀಸ್ ಈ ರೀತಿ ಇದೆ. ಈ ಉದ್ದೇಶಕ್ಕಾಗಿ ಅವರು ಪ್ರಾರ್ಥನೆ ಮಾಡುತ್ತಿದ್ದರು. ಓ ಅಲ್ಲಾಹನೆ! ನನಗೆ ಕೃತಜ್ಞನಾಗುವವನ್ನಾಗಿ ಮತ್ತು ಅತಿ ಹೆಚ್ಚು ನಿನ್ನನ್ನು ಸ್ತುತಿಸುವನ್ನಾಗಿ ಮಾಡು. (ಸುನನ್ ಅಬೂ ದಾವೂದ್, ಕಿತಾಬ್ ಅಲ್ವಿತರ್, ಹದೀಸ್–1510)

ಇನ್ನೊಂದು ವರದಿಯಲ್ಲಿ ಈ ಪದಗಳ ಹೆಚ್ಚಳವಿದೆ. ಓ ಅಲ್ಲಾಹನೆ! ನನ್ನನ್ನು ನಿನ್ನ ಅತಿ ಹೆಚ್ಚು ಕೃತಜ್ಞಕಾರಿ ಮತ್ತು ನಿನ್ನ ಉಪದೇಶಗಳನ್ನು ಅನುಸರಿಸುವ ಮತ್ತು ನಿನ್ನ ವಸಿಯ್ಯತ್ ಪಾಲಿಸುವವನ್ನಾಗಿ ಮಾಡು. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–3, ಪುಟ–216, ಹದೀಸ್–8087)

ಎಂತಹ ವಿನಯದ ವಿಷಯವಾಗಿದೆ. ಲೋಕದಲ್ಲಿ ಎಲ್ಲರಿಗಿಂತ ಕೃತಜ್ಞಕಾರಿಯಾದ ಅವರು ಈ ಪ್ರಾರ್ಥನೆಯನ್ನು ಮಾಡುತ್ತಿದ್ದಾರೆ. ನಾನು ಎಲ್ಲರಿಗಿಂತ ಹೆಚ್ಚು ಕೃತಜ್ಞತೆಯಾಚಿಸುವವನಾಗ ಬಯಸುತ್ತೇನೆ.

ಒಂದು ಸಂದರ್ಭದಲ್ಲಿ ಅವರು ಒಂದು ರೊಟ್ಟಿಯ ತುಂಡಿನ ಮೇಲೆ ಖರ್ಜೂರವನ್ನಿಟ್ಟು ತಿನ್ನುತ್ತಿದ್ದರು ಮತ್ತು ಹೇಳುತ್ತಿದ್ದರು. ಈ ಖರ್ಜೂರವು ರೊಟ್ಟಿಯ ಪದಾರ್ಥವಾಗಿದೆ. ಅದಕ್ಕಾಗಿ ಕೃತಜ್ಞತೆ ವ್ಯಕ್ತಪಡಿಸುತ್ತಿದ್ದರು. (ಸುನನ್ ಅಬೂದಾವೂದ್, ಕಿತಾಬುಲ್ ಅತ್‌ಇಮ, ಬಾಬ್ ಫಿತ್ತಮರ್, ಹದೀಸ್–3830)

ಅಧಿಕ ಸಮಯ ಹುಳಿಯಿಂದ ಅಥವಾ ನೀರಿನಿಂದಲೇ ರೊಟ್ಟಿ ತಿನ್ನುತ್ತಿದ್ದರು ಮತ್ತು ಅದರ ಮೇಲೆಯೂ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುತ್ತಿದ್ದರು. (ಸಹೀಹುಲ್ ಅಸರ್ ವ ಜಮೀಲುಲ್ ಇಬ್ರ್ ಮಿನ್ ಸೀರತ್ ಖೈರುಲ್ ಬಶರ್(ಸ), ಸಂಪುಟ–1, ಪುಟ–254, ರವಾಎಲ್ ಮಮ್‌ಲಕ ಜಿದ್ದಹ್ 2010)

ಇಂದು ನಮ್ಮಲ್ಲಿ ಹಲವಾರು ಉತ್ತಮ ಆಹಾರ ಒದಗಿ ಬಂದರೂ ಸಾವಿರ ರೀತಿಯ ನಖರೆ (ಭೂಟಾಟಿಕೆ) ತೋರಿಸುತ್ತೇವೆ. ಅದೇ ಕಾರಣದಿಂದ ಮನೆಗಳಲ್ಲಿ ಅಶಾಂತಿ ಹುಟ್ಟುತ್ತದೆ. ಪತ್ನಿಯು ಅಡಿಗೆ ಸರಿಯಾಗಿ ಮಾಡಲಿಲ್ಲ ಇತ್ಯಾದಿ.

ಮಕ್ಕ ವಿಜಯದ ಸಮಯ ರಸೂಲುಲ್ಲಾಹ್(ಸ) ರವರ ವಿನಯ ಹಾಗೂ ಕೃತಜ್ಞತೆ ಭಾವ ಉತ್ತುಂಗಕ್ಕೆ ತಲುಪಿತ್ತು. ವರದಿಯಿಂದ ತಿಳಿದುಬರುತ್ತದೆ. ರಸೂಲುಲ್ಲಾಹ್(ಸ) “ಝಿತ್ತನಾ” ಸ್ಥಳದಲ್ಲಿ ತಲುಪಿ ಕೆಂಪು ಎಮನಿ ಬಟ್ಟೆಯ ಪಗಡಿ ಕಟ್ಟಿಕೊಂಡು ತನ್ನ ಸವಾರಿಯ ಮೇಲೆ ನಿಂತುಕೊಂಡರು. ಅಲ್ಲಾಹನು ನೀಡಿದ ವಿಜಯದ ಗೌರವವನ್ನು ಕೃತಜ್ಞಭಾವದಿಂದ ವಿನಯಪೂರ್ವಕವಾಗಿ ತಮ್ಮ ಶಿರವನ್ನು ಎಷ್ಟೊಂದು ಭಾಗಿಸಿದರೆಂದರೆ ಅವರ ಪವಿತ್ರ ಗಡ್ಡ ಕೂದಲುಗಳು ಸವಾರಿಯ ಡುಬ್ಬಕ್ಕೆ ತಾಗುತ್ತಿದ್ದವು. (ಸೀರತ್ ಇಬ್ನೂ ಹಶ್ಯಾಮ್, ಪುಟ–546, ಝಿಕ್ರುಲ್ ಅಸ್ಬಾಬ್....... ದಾರ್ ಇಬ್ನೆ ಜಝುಮ್ ಬೈರೂತ್ 2009)

ಮತ್ತು ಅವರ ಉದಾರತೆ ಹಾಗೂ ಕೃತಜ್ಞತೆಯು ಒಂದು ಮಹೋನ್ನತವಾದ ಉದಾಹರಣೆ ಹೀಗಿದೆ. ಮಕ್ಕದ ಅವಿಶ್ವಾಸಿಗಳು ಮುಸಲ್ಮಾನರ ಮೇಲೆ ಅವ್ಯಹಾತ ದೌರ್ಜನ್ಯ ಎಸಗುತ್ತಿದ್ದಾಗ ಮುಸಲ್ಮಾನರು ಹಬ್‌ಶಾಕ್ಕೆ ವಲಸೆ ಹೋಗಬೇಕಾಯಿತು. ಅಲ್ಲಿಯ ಅರಸನು ಅವರಿಗೆ ಶರಣ ನೀಡಿದ್ದರು. ರಸೂಲುಲ್ಲಾಹ್(ಸ) ಆ ಅರಸನ ಉಪಕಾರವನ್ನು ಸದಾ ನೆನಪಿಟ್ಟುಕೊಂಡರು. ಒಮ್ಮೆ ಆ ನಜಾಶಿ ಅರಸನ ಒಂದು ತಂಡ ರಸೂಲುಲ್ಲಾಹ್(ಸ) ಬಳಿ ಹಾಜರಾಗಲು ಬರುತ್ತಿದ್ದರು. ರಸೂಲುಲ್ಲಾಹ್(ಸ) ಸ್ವಯಂ ಅವರ ಸ್ವಾಗತಕ್ಕಾಗಿ ಹೊರಟು ನಿಂತರು. ಸಹಾಬರು ಹೇಳಿದರು. ಓ ಪ್ರವಾದಿಗಳೆ! ಅವರ ಸ್ವಾಗತಕ್ಕಾಗಿ ನಾವಿದ್ದೇವೆ. ಅವರ ಆತಿಥ್ಯವು ನಾವು ಮಾಡುವೆವು. ಸ್ವಾಗತವೂ ಕೊಡುವೆವು.

ನೀವೇಕೆ ಕಷ್ಟಪಡುತ್ತಿದ್ದೀರಿ. ರಸೂಲುಲ್ಲಾಹ್(ಸ) ಹೇಳಿದರು. ಆ ಜನರು ನಮ್ಮ ಶಿಷ್ಯರೊಡನೆ ತುಂಬ ಅದರಿಂದ ವರ್ತಿಸಿದ್ದರು. ಒಳ್ಳೆಯ ರೀತಿಯಿಂದ ವ್ಯವಹರಿಸಿದ್ದರು. ಆದುದರಿಂದ ಸ್ವಯಂ ತಾನು ಮುಂದಾಗಿ ಅವರ ಋಣವನ್ನು ತೀರಿಸಬಯಸುತ್ತೇನೆ. (ಅಸ್ಸೀರತುಲ್ ಹಲ್‌ಬೀಯ ಸಂಒಉಟ–3, ಪುಟ–72, ದಾರುಲ್ ಇಲ್‌ಮಿಯಾ ಬೈರೂತ್ 2002)

ಇದರಲ್ಲಿ ಇಲ್ಲಿ ವಲಸೆ ಬಂದ ಜನರಿಗೆ ಪಾಠವಿದೆ. ಇಲ್ಲಿಯ ಸರಕಾರವು ನಿಮ್ಮನ್ನು ಸ್ವೀಕರಿಸಿ ಹಲವು ಸವಲತ್ತುಗಳನ್ನು ಒದಗಿಸಿಕೊಟ್ಟಿದೆ. ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತ ಆ ದೇಶಗಳ ಒಳಿತಿಗಾಗಿ ತಮ್ಮ ಸಾಮರ್ಥ್ಯಗಳನ್ನು ಉಪಯೋಗಿಸಿಕೊಡಬೇಕು. ಅವರಿಗೆ ಇಸ್ಲಾಮಿನ ಸುಂದರವಾದ ಶಿಕ್ಷಣವನ್ನು ಕೇವಲ ಶೈಕ್ಷಣಿಕವಾಗಿ ಅಲ್ಲ. ಬದಲು ಕಾರ್ಯರೂಪದಲ್ಲಿ ಪ್ರದರ್ಶಿಸಿ ತೋರಿಸಬೇಕು. ನಿಜವಾದ ಇಸ್ಲಾಮ್ ಏನೆಂಬುದು ಮತ್ತು ಸದಾ ನೆನಪಿಡಿರಿ ಯಾವುದೇ ರೀತಿಯಲ್ಲಿ ಎಂದೂ ಅವರಿಗೆ ಹಾನಿಯುಂಟು ಮಾಡಬಾರದು ತಪ್ಪು ದಾರಿಯಿಂದ ಅವರಿಂದ ಲಾಭ ಪಡೆಯಬಾರದು. ಯಾವುದೇ ಸವಲತ್ತು ನಿರೀಕ್ಷಿಸಬಾರದು. ಹಝ್ರತ್ ರಸೂಲುಲ್ಲಾಹ್(ಸ) ರವರಿಂದ ಯಾವ ಧರ್ಮ ನಮಗೆ ದೊರೆತಿದೆಯೋ ಮತ್ತು ಯಾವ ರೀತಿ ಸರ್ವ ಜನರ ಸೇವಾಭಾವ ನಮಗೆ ದೊರೆತಿದೆಯೋ ಅದಕ್ಕೆ ತಕ್ಕಂತೆ ನಾವು ಕೃತಜ್ಞರಾಗಬೇಕಾಗಿದೆ. ಈ ಪೈಕಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. "ಇದು ಅಲ್ಲಾಹನ ಅಪಾರವಾದ ಅನುಗ್ರಹದ ಫಲವಾಗಿದೆ. ಅವನು ಪರಿಪೂರ್ಣ ಸರಿಯಾದ ನೇರವಾದ ಮಾರ್ಗವನ್ನು ತಮ್ಮ ಪ್ರೀತಿಯ ಪ್ರವಾದಿ(ಸ) ರವರ ಮಾಧ್ಯಮವಾಗಿ ನಮಗೆ ಯಾವುದೆ ಶ್ರಮವಿಲ್ಲದೆ ದಯಪಾಲಿಸಿದ್ದಾನೆ. ಯಾವುದೇ ಕಷ್ಟನಷ್ಟವಿಲ್ಲದೆ ನಮಗೆ ಸನ್ಮಾರ್ಗವನ್ನು ತೋರಿಸಿದ್ದಾನೆ. ಆ ಮಾರ್ಗವು ಈ ಕಾಲದಲ್ಲಿ ನಿಮಗೆ ದಯಪಾಲಿಸಿದ್ದಾನೆ. ಅದು ಹಲವು ಮತಪಂಡಿತರಿಗೂ ಇನ್ನೂ ಲಭ್ಯವಾಗಿಲ್ಲ. ಆದುದರಿಂದ ಅಲ್ಲಾಹನ ಈ ಔದಾರ್ಯ ಮತ್ತು ಅನುಗ್ರಹದ ಪ್ರತಿ ಕೃತಜ್ಞರಾಗಿರಿ. ಕೃತಜ್ಞರಾಗಿರುವುದೇನೆಂದರೆ, ನಮ್ಮ ಸತ್ಯ ಹಾಗೂ ಸರಿಯಾದ ವಿಶ್ವಾಸಗಳ ನಂತರ ಅದರ ಇನ್ನೊಂದು ಮುಖವಾದ ಸನ್ನಡತೆ ವಹಿಸುವವರಾಗಿರಿ. ಆ ಮೂಲಕ ಸಹಾಯ ಪಡೆದು ಪ್ರರ್ಥಿಸಿರಿ. ಆ ಸತ್ಪಥದಲ್ಲಿ ನಮಗೆ ದೃಢವಾಗಿ ನೆಲೆ ನಿಲ್ಲುವಂತೆ ಮತ್ತು ಸತ್ಕರ್ಮ ಗೈಯ್ಯುವ ಭಾಗ್ಯ ದಯಪಾಲಿಸಲಿ! (ಮಲ್ಫೂಝಾತ್ ಸಂಪುಟ–1, ಪುಟ–149–150).

ಇದಾಗಿದೆ ಓರ್ವ ಅಹ್ಮದಿಯ ನಿಜವಾದ ಕೃತಜ್ಞತೆಯ ವಿಧಾನ, ಇನ್ನೊಂದು ಗುಣವು ಅಮಾನತ್ತು ಮತ್ತು ವಚನಬದ್ಧತೆಯಾಗಿದೆ, ಅಲ್ಲಾಹನು ನುಡಿಯುತ್ತಾನೆ.

**"ವಲ್ಲಝೀನ ಹುಮ್ ಲಿಅಮಾನಾತಿಹಿಮ್ ವ ಅಹದಿಹಿಮ್ ರಾಊನ್** (ಅಲ್‌ಮೂಮಿನೂನ್–9) ಅವರು (ಆ ಸತ್ಯವಿಶ್ವಾಸಿಗಳು) ತಮ್ಮ ಅಮಾನತ್ತು ಮತ್ತು ಒಡಂಬಡಿಕೆಗಳ ಬಗ್ಗೆ ಲಕ್ಷ್ಯವುಳ್ಳವರು." ಇದರ ಮಹೋನ್ನತವಾದ ಮಾದರಿ ಹಝ್ರತ್ ರಸೂಲುಲ್ಲಾಹ್(ಸ) ಸಾಕ್ಷಾತ್ ರೂಪದಲ್ಲಿ ನಮಗೆ ತೋರಿಸಿಕೊಟ್ಟಿದ್ದಾರೆ.

ಒಂದು ವರದಿ ಹೀಗಿದೆ. "ಇಸ್ಲಾಮ್ ಸೈನ್ಯವು ಖೈಬರ್ ಪ್ರದೇಶವನ್ನು ವಶಪಡಿಸಿಕೊಂಡಿದ್ದರು. ಆ ಸಮಯ ಅಲ್ಲಿಯ ಯಹೂದಿ ಸರದಾರನ ಗುಲಾಮನಾದ ಒಬ್ಬ ದನಗಾಹಿಯು. ದನಗಳ ಸಮೇತ ಇಸ್ಲಾಮಿ ಸೈನ್ಯದ ಕ್ಷೇತ್ರದೊಳಗೆ ಬಂದು ಸೇರಿ ಮುಸಲ್ಮಾನನಾಗಿದ್ದನು. ರಸೂಲುಲ್ಲಾಹ್(ಸ) ರವರ ಬಳಿ ಬಂದು ನಿವೇದಿಸಿಕೊಂಡನು. "ಅಲ್ಲಾಹನ ಸಂದೇಶವಾಹಕರೇ! ನಾನು ಈಗ ಮುಸಲ್ಮಾನನಾಗಿದ್ದೇನೆ. ಮರಳಿ ಹೊಗಲು ಇಚ್ಛಿಸುವುದಿಲ್ಲ. ಮರಳಿ ಹೋದರೆ ನನ್ನ ಮೇಲೆ ದೌರ್ಜನ್ಯ ಮಾಡುವರು. ಈ ಕುರಿಗಳು ನನ್ನ ಬಳಿ ಇವೆ. ಈಗ ನಾನು ಏನು ಮಾಡಲಿ, ಇದು ಯಹೂದಿನ ಕುರಿಗಳಾಗಿವೆ. ಅವನೇ ಅದರ ಮಾಲೀಕನು. ಹುಝೂರ್(ಸ) ಹೇಳಿದರು. ಆ ಕುರಿಗಳನ್ನು ಆ ಕ್ಷೇತ್ರದ ಮುಖ ಮಾಡಿ ಬಿಟ್ಟು ಬಿಡಿ. ಅದು ಸ್ವಯಂ ತನ್ನ ಮಾಲೀಕನ ಬಳಿ ತಲುಪುವುದು. ಹಾಗೆಯೇ ಮಾಡಲಾಯಿತು ಮತ್ತು ಆ ಕೋಟೆಯವರು ಕುರಿಗಳನ್ನು ಪಡೆದರು (ಸೀರತ್ ಇಬ್ನು ಹಶ್ಯಾಮ್, ಪುಟ–517, ಝಿಕ್ರುಲ್ ಮಸೀರ್ ಇಲಲ್ ಖೈರ್, ದಾರ್ ಇಬ್ನೆ ಹಝುಮ್ ಬೈರೂತ್ 2009)

ಇದಾಗಿದೆ ಅಮಾನತ್, ಪ್ರಮಾಣಿಕತೆಯ ಅದ್ವಿತೀಯ ಮಾದರಿ. ಯುದ್ದ ಸ್ಥಿತಿಯಾಗಿದೆ. ಶತ್ರುಗಳ ಸಂಪತ್ತು ಕೈವಶವಾಗಿದೆ. ಆದರೆ ಮುಸಲ್ಮಾನನಾದವನಿಗೆ ಕಳಿಸಿದ ಮೊದಲ ಪಾಠವೆಂದರೆ, ಒಬ್ಬ ಮುಸಲ್ಮಾನನಿಗೆ ಅಮಾನತ್ ಪ್ರಮಾಣೀಕತೆ ಬಹುಮುಖ್ಯವಾಗಿರುತ್ತದೆ. ಆ ಸಂಪತ್ತಿನ ಮೇಲೆ ನಿಮ್ಮ ಹಕ್ಕು ಇಲ್ಲ. ನಮ್ಮ ಹಕ್ಕು ಇಲ್ಲ. ಆ ಸಂಪತ್ತನ್ನು ಅದರ ಮಾಲೀಕರಿಗೆ ಮರಳಿಸಿಬಿಡಿರಿ. ಇಂದು ಅಭಿವೃದ್ಧಿಶೀಲ ಸಮಾಜದಲ್ಲಿ ಯುದ್ಧ ಸ್ಥಿತಿಯಲ್ಲಿ ಈ ಮಟ್ಟದ ಮಾದರಿ ಲೋಕದಲ್ಲಿಯೇ ಎಲ್ಲೂ ಕಾಣಸಿಗದು. ಇಸ್ಲಾಮಿನ ಮೇಲೆ ಮತ್ತು ಇಸ್ಲಾಮಿನ ಶಿಕ್ಷಣದ ಮೇಲೆ ಆಕ್ಷೇಪ ಎತ್ತುವುದರಲ್ಲಿಯೇ ಅದರ ಕೊರತೆ ಹೆಚ್ಚಾಗಿ ಕಂಡುಬರುತ್ತದೆ.

ಇನ್ನೊಂದು, ಒಡಂಬಡಿಕೆ ಪಾಲನೆಯಾಗಿದೆ. ರಸೂಲುಲ್ಲಾಹ್(ಸ) ರವರ ಒಡಂಬಡಿಕೆ ಪಾಲನೆ ಕುರಿತು ಅವರ ಶತ್ರುಗಳು ಸಹ ಒಪ್ಪಿಕೊಳ್ಳುತ್ತಾರೆ. ಹರ್‌ಖುಲ್ ದರಬಾರಿನಲ್ಲಿ ಅಬು ಸುಫಿಯಾನನಿಗೆ ಈ ಸತ್ಯ ಹೇಳಬೇಕಾಯಿತು. "ಈ ವ್ಯಕ್ತಿಯು ಎಂದೂ ನಮ್ಮೊಡನೆ ಮಾಡಿಕೊಂಡ ಒಡಂಬಡಿಕೆಗಳನ್ನು ಉಲ್ಲಂಘಿಸಲಿಲ್ಲ." (ಸಹೀಹ್ ಮುಸ್ಲಿಮ್, ಕಿತಾಬುಲ್ ಜಿಹಾದ್ ವಸ್ಸೈರ್....... ಹದೀಸ್–1773)

ಸುಲಹ್ ಹುದೇಬಿಯಾ ಸಂದರ್ಭದಲ್ಲಿ ಒಡಂಬಡಿಕೆ ಬರೆಯಲಾಗುತ್ತಿತ್ತು. ಅದೇ ಸಮಯಕ್ಕೆ ಓರ್ವ ವ್ಯಕ್ತಿಯನ್ನು ಸರಪಳಿಗಳಿಂದ ಹಿಡಿದಿಟ್ಟು ತರಲಾಯಿತು. ಅವನು ಮುಸಲ್ಮಾನನಾದ ಕಾರಣ ಸರಪಳಿಗಳಿಂದ ಬಂಧಿಸಲಾಗಿತ್ತು. ಅವನು ಅಭಯ ಯಾಚಿಸುತ್ತಾನೆ. ಆದರೆ ಅವಿಶ್ವಾಸಿಯಾದ ಅವನ ತಂದೆ ಅಲ್ಲೇ ಉಪಸ್ಥಿತನಾಗಿರುತ್ತಾನೆ. ಅವನ ತಂದೆ ರಸೂಲುಲ್ಲಾಹ್(ಸ) ರಿಗೆ ಹೇಳುತ್ತಾನೆ. "ಈಗ ನಮ್ಮ ಒಡಂಬಡಿಕೆ ಆಗಿ ಹೋಗಿದೆ. ನಮ್ಮ ಯಾವ ವ್ಯಕ್ತಿಯೂ ನಿಮ್ಮ ಜೊತೆ ಹೋಗಲಿಕ್ಕಿಲ್ಲ. ಆದುದರಿಂದ ತಾವು ಅವನನ್ನು ಕರೆದುಕೊಂಡು ಹೋಗಲು ಆಗುವುದಿಲ್ಲ. ಅವನು ನಿಮ್ಮ ಅಭಯ ಯಾಚಿಸುತ್ತಿದ್ದಾನೆ. ನಿಮ್ಮ ಬಳಿ ಬರಲು ಭಿಕ್ಷೆ ಬೇಡುತ್ತಿದ್ದಾನೆ ಆ ವ್ಯಕ್ತಿ ಎಷ್ಟೋ ಬೊಬ್ಬೆಯಿಡುತ್ತಾನೆ. ನಾನು ಅವಿಶ್ವಾಸಿಗರಲ್ಲಿ ಮರಳಿ ಹೋಗುವಂತಾಗುವುದೇ, ಅವರು ನನಗೆ ಕಷ್ಟಕೊಡುವುದಾದರೆ, ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ಹೌದು ಈಗ ಒಡಂಬಡಿಕೆಯಾಗಿದೆ. ಅದಾಗ್ಯೂ ಆಗಷ್ಟೇ ಒಡಂಬಡಿಕೆ ಬರೆಯಲಾಗುತ್ತಿತ್ತು. ಕೆಲವು ಶರತ್ತುಗಳು ಮಾತ್ರ ಬರೆಯಲಾಗಿತ್ತು. ಇನ್ನೂ ಹಸ್ತಾಕ್ಷರವು ಹಾಕಿರಲಿಲ್ಲ. ಆದರೂ ರಸೂಲುಲ್ಲಾಹ್(ಸ) ಹೇಳುತ್ತಾರೆ. ಒಡಂಬಡಿಕೆ ಬರೆಯಲಾದ ಕಾರಣ ಒಂದು ದೊಡ್ಡ ಗುರಿ ಸಾಧನೆಗೋಸ್ಕರ ಈ ಒಡಂಬಡಿಕೆಯ ಕಾರಣ ನಿನಗೆ ತ್ಯಾಗ ಮಾಡಬೇಕಾಗುತ್ತದೆ. ಆದುದರಿಂದ ನೀವು ಮರಳಿ ಹೋಗಿರಿ. ತಕ್ಷಣ ಇದನ್ನು ಸಹ ಹೇಳಿದರು. ನೀವು ಕೆಲವು ದಿನಗಳವರೆಗೆ ಸಹಿಸಿಕೊಳ್ಳಿರಿ. ನಾನು ನಿಮಗೆ ಸುವಾರ್ತೆ ನೀಡುವೆನು. ಅಲ್ಲಾಹನು ನಿಮಗಾಗಿ ಸರಳ ಮಾರ್ಗ ತೋರುವನು. ರಸೂಲುಲ್ಲಾಹ್(ಸ) ಹೇಳಿದರು. ಈ ಒಡಂಬಡಿಕೆಯ ಕಾರಣ ನಾನು ವಿವಶನಾಗಿದ್ದೇನೆ. ಏಕೆಂದರೆ ನಾವು ಒಡಂಬಡಿಕೆಗಳನ್ನು ಉಲ್ಲಂಗಿಸುವುದಿಲ್ಲ. (ಸೀರತ್ ಇಬ್ನೆ ಹಿಶ್ಯಾಮ್, ಪುಟ–504, ದಾರ್ ಇಬ್ನೆ ಹಝುಮ್ ಬೈರೂತ್ 2009)

ಇದಾಗಿತ್ತು ಒಡಂಬಡಿಕೆಯ ಮಟ್ಟ. ಇಂದಿನ ಲೌಕಿಕ ಸರಕಾರಗಳು ಅದರ ಸಮೀಪಕ್ಕೂ ನುಸುಳುವುದು ಕಷ್ಟಸಾಧ್ಯವಾಗಿದೆ. ಇಂದು ಒಂದು ಒಡಂಬಡಿಕೆಯಾಗಿತ್ತು. ನಾಳೆಯೇ ಮುರಿದು ಬೀಳುತ್ತದೆ. ಆದರೆ ಅದರ ಜೊತೆಯಲ್ಲಿ ನಾವು ಕಲಿಯಬೇಕಾದುದೇನೆಂದರೆ ನಾವು ನಮ್ಮ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಮ್ಮ ವಚನಬದ್ಧತೆಯ ಮಟ್ಟ ಯಾವ ಮಟ್ಟದ್ದಾಗಿದೆ. ದಿನನಿತ್ಯದ ಜೀವನದಲ್ಲಿ ನಮಗೆ ಪರಿಶೀಲನೆ ಮಾಡಿಕೊಳ್ಳಬೇಕಾಗಿದೆ. ತಮ್ಮ ಗೃಹ ಜೀವನದಲ್ಲೂ ಆ ಮಾದರಿಗಳನ್ನು ನೋಡಬೇಕು. ನಾವು ವಚನಬದ್ಧರಾಗಿದ್ದೆವು. ಹಝ್ರತ್ ರಸೂಲುಲ್ಲಾಹ್(ಸ) ರವರ ಗೃಹ ಜೀವನದಲ್ಲೂ ವಚನ ಪಾಲನೆಯ ಕುರಿತು ಹೇಳಿದರು. ಅಂತ್ಯ ದಿನದಂದು ಒಬ್ಬ ವ್ಯಕ್ತಿ ತನ್ನ ಪತ್ನಿಯೊಂದಿಗೆ ಸಂಬಂಧ ಸ್ಥಾಪಿಸಿಯೂ ಅವಳ ರಹಸ್ಯಗಳನ್ನು ಬಹಿರಂಗ ಮಾಡುವನಾದರೆ ಅವನು ಮಹಾದ್ರೋಹಿ ಎಂದು ಪರಿಗಣಿಸಲ್ಪಡುವನು. (ಸಹೀಹ್ ಮುಸ್ಲಿಮ್, ಕಿತಾಬುನ್ನಿಕಾಹ್, ಹದೀಸ್–1437)

ಇಂದು ನಾವು ಕಾಣುತ್ತಿದ್ದೇವೆ. ಹಲವು ಜನರು ಈ ಕೀಳುಮಟ್ಟದ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅತ್ಯಂತ ನೀಚ ಮತ್ತು ಅಸಹ್ಯ ವರ್ತನೆ ತೋರುತ್ತಿದ್ದಾರೆ. ಕೇವಲ ಮಾತುಗಳಿಂದ ಅಲ್ಲ ಜನರಿಗೆ ವಾಟ್ಸ್‌ಆಪ್‌ನ ಮೇಲೆ ಇತ್ತು. ಇನ್ನಿತರ ಮಾಧ್ಯಮದ ಮೂಲಕ ಸಂದೇಶಗಳನ್ನು ಕಳುಹಿಸಿ, ಟ್ವಿಟರ್ ಮೂಲಕ ಮಾತುಗಳನ್ನು ಹರಡಿಬಿಡುತ್ತಾರೆ. ನಿಸ್ಸಂದೇಹವಾಗಿ ಅವರು ಮಹಾದ್ರೋಹಿಯಾಗಿದ್ದಾರೆ. ಅಲ್ಲಾಹನು ಅದನ್ನು ನಿಷೇಧಗೊಳಿಸಿರುವನು. ಪ್ರತ್ಯೇಕಗೊಂಡರೂ ಒಬ್ಬರು ಈ ರೀತಿ ಮತ್ತೊಬ್ಬರ ರಹಸ್ಯಗಳನ್ನು ಬಯಲು ಮಾಡುವ ಹಕ್ಕು ಹೊಂದಿರುವುದಿಲ್ಲ. ಇದು ಅತ್ಯಂತ ದ್ರೋಹದ ಕೆಲಸವಾಗಿದೆ. ಇದು ಅಲ್ಲಾಹನ ಪ್ರಕೋಪಕ್ಕೆ ಗುರಿಯಾಗುವ ಕೆಲಸವಾಗಿದೆ. ಅಲ್ಲಾಹನು ಈ ಬಗ್ಗೆ ವಿಚಾರಿಸುವವನಾಗಿದ್ದಾನೆ.

ಆದುದರಿಂದ ಇಂತಹ ಜನರು ಚಿಂತಿಸಬೇಕು. ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ವಚನಪಾಲನೆಯ ಕುರಿತು ಹೀಗೆ ಹೇಳುತ್ತಾರೆ. ಎಂತಹ ಭಾಗ್ಯವಂತರಾಗಿದ್ದಾರೆ. ಆ ಜನರು ಅವರು ತಮ್ಮ ಹೃದಯಗಳನ್ನು ಪರಿಶುದ್ಧಗೊಳಿಸಿಕೊಳ್ಳುವರು. ತಮ್ಮ ಹೃದಯಗಳನ್ನು ಎಲ್ಲಾ ರೀತಿಯ ಮಾಲಿನ್ಯಗಳಿಂದ ರಕ್ಷಿಸಿಕೊಳ್ಳುವರು ಮತ್ತು ಅಲ್ಲಾಹನೊಂದಿಗೆ ನಿಷ್ಠೆಯ ವಚನವನ್ನು ನೀಡಿರುವರು. ಅವರು ಎಂದೂ ವ್ಯರ್ಥವಾಗಲಾರರು, ಅಲ್ಲಾಹನು ಎಂದೂ ಅವರ ಕೈಬಿಡಲು ಸಾಧ್ಯವಿಲ್ಲ. ಏಕೆಂದರೆ ಅವರು ಅಲ್ಲಾಹನಿಕಗೆ ಶರಣ ಹೊಂದಿದವರಾಗಿದ್ದಾರೆ. ಮತ್ತು ಅಲ್ಲಾಹನು ಅವರಿಗೆ ಅನುಗ್ರಹಿಸುವವನಾಗಿರುತ್ತಾನೆ. ಅವರ ಎಲ್ಲ ಆಪತ್ತುಗಳಿಂದ ರಕ್ಷಿಸಲ್ಪಡುವರು. (ಕಿಶ್ತಿಯೆ ನೂಹ್, ರೂಹಾನಿ ಖಝಾಯೀನ್ ಸಂಪುಟ–19, ಪುಟ–19–20)

ಅಲ್ಲಾಹನೊಂದಿಗೆ ಆತ್ಮೀಯನಾದ ಸಂಬಂಧ ಹೊಂದಿದವರಾದರೆ,

ಅಲ್ಲಾಹನ ವಚನಗಳನ್ನು ಪಾಲಿಸಲು ಸಾಧ್ಯವಾಗುತ್ತದೆ. ಗೃಹಮಟ್ಟದಿಂದ ಹಿಡಿದು ಸಮಾಜಕ್ಕೆ ಸಂಬಂಧವಾಗಿಯೂ, ಇತರ ವ್ಯವಹಾರದಲ್ಲೂ, ವ್ಯಾಪಾರದಲ್ಲೂ, ವಚನಪಾಲನೆ ವಚನಬದ್ಧತೆ ಮುಖ್ಯವಾಗಿರುತ್ತದೆ. ಎಲ್ಲ ತರಹದ ವಚನಗಳನ್ನು ಒಡಂಬಡಿಕೆಗಳನ್ನು ಅಲ್ಲಾಹನ ಸಂತೃಪ್ತಿಗೋಸ್ಕರ ಪಾಲಿಸುವವರಾದರೆ ಎಲ್ಲ ತರಹದ ನಷ್ಟಗಳಿಂದ ರಕ್ಷಿಸಲ್ಪಡುವರು.

ಇದೆ ಒಬ್ಬ ನಿಜವಾದ ಅಹ್ಮದಿಯ ಮತ್ತು ನಿಜವಾದ ಮುಸ್ಲಿಮನ ನಡೆಯಾಗಿದೆ. ವಿನಯವು ಚರಿತ್ರೆಯ ಒಂದು ಅತ್ಯುತ್ತಮ ನಡೆಯಾಗಿದೆ. ಆ ಬಗ್ಗೆ ಅಲ್ಲಾಹನು ಹೇಳಿದನು:

**ವಿಬಾದುರ್ರಹ್ಮಾನಿಲ್ಲಝೀನ ಯಮ್‌ಶೂನ ಅಲಲ್ ಅರ್‌ಝಿ ಹೌನೌಂ ವಇಝಾ ಖತಬಹುಮ್ ಜಾಹಿಲೂನ ಕಾಲೂ ಸಲಾಮ.** (ಅಲ್ ಫುರ್ಖಾನ್: 64)

"ಪರಮ ದಯಾವಂತನ (ಅಲ್ಲಾಹನ) ಭಕ್ತದಾಸರು ಭೂಮಿಯಲ್ಲಿ ನಮ್ರತೆಯಿಂದ ನಡೆಯುವವರಾಗಿದ್ದಾರೆ. ಅಜ್ಞಾನಿಗಳದ ಜನರು ಅವರನ್ನು ಮಾತಿಗೆಳೆದರೆ ಅವರು "ಸಲಾಂ" (ಶಾಂತಿ) ಎಂದು ಹೇಳುತ್ತಾರೆ. ಅವರಿಂದ ಪ್ರತ್ಯೇಕವಾಗುತ್ತಾರೆ. ಅನವಶ್ಯಕ ಮಾತನಾಡುವುದಿಲ್ಲ. ಈ ಬಗ್ಗೆ ಹಝ್ರತ್ ರಸೂಲುಲ್ಲಾಹ್(ಸ) ರವರ ಮಾದರಿ ಏನಾಗಿತ್ತು?

ಹಝ್ರತ್ ಉಮರ್(ರ) ವರದಿ ಮಾಡುತ್ತಾರೆ. ನಾನು ರಸೂಲುಲ್ಲಾಹ್(ಸ) ರವರಿಂದ ಹೀಗೆ ಹೇಳಿದ್ದನ್ನು ಕೇಳಿರುತ್ತೇನೆ. ನನಗೆ ಬಹುವಾಗಿ ಈಸಬ್ನು ಮರಿಯಮರ ಹಾಗೆ ಹೊಗಳಬೇಡಿರಿ. ನಾನು ಕೇವಲ ಅಲ್ಲಾಹನ ದಾಸನಾಗಿದ್ದೇನೆ. ಆದುದರಿಂದ ನನಗೆ ಕೇವಲ ಅಲ್ಲಾಹನ ದಾಸ ಮತ್ತು ಅವನ ಸಂದೇಶವಾಹಕ ಎಂದಷ್ಟೇ ಹೇಳಿರಿ. (ಸಹೀಹುಲ್ ಬುಖಾರಿ, ಕಿತಾಬ್ ಅಲ್‌ಅಹಾದೀಸುಲ್ ಅಂಬಿಯಾ.... ಹದೀಸ್:3445)

ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಂದರ್ಭದಲ್ಲಿ ಹೇಳಿದರು. ನಮ್ಮ ನಬಿಕರೀಮ್(ಸ) ರವರಿಂಗಿಂತ ಮಿಗಿಲಾದ ಪರಿಪೂರ್ಣ ಮಾನವನ ಮಾದರಿ ಲೋಕದಲ್ಲಿಯೇ ಇಲ್ಲ. ಮುಂದೆ ಅಂತ್ಯ ದಿನದವರೆಗೂ ಇರಲು ಸಾಧ್ಯವಿಲ್ಲ. ಅಲ್ಲಾಹನು ಶಕ್ತಿಯುತ ಪವಾಡಗಳನ್ನು ನೀಡಿಯಾಗಿದ್ದರೂ ಹುಝೂರ್(ಸ) ಸದಾ ತನ್ನನ್ನು ದಾಸತ್ವದ ಪ್ರತಿನಿಧಿಯಾಗಿಯೇ ಪರಿಗಣಿಸುತ್ತಿದ್ದರು. ಮತ್ತು ಪದೇ ಪದೇ **"ಇನ್ನಮಾ ಅನಾ ಬಶರುಕುಮ್ ಮಿಸಲುಕುಮ್**–(ಅಲ್ ಕಹಫ್–111) ಎಂದೇ ಉಚ್ಛರಿಸುತ್ತಿದ್ದರು. ಎಲ್ಲಿಯವರೆಗೆ ಈ ಭಾವನೆ ನೆಲೆಯೂರಿತ್ತೆಂದರೆ ತೌಹೀದ್ ಕಲೀಮದಲ್ಲೂ ತನ್ನ ದಾಸನಾಗುವೆ ಎಂಬ ಹೇಳಿಕೆಯನ್ನು ಕಡ್ಡಾಯಗೊಳಿಸಿದರು. ಅದನ್ನು ಉಚ್ಛರಿಸದೆ ಒಬ್ಬ ಮುಸಲ್ಮಾನನು ಮುಸಲ್ಮಾನನೆಂದು ಕರೆಯಲ್ಪಡುವುದಿಲ್ಲ. ಯೋಚಿಸಿರಿ ಮತ್ತೊಮ್ಮೆ ಯೋಚಿಸಿರಿ! ಆ ಪರಿಪೂರ್ಣ ಮಾರ್ಗದರ್ಶನ ಜೀವನ ಶೈಲಿಯು ನಮಗೆ ಪಾಠ ಕಲಿಸುತ್ತಿದೆ. ಅತ್ಯುನ್ನತ ಸಾನಿಧ್ಯದ ಸ್ಥಾನ ಪಡೆದರೂ ದಾಸನಾಗಿರುವ ನೈಜತೆಯನ್ನು ಕೈಬಿಡಲಿಲ್ಲ. ಇನ್ನೊಬ್ಬರ ಬಗ್ಗೆ ಈ ಪರಿಯನ್ನು ಊಹಿಸುವುದೂ ವ್ಯರ್ಥವೂ ಅರ್ಥಹೀನವೇ ಸರಿ. (ಮಲ್ಫೂಝಾತ್, ಸಂಪುಟ–1, ಪುಟ–117–118)

ರಸೂಲುಲ್ಲಾಹ್(ಸ) ಒಂದು ಸಂದರ್ಭದಲ್ಲಿ ಹೇಳಿದರು. "ನೀವು ಜಗಳ ಮಾಡಿಕೊಂಡು ನ್ಯಾಯಕ್ಕಾಗಿ ನನ್ನ ಬಳಿ ಬರುತ್ತೀರಿ. ನಾನು ಒಬ್ಬ ಮನುಷ್ಯನಾಗಿದ್ದೇನೆ. ನಿಮ್ಮಲ್ಲಿ ಒಬ್ಬನು ಪುರಾವೆ ಸಹಿತ ತನ್ನ ವಾದ ಮಂಡಿಸುವುದರಲ್ಲಿ ಇನ್ನೊಬ್ಬನಿಗಿಂತ ನಿಪುಣನಾಗಿರಬಹುದು. ನಾನು ಅವನ ಪುರಾವೆಗಳನ್ನು ನೋಡಿ ಅವನ ಪರ ನಿರ್ಣಯ ನೀಡುವವನಾದರೆ ಆತನ ಹಖ್ಖು ಇದರಲ್ಲಿ ಇಲ್ಲವಾದರೆ ಆತನು ಇದರಿಂದ ಏನೂ ತೆಗೆದುಕೊಳ್ಳಬಾರದು. ಸತ್ಯವಿಶ್ವಾಸಿಯಾಗಿದ್ದರೆ ನಿರ್ಣಯ ಅವನ ಪರವಿದ್ದಾಗಲೂ ತೆಗೆದುಕೊಳ್ಳಬಾರದು. ಏಕೆಂದರೆ ಆ ಪಕ್ಕದಲ್ಲಿ ನಾನು ಅವನಿಗೆ ಬೆಂಕಿಯ ಒಂದು ಕೆಂಡ ಆರಿಸಿಕೊಟ್ಟ ಹಾಗೆ ಆಗುತ್ತದೆ. (ಸಹೀಹ್ ಬುಖಾರಿ, ಕಿತಾಬ್ ಅಶ್ಸಹಾತ್, ಹದೀಸ್–2680)

ತನ್ನ ಪರ ನಿರ್ಣಯ ಮಾಡಿಕೊಂಡರೂ ಅದು ಬೆಂಕಿಯ ತುಂಡಾಗಿರುವುದು ಆ ಬೆಂಕಿಯುನ್ನು ಪಡೆಯದಿರುವುದೇ ಲೇಸು. ನರಕಾಗ್ನಿಯಿಂದ ದೂರವಾಗಿರಿ ಮತ್ತು ಸತ್ಯವನ್ನು ಹೇಳಿರಿ. ನನ್ನ ಹಕ್ಕು ಆಗಿರುವುದಿಲ್ಲ. ಇದು ಇನ್ನೊಬ್ಬನ ಹಕ್ಕಾಗಿದೆ ಎಂದು.

ಆದುದರಿಂದ ತಪ್ಪು ನಿರ್ಣಯ ಮಾಡಿಸಿಕೊಳ್ಳುವವರಿಗೆ ಅದರಲ್ಲಿ ತುಂಬ ಭಯ ಅಡಗಿದೆ. ಗೃಹ ಜೀವನದಲ್ಲೂ ಅವರ ವಿನಯ ಮತ್ತು ಮನೆಯವರ ಸಹಾಯ ಮಾಡುವ ಪರಿ ಹೇಗಿತ್ತೆಂದರೆ. "ಹಝ್ರತ್ ಆಯಿಶಾ(ರ) ಹೇಳುತ್ತಾರೆ. ರಸೂಲುಲ್ಲಾಹ್(ಸ) ತನ್ನ ಮನೆಯಲ್ಲಿ ತನ್ನ ಪತ್ನಿಯರ ಗೃಹ ಕಾರ್ಯಗಳಲ್ಲಿ ಸಹಾಯ ನೀಡುತ್ತಿದ್ದರು. ತನ್ನ ಬಟ್ಟೆ ಸ್ವಯಂ ತೊಳೆದುಕೊಳ್ಳುತ್ತಿದ್ದರು. ಮನೆ ಗುಡಿಸುತ್ತಿದ್ದರು. ಸ್ವಯಂ ಒಂಟೆಯನ್ನು ಕಟ್ಟುತ್ತಿದ್ದರು. ನೀರು ತರುತ್ತಿದ್ದರು ಪ್ರಾಣಿಗಳಿಗೆ ಸ್ವಯಂ ಮೇವು ಹಾಕುತ್ತಿದ್ದರು. ಆಡಿನ ಹಾಲು ಕರೆಯುತ್ತಿದ್ದರು. ತನ್ನ ಸ್ವಂತ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಸೇವಕರಿಂದ ಏನಾದರೂ ಕೆಲಸ ಮಾಡಿಸಿಕೊಂಡರೆ ಅವನ ಕೆಲಸದಲ್ಲಿ ನೆರವಾಗುತ್ತಿದ್ದರು. ಅವನ ಜೊತೆಗೂಡಿ ಹಿಟ್ಟು ಹಿಂಡುತ್ತಿದ್ದರು. ಸಂತೆಯಿಂದ ಸ್ವಯಂ ತನ್ನ ಸಾಮಾನುಗಳನ್ನು ಎತ್ತಿಕೊಂಡು ಬರುತ್ತಿದ್ದರು. (ಅಶ್ಶಿಫಾ ಶರೀಫ್ ಹಖೂಖುಲ್ ಮುಸ್ತಫಾ ಪುಟ–176, ಹದೀಸ್–271,272ಬಾಬ್ ಅಸ್ಸಾನಿ ಫೀ ತವಾಝಿ (ಸ), ಜಾಎಝುಹ್ ದಬೀಊದ್ದೌಲಾ ಲಿಲ್ ಖುರ್‌ಆನಿಲ್ ಕರೀಮ್ 2013) (ವಸಾಎಲುಲ್ ವಸೂಲ್ ಇಲ ಶಮಾಎಲುರ್ರಸೂಲ್(ಸ) ಸಂಪುಟ–1, ಪುಟ–241, ದಾರುಲ್ ಮಿನ್‌ಹಾಜ್ ಜಿದ್ದಹ್ 1424 ಹಿಜರಿ)

ಇಂದು ಮನೆಗಳಲ್ಲಿ ಪುರುಷರು ತುಂಬ ಜಂಭಪಡುವವರಿದ್ದಾರೆ. ಸಮಯಕ್ಕೆ ಬಟ್ಟೆ ತೊಳೆಯದಿದ್ದು ಕಂಡರೆ ಕ್ರೋಧಿತರಾಗುತ್ತಾರೆ. ಅದಾಗ್ಯೂ ಈಗ ಕೈಯಿಂದ ತೊಳೆಯುವುದಿಲ್ಲ. ವಾಶಿಂಗ್ ಮೆಶಿನ್ ಮನೆಯಲ್ಲಿರುತ್ತದೆ. ಸ್ವಯಂ ವಾಶಿಂಗ್ ಮೆಶಿನ್‌ನಲ್ಲಿ ಬಟ್ಟೆ ಹಾಕಬಹುದು. ಆದರೆ ಇಷ್ಟು ಕಷ್ಟಪಡಲು ಇಚ್ಛಿಸುವುದಿಲ್ಲ. ಪರಕೆಯಿಂದ ಈಗ ಕಸಗುಡಿಸುವ ಅಗತ್ಯವಿರುವುದಿಲ್ಲ. ಎಲ್ಲ ಕಡೆ Hoover ಗಳೀವೆ. ಆರಾಮವಾಗಿ Hoover ನಡೆಸಬಹುದಾಗಿದೆ. ಆದರೆ ಅಷ್ಟು ಮಾಡಲಾಗದು. ಅದರಿಂದಾಗಿ ಮನೆಯಲ್ಲಿ ಅಶಾಂತಿ ತಲೆದೋರುತ್ತದೆ. ಆದುದರಿಂದ ಅಹ್ಮದಿಯರಾಗಿ ನಾವು ನಮ್ಮ ಒಳ್ಳೆಯ ನಮೂನೆ ತೋರಿಸಬೇಕಾಗಿದೆ.

ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರ ಬಾಹ್ಯ ಜೀವನ ನೋಡಿದರೆ ಅದರಲ್ಲೂ ಅವರ ಉನ್ನತಮಯ ಮಾದರಿ ಕಾಣಬಹುದಾಗಿದೆ. ಆ ಪೈಕಿ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದರು. ಜಂಭಕೋರನು ಅಲ್ಲಾಹನ ಸಿಂಹಾಸನ ಮೇಲೆ ಕೂರಬಯಸುತ್ತಾನೆ. ಇಂತಹ ಹೇಯ ಗುಣದಿಂದ ಸದಾ ದೂರವಿರಿ. ಅಲ್ಲಾಹನ ಎಲ್ಲಾ ವಾಗ್ದಾನಗಳು ನಿಮ್ಮ ಜೊತೆಗಿದ್ದರೂ ನೀವು ನಮ್ರತೆ ಹೊಂದಿದವರಾಗಿರಿ. ಏಕೆಂದರೆ ಅಲ್ಲಾಹನು ನಮ್ರತೆ ಹೊಂದಿದವರಿಗೆ ಮೆಚ್ಚುವವನಾಗಿದ್ದಾನೆ. ನೋಡಿರಿ ನಮ್ಮ ನಬಿ ಕರೀಮ್(ಸ) ರವರ ವಿಜಯಸಾಧನೆಗಳು ಎಲ್ಲ ಪೂರ್ವ ನಬಿಗಳಲ್ಲಿ ಮಿಗಿಲಾಗಿದ್ದರೂ ಅವರು ಅಲ್ಲಾಹನ ವಿಜಯಗಳು ಪಡೆಯುತ್ತಿದ್ದಂತೆಯೇ ಇನ್ನಷ್ಟು ವಿನಮ್ರತೆ ತೋರಿಸುತ್ತಿದ್ದರು.

ಒಂದು ಸಂದರ್ಭದಲ್ಲಿ. ಒರ್ವ ವ್ಯಕ್ತಿಯನ್ನು ರಸೂಲುಲ್ಲಾಹ್(ಸ) ರವರ ಬಳಿಗೆ ಹಿಡಿದು ತರಲಾಯಿತು. ಅವರು ನೋಡಿದರು. ಅವನು ತುಂಬ ಹೆದರಿಕೊಂಡಿದ್ದಾನೆ. ಮತ್ತು ಕಂಪಿಸುತ್ತಿದ್ದಾನೆ. ಅವನು ಹತ್ತಿರ ಬಂದಾಗ ಅತ್ಯಂತ ನಮ್ರತೆ ಹಾಗೂ ಪ್ರೀತಿಯಿಂದ ಕೇಳಿದರು. ನೀವೇಕೆ ಇಷ್ಟು ಭಯಪಡುತ್ತಿದ್ದೀರಿ? ನಾನು ನಿಮ್ಮ ಹಾಗೆಯೇ ಒಬ್ಬ ಮನುಷ್ಯನಾಗಿದ್ದೆನೆ. ಮತ್ತು ಓರ್ವ ವೃದ್ದೆಯ ಪುತ್ರನಾಗಿದ್ದೇನೆ. (ಮಲ್ಫೂಝಾತ್, ಸಂಪುಟ–10, ಪುಟ–258)

ಇನ್ನೊಂದು ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ರವರ ವಿನಯ ಮತ್ತು ನಮ್ರತೆಯನ್ನು ವಿವರಿಸುತ್ತ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಬರೀ ಜಂಭಕೊಚ್ಚಿಕೊಳ್ಳುವುದರಿಂದ ಮತ್ತು ಅನವಶ್ಯಕ ಗರ್ವಪಡುವುದರಿಂದ ಹಾಗೂ ದೊಡ್ಡಸ್ತಿಕೆ ತೋರಿಸುವುದರಿಂದ ದೂರವಿರಬೇಕು. ಬದಲು ವಿನಯವಂತರಾಗಿರಬೇಕು. ನೋಡಿರಿ. ರಸೂಲುಲ್ಲಾಹ್(ಸ) ನಿಜವಾದ ಒರ್ವ ಅತ್ಯಧಿಕ ಸಜ್ಜನಿಕೆಯುಳ್ಳವರಾಗಿದ್ದರು. ಅವರ ವಿನಮ್ರತೆ ಮತ್ತು ಸರಳತೆಯ ಒಂದು ಉದಾಹರಣೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಕಾಣಬಹುದು. ಓರ್ವ ಅಂಧನು (ಕುರುಡ) ಹಝ್ರತ್ ರಸೂಲುಲ್ಲಾಹ್(ಸ) ರವರಲ್ಲಿ ಬಂದು ಪವಿತ್ರ ಖುರ್‌ಆನ್ ಪಠಿಸುತ್ತಿದ್ದನು. ಒಂದು ದಿನ ಅವರ ಬಳಿ ಮಕ್ಕದ ಮುಖಂಡರು ಮತ್ತು ನಗರದ ಸರದಾರರು ಬಂದು ಸೇರಿದ್ದರು. ಪ್ರವಾದಿ(ಸ) ಅವರೊಂದಿಗೆ ಮಾತುಕತೆಯಲ್ಲಿ ತೊಡಗಿದ್ದರು. ಮಾತುಕತೆಯಲ್ಲಿ ತೊಡಗಿರುವುದನ್ನು ಕಂಡು ಸ್ವಲ್ಪ ಸಮಯ ನೋಡಿ ಆ ಅಂಧನು ಎದ್ದು ಹೋದನು. ಇದೊಂದು ಸಾಧಾರಣ ವಿಷಯವಾಗಿತ್ತು. ಅಲ್ಲಾಹನು ಆ ಸಂಬಂಧಿಸಿ ಒಂದು ಅಧ್ಯಾಯವೇ ಅವತರಿಸಿದನು. ಆಗ ರಸೂಲುಲ್ಲಾಹ್(ಸ) ಅವರ ಮನೆಗೆ ಹೋದರು. ಅವರನ್ನು ಜೊತೆಯಲ್ಲಿ ಕರೆದುಕೊಂಡು ಬಂದು ತನ್ನ ಚಾದರವನ್ನು ಹಾಯಿಸಿ ಕುಳ್ಳಿರಿಸಿದರು."

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ವಾಸ್ತವವೇನೆಂದರೆ ಯಾರ ಹೃದಯಗಳಲ್ಲಿ ಅಲ್ಲಾಹನ ಭಯವಿರುತ್ತದೆಯೋ ಅವರು ಸಹಜವಾಗಿಯೇ ವಿನಮ್ರತೆ ಹೊಂದಿರುತ್ತಾರೆ. ಏಕೆಂದರೆ ಅಲ್ಲಾಹನು ನಿರಪೇಕ್ಷನು ಅವನಿಂದ ಸದಾ ಭಯಪಡುವವರಾಗಿರುತ್ತಾರೆ.

"ಆ ನಾಂಕ ಆರಿಫ್ ತರಾನದ್ ತರ್‌ಸಾಂತರ್".

"ಅಂದರೆ ಹೆಚ್ಚು ಜ್ಞಾನವಂತರೇ ಹೆಚ್ಚು ಹೆದರುವವರಾಗಿರುತ್ತಾರೆ." ಏಕೆಂದರೆ ಅಲ್ಲಾಹನು ಜಾಣ್ಮೆವಂತನು. ಅದೇ ರೀತಿ ಜಾಣ್ಮೆ ಪರೀಕ್ಷಿಸುವವನಾಗುತ್ತಾನೆ. ಯಾವುದೇ ಕೃತ್ಯದಿಂದ ಅವನು ಅಸಂತುಷ್ಟನಾದರೆ ಕ್ಷಣಾರ್ಧದಲ್ಲಿ ಎಲ್ಲ ಮುಗಿದಂತೆಯೇ ಸರಿ. ಆದುದರಿಂದ ಈ ಮಾತುಗಳನ್ನು ಗಂಭೀರವಾಗಿ ಪರಿಗಣಿಸಿರಿ ಮತ್ತು ನೆನಪಿಡಿರಿ ಹಾಗೂ ಕ್ರಿಯಾಶೀಲರಾಗಿರಿ. (ಮಲ್ಫೂಝಾತ್, ಸಂಪುಟ–10, ಪುಟ–343–344)

ರಸೂಲುಲ್ಲಾಹ್(ಸ) ರವರಿಗೆ ಮಾಡಿರುವಂತಹ ಎಲ್ಲ ಉಪದೇಶಗಳು ತನ್ನ ನಡವಳಿಕೆಯಲ್ಲಿ ಅಳವಡಿಸಿಕೊಳ್ಳುವುದಕ್ಕೋಸ್ಕರವಾಗಿದೆ. ಅವರ ಎಲ್ಲಾ ಉಪದೇಶಗಳು ಚಿಂತನಾರ್ಹವಾಗಿದೆ. ರಸೂಲುಲ್ಲಾಹ್(ಸ) ಒಂದು ಸಂದರ್ಭದಲ್ಲಿ ಹೇಳುತ್ತಾರೆ. ನಿಮ್ಮಲ್ಲಿ ಯಾರೂ ಸಹ ತಮ್ಮ ಕರ್ಮಗಳಿಂದ ಮುಕ್ತಿ ಪಡೆಯಲು ಸಾಧ್ಯವಿಲ್ಲ. ಸಹಾಬರು ಕೇಳಿದರು. ಓ ಅಲ್ಲಾಹನ

ಸಂದೇಶವಾಹಕರೇ!(ಸ) ನೀವು ಸಹ? ಅವರು ನುಡಿದರು. ಹೌದು ನಾನು ಸಹ ತನ್ನ ಕರ್ಮಗಳಿಂದಾಗಿ ಮುಕ್ತಿ ಪಡೆಯುವವನಾಗುವುದಿಲ್ಲ. ಆದರೆ ಅಲ್ಲಾಹನು ನನಗೆ ತನ್ನ ಅನುಗ್ರಹದ ನೆರಳಿನಲ್ಲಿ ಆಶ್ರಯ ನೀಡುವನು. ಮತ್ತು ಅವರು ನುಡಿದರು. ನೀವು ನೇರವಾಗಿರಿ ಮತ್ತು ಶರೀಯತ್ ಸಂಬಂಧಿಸಿದವರಾಗಿರಿ. ಮುಂಜಾನೆ ಸಂಜೆ ಮತ್ತು ರಾತ್ರಿಯ ವೇಳೆಗಳಲ್ಲಿ ದೈವಾರಾಧನೆ ಮಾಡುತ್ತಿರಿ ಮತ್ತು ವಿನಮ್ರರಾಗಿರಿ. ನೀವು ತಮ್ಮ ಉದ್ದೇಶ ಸಾಧಿಸುವಿರಿ. ಆರಾಧಿಸಿರಿ ಮತ್ತು ಮಧ್ಯದ ದಾರಿಯನ್ನು (ಮಿನರ್ವಿ) ಅನುಸರಿಸಿರಿ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–3, ಪುಟ–753, ಹದೀಸ್–10688, ಮಸ್ನದ್ ಅಬೂ ಹರೀರಃ ಆಲಿಮುಲ್ ಕುತುಬ್ ಬೈರೂತ್ 1998)

ಮಿಂಯಾನರವಿ (ಮಧ್ಯ ದಾರಿ) ಎಲ್ಲ ಹಂತದಲ್ಲೂ ಅನಿವಾರ್ಯವಾಗಿರುತ್ತದೆ. ಲೌಕಿಕತೆಯಲ್ಲಿ ಮುಳುಗದಿರಿ. ಅಲ್ಲಾಹನು ಸಂಸಾರವನ್ನು ಬಯಸುತ್ತಾನೆ. ಆದರೆ ಮಿನರ್ವಿಯಾಗಿರಬೇಕು. ಅಲ್ಲಾಹನನ್ನು ಮರೆಯುವಂತಾಗಬಾರದು. ಅಲ್ಲಾಹನ ಆರಾಧನೆ ಕಡೆಯೂ ಗಮನವಿರಬೇಕು. ಅದರ ಹಕ್ಕುಗಳನ್ನು ಪಾಲಿಸಬೇಕು. ಆದರೆ ಸಾಂಸರಿಕ ಗಮನ ಅಲ್ಲಾಹನ ಧ್ಯಾನಕ್ಕಿಂತ ಅತಿಯಾಗಬಾರದು. ಧರ್ಮಕ್ಕೆ ಸದಾ ಲೌಕಿಕತೆಯ ಮೇಲೆ ಪ್ರಾಧಾನ್ಯತೆ ನೀಡಬೇಕು. ಅವರು ನುಡಿದರು. ಹೀಗಾದಾಗ ನೀವು ನಿಮ್ಮ ಉದ್ದೇಶ ಸಾಧಿಸುವಿರಿ. ಅಲ್ಲಾಹನ ಅನುಗ್ರಹ ನಿಮಗೆ ಲಭಿಸುವುದು. ಅವನ ಔದಾರ್ಯ ನಿಮಗೆ ಲಭಿಸುವುದು. ಇದರಿಂದ ಎಲ್ಲಾ ರಸೂಲುಲ್ಲಾಹ್(ಸ) ರವರ ನಮ್ರತೆ ಸ್ಪಷ್ಟವಾಗುತ್ತದೆಯೋ ಅಲ್ಲಿ ಅಲ್ಲಾಹನ ಭಯ ಪ್ರತಾಪದ ಸುಳಿವು ದೊರೆಯುತ್ತದೆ. ಮತ್ತೆ ಹೇಳಿದರು. ನನ್ನ ಅವಸ್ಥೆ ಹೀಗಿರುವಾಗ ನಿಮಗೆ ಎಷ್ಟೆಲ್ಲ ಅಲ್ಲಾಹನು ರಾಜಿ ಮಡುವ ಮತ್ತು ಅವನ ಕರುಣೆ ಯಾಚಿಸುವ ಅವಶ್ಯಕತೆ ಇದೆ. ಯೋಚಿಸಿರಿ. ಇದು ಅಲ್ಲಾಹನ ಕರುಣೆ ಮತ್ತು ಅವನ ಅನುಗ್ರಹವೇ ಆಗಿದೆ. ಅದು ನಮ್ಮನ್ನು ಅನುಗ್ರಹಗಳಿಗೆ ಪಾತ್ರರಾಗುವಂತೆ ಮಾಡುತ್ತದೆ. ಯಾವ ಹಾದಿಯ (ಮಾರ್ಗ) ಮೂಲಕ ನಾವು ಅವನಲ್ಲಿ ಸ್ವೀಕಾರ್ಹರಾಗುವೆವು ಹೇಳಲಾಗದು. ಆದುದರಿಂದ ಅವನ ಅನುಗ್ರಹ ಮತ್ತು ದಯೆ ಯಾಚಿಸಲು ಅವನನ್ನು ಆರಾಧಿಸಬೇಕು ಮತ್ತು ಉತ್ತಮ ನಡತೆ ಹೊಂದಬೇಕು. ಮನುಷ್ಯನ ಮುಖದ ಹಾವಭಾವವು ಬಾಹ್ಯವಾಗಿ ಅವನ ನಡತೆಯನ್ನು ಸೂಚಿಸುತ್ತವೆ. ಆ ಪೈಕಿ ಸಹಾಬರು ರಸೂಲುಲ್ಲಾಹ್(ಸ) ರವರ ಕುರಿತು ಹೀಗೆ ಹೇಳುತ್ತಾರೆ. ಹಝ್ರತ್ ಬರಾಶ್ ಬಿನ್ ಆಝೀಬ್ ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಜನರಲ್ಲಿ ಎಲ್ಲರಿಗಿಂತ ಸುಂದರವು ಅತ್ಯಂತ ಉತ್ತಮ ನಡತೆ ಹೊಂದಿದವರಾಗಿದ್ದರು.
(ಸಹೀಹಲ್ ಬುಖಾರಿ, ಕಿತಾಬುಲ್ ಮನಾಖಿಬ್ ಹದೀಸ್–3549)

ಜನರು ಸುಂದರವಾಗಿದ್ದರೆ ಗರ್ವ ಪಡುತ್ತಾರೆ. ರಸೂಲುಲ್ಲಾಹ್(ಸ) ಹೀಗೆ ಪ್ರಾರ್ಥಿಸುತ್ತಿದ್ದರು. ಓ ಅಲ್ಲಾಹನೆ! ಯಾವ ರೀತಿ ನನಗೆ ಸುಂದರತೆ ನೀಡಿರುವನು ಅದೇ ರೀತಿ ಉತ್ತಮ ನಡತೆಯು ದಯಪಾಲಿಸು. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–8, ಪುಟ–288, ಹದೀಸ್–25736 ಆಲಿಮುಲ್ ಕುತುಬ್ ಬೈರೂತ್ 1998)

ಇಂದು ರಸೂಲುಲ್ಲಾಹ್(ಸ) ರವರ ಜೀವನ ಚರಿತ್ರೆಯ ಕೆಲವು ಪ್ರಕಾಶಮಯ ದೃಷ್ಟಾಂತಗಳನ್ನು ವಿವರಿಸುವೆನು. ಅದರಿಂದ ಅವರ ಉದಾತ್ತ ಗುಣಗಳು ಸ್ಪಷ್ಟವಾಗುತ್ತವೆ. ಆದರೂ ಅವರ ವಿನಯ ನೋಡಿ ಅಲ್ಲಾಹನೊಡನೆ ಪ್ರಾರ್ಥಿಸುವರು. "ನನ್ನ ಚರಿತ್ರೆ ನನ್ನ ಗುಣಗಳು ನನ್ನ ಆರಾಧನಾ ಕ್ರಮಗಳು ನಿನಗೆ ಮತ್ತು ನಿನ್ನ ಸೃಷ್ಟಿಗಳ ಮೆಚ್ಚುಗೆ ಪಡೆಯುವಂತಾಗಲಿ.

ಮತ್ತೋರ್ವ ಸಹಾಬಿ ಹೇಗೆ ಸಾಕ್ಷ್ಯ ವಹಿಸುತ್ತಾರೆ. ನಾನು ರಸೂಲುಲ್ಲಾಹ್ (ಸ) ರವರಿಂತ ಹೆಚ್ಚು ನಗುಮುಖ ಮುಗುಳ್ನತೆ ಹೊಂದಿದವರಾಗಿ ಯಾರನ್ನೂ ಕಂಡಿಲ್ಲ. (ಸುನನ್ ತಿರ್‌ಮಿಝಿ, ಅಬ್ವಾಬುಲ್ ಮನಾಖಿಬ್ ಹದೀಸ್–3641)

ಉಮ್ ಮುಅಬದ್ ರಸೂಲುಲ್ಲಾಹ್(ಸ) ರವರ ವ್ಯಕ್ತಿತ್ವವನ್ನು ಹೀಗೆ ವರ್ಣಿಸುತ್ತಾರೆ. ರಸೂಲುಲ್ಲಾಹ್(ಸ) ದೂರದಿಂದ ಕಾಣುವಾಗ ಜನರಲ್ಲಿ ಎಲ್ಲರಿಗಿಂತ ಸುಂದರವಾಗಿ ಕಾಣುತ್ತಿದ್ದರು ಮತ್ತು ಸಮೀಪದಿಂದ ಕಾಣುವಾಗ ಅತ್ಯಂತ ಮೃದು ಭಾಷಿಕ ಹಾಗೂ ಅತ್ಯುತ್ತಮ ನಡತೆ ಹೊಂದಿದವರಾಗಿ ಕಾಣುತ್ತಿದ್ದರು. (ಮುಸ್ತದರಿಕ್ ಅಲಸ್ಸಹೀಹೈನ್ ಲಿಲ್ ಹಾಕಿಮ್, ಸಂಪುಟ–3, ಪುಟ–10–11, ಕಿತಾಬುಲ್ ಹುಜ್ರಃ ಹದೀಸ್–4274, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಅಲಿ(ರ) ಹೇಳುತ್ತಾರೆ. ರಸೂಲುಲ್ಲಾಹ್(ಸ) ಜನರಲ್ಲಿ ಎಲ್ಲರಿಗಿಂತ ವಿಶಾಲ ಎದೆಯುಳ್ಳವರು ಮತ್ತು ನುಡಿಗಳಲ್ಲಿ ಎಲ್ಲರಿಗಿಂತ ಸತ್ಯ ನುಡಿಯುವವರಾಗಿದ್ದರು ಮತ್ತು ಅವರಲ್ಲಿ ಅತಿ ಹೆಚ್ಚು ಸುಂದರವಾಗಿದ್ದರು ಮತ್ತು ವ್ಯವಹಾರ ವರ್ತನೆಯಲ್ಲಿ ಎಲ್ಲರಿಗಿಂತ ಆದರ್ಶಪ್ರಾಯರು ಮತ್ತು ಆದರಣೀಯರಾಗಿದ್ದರು. (ಸುನನ್ ತಿರಮಿಝಿ, ಅಬ್ವಾಬುಲ್ ಮನಾಖಿಬ್, ಬಾಬ್ ವಸ್‌ಫ್ ಆಖಿರ್ ಮಿನ್ ಅಲಿ ಹದೀಸ್–3638)

ರಸೂಲುಲ್ಲಾಹ್(ಸ) ಜೀವನ ಮಾದರಿಯು ಅಸಂಖ್ಯಾತ ಉದಾಹರಣೆಗಳ ಮತ್ತು ಚರಿತ್ರೆಯ ಅಪ್ರತಿಮ ಉದಾಹರಣೆಗಳಿವೆ. ಅವರ ಚರಿತ್ರೆಯ ಯಾವ ಮಜಲನ್ನು ಆಯ್ದುಕೊಂಡರೆ ಅವು ಪರಿಪೂರ್ಣವು ಸಂಪೂರ್ಣವೂ ಆಗಿರುತ್ತವೆ. ಆದುದರಿಂದ ಅಲ್ಲಾಹನು ಅವರ ಜೀವನ ಮಾದರಿಯನ್ನು ಅನಸುರಿಸಲು ಆದೇಶ ನೀಡಿರುತ್ತಾನೆ. ಆದುದರಿಂದ ನಾವು ಲೋಕಕ್ಕೆ ಇಸ್ಲಾಮ್ ಮತ್ತು ರಸೂಲುಲ್ಲಾಹ್(ಸ) ರವರ ನಿಜವಾದ ರೂಪ ತೋರಿಸಬಯಸುವವರಾದರೆ ಅವರ ಜೀವನ ಕ್ರಮದ ಪ್ರತಿ ಹಂತವನ್ನು ಮುಂದಿರಿಸಿಕೊಂಡು ಅದರ ಮೇಲೆ ನುಡಿ ನಡೆಯ ಮೂಲಕ ಪ್ರದರ್ಶಿಸಿದಾಗ ಮಾತ್ರ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಬೈಅತ್ತಿನ ಹಕ್ಕುಗಳನ್ನು ಪಾಲಿಸುವವರಾಗಬಹುದು. ಅವರನ್ನು ಅಲ್ಲಾಹನು ಹಝ್ರತ್ ರಸೂಲುಲ್ಲಾಹ್(ಸ) ರವರ ದೀನಿನ ಪ್ರಚಾರಕ್ಕಾಗಿ ಈ ಕಾಲದಲ್ಲಿ ಕಳುಹಿಸಿರುವನು.

ಹಝ್ರತ್ ಮಸೀಹ್ ಮೌಉದ್(ಅ) ಒಂದೆಡೆ ರಸೂಲುಲ್ಲಾಹ್(ಸ) ರವರ ಚರಿತ್ರೆಯ ವರ್ಣನೆ ಮಾಡುತ್ತಾ ಹೀಗೆ ಹೇಳಿದರು. ಹೌದು ಹಝ್ರತ್ ಖಾತಮಲ್ ಅಂಬಿಯಾ(ಸ) ರವರ ಚರಿತ್ರೆಯು ಪವಿತ್ರ ಖುರ್‌ಆನಿನಲ್ಲಿ ವಿವರಿಸಿದ್ದು ಕಂಡರೆ ಅದು ಹಝ್ರತ್ ಮೂಸಾ(ಅ) ರವರಿಗಿಂತ ಸಾವಿರಾರು ಪಟ್ಟು ಉನ್ನತಮಯವಾಗಿವೆ. ಏಕೆಂದರೆ ಹಝ್ರತ್ ರಸೂಲುಲ್ಲಹ್(ಸ) ರವರ ಗುಣಾದರ್ಶಗಳು ಎಲ್ಲ ಪ್ರವಾದಿಗಳಲ್ಲಿರುವ ವಿವಿಧ ಗುಣಗಳನ್ನು ಒಳಗೊಂಡಿರುತ್ತವೆ. ಆ ಕಾರಣವೇ ಅಲ್ಲಾಹನು ರಸೂಲುಲ್ಲಾಹ್(ಸ) ರವರ ಬಗ್ಗೆ ಹೇಳಿದನು. **"ಇನ್ನಕ ಲಅಲ ಖುಲೂಖಿನ್ ಅಝೀಮ್"** (ಅಲ್ ಖಲಮ್–5) ದಿಟವಾಗಿಯೂ ನೀನು ಮಹೋನ್ನತವಾದ ನೈತಿಕ ಗುಣಗಳನ್ನು ಹೊಂದಿರುವೆ. ಅಝೀಮ್ ಎಂಬ ಅರಬಿ ಪದದೊಂದಿಗೆ ಯಾರಿಗೆ ಪ್ರಶಂಸಿಸಲಾಗುತ್ತದೆ. ಅದು ಅರಬಿ ನುಡಿಗಟ್ಟುಗಳಲ್ಲಿ "ಮಹೋನ್ನತವಾದ" ಅದರ ಸರಿಸಾಟಿಯಿಲ್ಲದ ಎಂದರ್ಥವಾಗುತ್ತದೆ. ಉದಾಹರಣೆಗೆ ಈ ಮರವು ಅಝೀಮ್ ಆಗಿದೆ ಎಂದರೆ ಅದರರ್ಥ ಆ ಮರವು ಎಲ್ಲಾ ಮರಗಳಿಗಿಂತ ಎಲ್ಲ ನೆಲೆಯಲ್ಲಿ ಅತ್ಯುತ್ತಮವಾಗಿದೆ ಎಂದರ್ಥ. ಹಾಗೆಯೇ ಈ ವಚನದ ಅರ್ಥ ಮಾನವ ಹೊಂದಿದ ಸಾಮರ್ಥ್ಯಕ್ಕೆ ಮೀರಿ ಹೊಂದಿರುವ ನೈತಿಕ ಗುಣಗಳು ಸೇರಿಯೂ ಅವೆಲ್ಲ ನೈತಿಕ ಗುಣಗಳು ಮುಹಮ್ಮದ್(ಸ) ರವರಲ್ಲಿ ಹುದುಗಿದ್ದವು ಎಂದು. ಅದಕ್ಕಿಂತ ಮಿಗಿಲಾದ ಪ್ರಶಂಸೆ ಸಾಧ್ಯವಿಲ್ಲ. (ಬರಾಹೀನ್ ಅಹ್ಮದಿಯಾ, ಭಗ–4, ರೂಹಾನಿ ಖಝಾಯೀನ್ ಸಂಪುಟ–1, ಪುಟ–606, ಅಡಿಟಿಪ್ಪಣಿಯ ಅಡಿಟಿಪ್ಪಣಿ ಸಂಖ್ಯೆ–3)

ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಆ ಮಾನವನು ತನ್ನ ವ್ಯಕ್ತಿತ್ವದಿಂದ, ತನ್ನ ಗುಣಗಳಿಂದ, ತನ್ನ ಕರ್ಮಗಳಿಂದ, ತನ್ನ ಕ್ರಿಯೆಗಳಿಂದ, ತನ್ನ ಆಧ್ಯಾತ್ಮಿಕ ಹಾಗೂ ಪರಿಶುದ್ಧ ಶಕ್ತಿಯಿಂದ ಪರಿಪೂರ್ಣ ಮಾದರಿಯ ಜ್ಞಾನದಿಂದ ಕರ್ಮದಿಂದ ಸತ್ಯ ದೃಢತೆಯಿಂದ ತೋರಿಸಿರುವನೋ ಅವನೇ ಪರಿಪೂರ್ಣ ಮಾನವ ಎನಿಸಿಕೊಂಡಿದ್ದಾನೆ. ಎಲ್ಲಾ ಮಾನವರಿಂದಲೂ ಪರಿಪೂರ್ಣ ಗುಣಗಳನ್ನು ಹೊಂದಿದ ಆ ಪರಿಪೂರ್ಣ ಮಾನವನಾಗಿದ್ದ, ಪರಿಪೂರ್ಣ ನಬಿಯಾಗಿದ್ದ ಮತ್ತು ಎಲ್ಲಾ ಅನುಗ್ರಹಗಳ ಜೊತೆಗೂಡಿ ಬಂದಿದ್ದ ಅವನ ಆಧ್ಯಾತ್ಮಿಕ ಆಗಮನದಿಂದ ಮತ್ತು ಪುನರುತ್ಥಾನದಿಂದ ಮೊದಲ ಪ್ರಳಯ ಗೋಚರವಾಯಿತು ಮತ್ತು ಅವನ ಆಗಮನದಿಂದಾಗಿ ಮರಣ ಹೊಂದಿದ ಒಂದು ಲೋಕವೇ ಜೀವಂತಗೊಂಡಿತು. ಆ ಪವಿತ್ರ ನಬಿ ಹಝ್ರತ್ ಖಾತಮುಲ್ ಅಂಬಿಯಾ, ಇಮಾಮುಲ್ ಆಸ್‌ಫಿಯಾ, ಖಾತಮುಲ್ ಮುರ್‌ಸಲೀನ್, ಫಖರುನ್ನಬಿಯೀನ್ ಜನಾಬ್ ಮುಹಮ್ಮದ್ ಮುಸ್ತಫ(ಸ) ರಾಗಿದ್ದಾರೆ. ಓ ಪ್ರಿಯ ಅಲ್ಲಾಹನೇ! ನಮ್ಮ ಈ ಪ್ರೀತಿಯ ಪ್ರವಾದಿವರ್ಯರ ಮೇಲೆ ಲೋಕಸೃಷ್ಟಿಗೊಂಡಾಗಿನಿಂದ ಯಾರ ಮೇಲೆಯೂ ಮಾಡದಂತಹ ಶುಭಾಶೀರ್ವಾದಗಳು! ಅನುಗ್ರಹಗಳು ದಯಪಾಲಿಸು. ಈ ಮಹೋನ್ನತವಾದ ನಬಿ ಲೋಕಕ್ಕೆ ಆಗಮಿಸದೆ ಇರುತ್ತಿದ್ದರೆ ಎಷ್ಟೆಲ್ಲ ಸಣ್ಣ ಸಣ್ಣ ಪ್ರವಾದಿಗಳು ಲೋಕದಲ್ಲಿ ಆಗಮಿಸಿದ ಉದಾರಹರಣೆಗೆ ಯೂನುಸ್ ಮತ್ತು ಅಯ್ಯೂಬ್ ಮತ್ತು ಮರಿಯಮನ ಪುತ್ರ ಈಸಾ ಮತ್ತು ಮಲಾಕಿ ಹಾಗೂ ಝುಕರಿಯಾ, ಯಹ್ಯಾ ಮುಂತಾದವರ ಸತ್ಯತೆಯ ಕುರಿತು ನಮ್ಮ ಬಳಿ ಯಾವ ಪುರಾವೆಯೂ ಇರಲಿಲ್ಲ. ಅದರೆ ಅವರೆಲ್ಲರು ಸಹ ದೇವಸಾನಿಧ್ಯ ಪಡೆದವರು ಮತ್ತು ಪರಿಶುದ್ಧರು ಹಾಗೂ ದೈವಪ್ರಿಯರಾಗಿದ್ದರು. ಅಂತೂ ಆ ನಬಿಯ ಉಪಕಾರದಿಂದ ಇವರೆಲ್ಲರೂ ಲೋಕದಲ್ಲಿ ಸತ್ಯವಂತರೆಂದು ಭಾವಿಸಿದಂತಾಯಿತು.

ಅಲ್ಲಾಹನು ನಮಗೆ ಆ ಪರಿಪೂರ್ಣ ನಬಿಯ ಉಮ್ಮತಿಯಾದ ನೆಲೆಯಲ್ಲಿ ಅದರ ಹಕ್ಕುಗಳನ್ನು ಪಾಲಿಸುವವರನ್ನಾಗಿ ಮಾಡುವ ಭಾಗ್ಯ ದಯಪಾಲಿಸಲಿ. ಮತ್ತು ಆ ಸುಂದರ ಹಾಗೂ ಪ್ರಕಾಶಮಯ ರೂಪವನ್ನು ಲೋಕದ ಮುಂದೆ ಪ್ರಸ್ತುತಪಡಿಸಿ ಲೋಕದ ಅಂಧಕಾರಗಳನ್ನು ಹೊಗಲಾಡಿಸುವವರನ್ನಾಗಿ ಮಾಡಲಿ. ಅಲ್ಲಾಹನು ಆ ಭಾಗ್ಯ ನಮಗೆ ದಯಪಾಲಿಸಲಿ. ಆಮೀನ್ ಈಗ ದುಆ ಮಾಡೋಣ.

****************

**(ಧನ್ಯವಾದಗಳೊಂದಿಗೆ ಅಖ್ಬಾರ್ ಅಲ್–ಫಝ್ಲ್ International 3 ಆಗಸ್ಟ್ 2019)**

# ಹಝ್ರತ್ ರಸೂಲುಲ್ಲಾಹ್(ಸ) ವಿಶಿಷ್ಠ ಶ್ರೇಷ್ಠತೆಯುಳ್ಳ ಪ್ರವಾದಿಯ ನೆಲೆಯಲ್ಲಿ

**(ಸಯ್ಯದನಾ ಹಝ್ರತ್ ಮುಸ್ಲಿಹ್ ಮೌಊದ್(ರ) ರವರ ಲೇಖನಿಯಿಂದ)**

**ಈ ವಿಷಯವು ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ರವರು ಬರೆದ ತಫ್ಸೀರ್ ಕಬೀರಿನ ಅಲ್‌ಕೌಸರ್ ತಫ್ಸೀರ್‌ನಿಂದ ಆಯ್ದುಕೊಳ್ಳಲಾಗಿದೆ. ಅವರು ಅಲ್–ಕೌಸರ್ ವ್ಯಾಖ್ಯಾನದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರ ಪ್ರವಾದಿತ್ವ ಶ್ರೇಷ್ಠತೆ ಕುರಿತು ಬರೆದದ್ದನ್ನು ಓದುಗರ ಮುಂದೆ ಪ್ರಸ್ತುತಪಡಿಸುತ್ತಿದ್ದೇವೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್ ಹೇಳುತ್ತಾರೆ. ಕೌಸರ್ (ನ) ಮೊದಲ ಅರ್ಥ ನುಬುವ್ವತ್ತಿನ ಶ್ರೇಷ್ಠತೆಯನ್ನು ಉನ್ನತ ಮಟ್ಟದಲ್ಲಿ ಪಡೆಯುವುದು ಯಥೇಚ್ಛ ರೀತಿಯಲ್ಲಿ ಪಡೆಯುವುದು. ಈ ವಿಷಯದ ಆಳವು ಅಪ್ರತಿಮವಾಗಿದೆ. ಅದನ್ನು ಅಲ್ಲಾಹನ ಹೊರತು ಯಾರಿಗೂ ಪರಿಪೂರ್ಣ ರೀತಿಯಲ್ಲಿ ವಿವರಿಸಲು ಸಾಧ್ಯವಿಲ್ಲ. ಆದರೆ ಉದಾಹರಣೆ ರೀತಿಯಲ್ಲಿ ಕೆಲವು ಮಾತುಗಳನ್ನು ವಿವರಿಸಬಹುದಾಗಿದೆ. ಈ ಬಗ್ಗೆ ನಮಗೆ ಮೊಟ್ಟ ಮೊದಲನೆಯದಾಗಿ ನೋಡಬೇಕಾದುದು ಏನೆಂದರೆ ರಸೂಲುಲ್ಲಾಹ್(ಸ) ರವರ ದಾವೆ ಏನಾಗಿತ್ತು ಎಂದು. ಏಕೆಂದರೆ ಒಬ್ಬರ ಗುಣ ವಿಶೇಷಗಳನ್ನು ತಿಳಿಯಬೇಕಾದರೆ ಅವರ ವಾದ, ದಾವೆಯನ್ನು ತಿಳಿಯಬೇಕಾಗುತ್ತದೆ. ಉದಾಹರಣೆಗೆ ಒಬ್ಬ ವ್ಯಕ್ತಿ ನಮ್ಮ ಮುಂದೆ ಬಂದು ಹೇಳುತ್ತಾನೆ. “ನಾನು ದೊಡ್ಡ ಉಸ್ತಾದ್ ಆಗಿದ್ದೆನೆ ಎಂದು, ಆಗ ನಮಗೆ ನೋಡಬೇಕಾದುದೇನೆಂದರೆ ಅವನಲ್ಲಿ ಉಸ್ತಾದ್ ಆಗಿರುವ ಎಲ್ಲಾ ಗುಣಗಳು ಇವೆಯೇ ಅಥವಾ ಇಲ್ಲ ಎಂಬುದು. ಆ ಎಲ್ಲ ಗುಣಗಳು ಇತರರಿಗಿಂತ ಅವನಲ್ಲಿ ಹೆಚ್ಚಾಗಿವೆ ಎಂದಾದರೆ ನಾವು ಅವನ ಧಾವೆಯನ್ನು ಮನ್ನಿಸಬೇಕಾಗುತ್ತದೆ. ನಿಜವಾಗಿಯೂ ಅವನು ದೊಡ್ಡ ಉಸ್ತಾದ್ ಆಗಿದ್ದಾನೆಂದು. ಆದರೆ ಯಾವೊಬ್ಬನು ನಾನು ಎಲ್ಲರಿಗಿಂತ ದೊಡ್ಡ ಉಸ್ತಾದ್ ಆಗಿದ್ದೇನೆ ಎಂದು ಹೇಳಿಕೊಳ್ಳುವುದಾದರೆ, ಅವನೊಂದಿಗೆ ನಿಮ್ಮಲ್ಲಿ ಯಾವ ಯಾವ ಶ್ರೇಷ್ಠತೆಗಳಿವೆ ಎಂದು ಪ್ರಶ್ನಿಸಿದಾಗ ಉದಾಹರಣೆಗೆ ಅವನು ಹೇಳುತ್ತಾನೆ ನಾನು ಹೆಚ್ಚು ಮೊಟ್ಟೆ ತಿನ್ನುತ್ತೇನೆ ಎಂದರೆ ಪ್ರತಿ ವ್ಯಕ್ತಿಯು ಅವನನ್ನು ಮೂರ್ಖನೆಂದು ಭಾವಿಸುವನು ಅಥವಾ ಅವನು ನಾನು ಹೆಚ್ಚು ತೂಕ ಎತ್ತುತ್ತೇನೆ ಅಥವಾ ಬಸ್ಕಿ ಹಾಕುತ್ತೇನೆ ಎಂದು ಹೇಳಿದರೆ ಎಲ್ಲರೂ ಅವನ ಮೇಲೆ ನಗುವರು. ಬದಲಿಗೆ ಅವನು ದೊಡ್ಡ ಫೈಲ್ವಾನ್ ಆಗಿದ್ದೇನೆಂದು ಹೇಳಿಕೊಂಡು ನಾನು ಹೆಚ್ಚು ಹೆಚ್ಚು ಆಹಾರ ಸೇವಿಸುತ್ತೇನೆ. ಹೆಚ್ಚು ಭಾರ ಹೊರುತ್ತೇನೆ. ತೂಕ ಎತ್ತುತ್ತೇನೆ ಮತ್ತು ಹಲವು ನಮೂನೆಯ ದೈಹಿಕ ಕಸರತ್ತು ತೋರಿಸುತ್ತೇನೆ ಎಂದು ಹೇಳಿದರೆ ನಾವು ಹೇಳಬಹುದು. ಅವನು ಸರಿ ಹೇಳುತ್ತಿದ್ದಾನೆ ಎಂದು. ಮತ್ತೆ ನಾವು ನೀನು ಕೇಂಟ್ ಜ್ಞಾನ ಹೊಂದಿದವನೆ ಎಂದು ಕೇಳಲಾರೆವು. ಅದಾಗ್ಯೂ ನಾವು ನೀನು ಕೇಂಟ್ ಜ್ಞಾನ ಹೊಂದಿದೆಯೇ? ಕೇಳಿದರೆ ಅವನು ತಕ್ಷಣದಿಂದ ಹೇಳಿಯಾನು ನನಗೆ ತತ್ವಜ್ಞನಕ್ಕೆ ಸಂಬಂಧವಾದರೇನು. ನಾನು ಪೈಲ್ವನನಾಗುವ ದಾವೆ ಮಾಡಿರುತ್ತೇನೆಯೇ ಹೊರತು ತತ್ವಜ್ಞಾನದಲ್ಲ. ಆದುದರಿಂದ ಮುಹಮ್ಮದ್ ರಸೂಲುಲ್ಲಾಹ್(ಸ) ರವರು ಹೇಳಿದ್ದು ನಾನು ಸರ್ವಶ್ರೇಷ್ಠರು, ಈಗ ನಾವು ನೋಡಬೇಕಾದುದು ಅವರ ದಾವೆ ಏನು ಮತ್ತು ಯಾರು ಯಾರು ಅವರ ದಾವೆಯಲ್ಲಿ ಭಾಗಿಯಾಗಿದ್ದಾರೆ. ಅವರೊಡನೆ ಸ್ಪರ್ಧಾತ್ಮಕವಾಗಿ ತುಲನೆ ಮಾಡಿ ನೋಡಿದರೆ, ತಿಳಿದುಕೊಂಡರೆ, ಅವರು ನಿಜವಾಗಿಯೂ ಶ್ರೇಷ್ಠರೇ ಅಥವ ಅಲ್ಲವೆ ಎಂಬುದು ತಿಳಿಯಬಹುದಾಗಿದೆ. ಈ ದೃಷ್ಟಿಯಿಂದ ನಾವು ಯೋಚನೆ ಮಾಡಿದರೆ, ರಸೂಲುಲ್ಲಾಹ್(ಸ) ರವರ ದಾವೆ ಏನಾಗಿತ್ತು. ಆಗ ನಮಗೆ ಪವಿತ್ರ ಖುರ್‌ಆನಿನ ಈ ವಚನ ಮುಂಬರುತ್ತದೆ. **“ಇನ್ನ ಅರ್ಸಲ್‌ನಾಕ ಇಲೈಕುಂ ರಸೂಲನ್ ಶಾಹಿದನ್ ಅಲೈಕುಂ ಕಮಾ ಅರ್‌ಸಲ್‌ನಾ ಇಲಾ ಫಿರ್‌ಜಾನ ರಸೂಲ”** (ಅಲ್–ಮುಝುಮ್ಮಿಲ್–16) ಫಿರ್‌ಜಾನನ ಬಳಿಗೆ ನಾವು ಒಬ್ಬ ಸಂದೇಶವಾಹಕನನ್ನು ಕಳುಹಿಸಿದಂತೆ, ಲೋಕದಲ್ಲಿ ಬಂದ ಪ್ರವಾದಿಗಳೆಲ್ಲ ಮೂಸ(ಅ) ರವರ ಸರಣಿಗೆ ಸೇರಿದವರೇ ಆಗಿದ್ದಾರೆ. ಹಝ್ರತ್ ಕೃಷ್ಣ ಮತ್ತು ಹಝ್ರತ್ ರಾಮಚಂದ್ರರವರ ಪ್ರವಾದಿತ್ವ ಇತರ ಮುಸ್ಲಿಮರು ನಂಬುವುದಿಲ್ಲ. ನಾವು ನಂಬುತ್ತೇವೆ. ಆದರೆ ನಮ್ಮ ಬಳಿ ಅವರ ಇತಿಹಾಸ ಸುರಕ್ಷಿತವಾಗಿಲ್ಲ. ಅವರ ಶಿಕ್ಷಣಗಳೇನಾಗಿದ್ದವು. ನಮಗೆ ಅದರ ಯಾವುದೇ ವಿವರಗಳು ಲಭ್ಯವಿಲ್ಲ. ಕೇವಲ ಗೀತೆ ಗ್ರಂಥ ಒಂದಿದೆ. ಅದು ಹಝ್ರತ್ ಕೃಷ್ಣ(ಅ) ರಿಗೆ ಸಂಬಂಧಿಸಿದ್ದೆಂದು ತಿಳಿದುಬರುತ್ತದೆ. ಆದರೆ ಅದರಲ್ಲಿ ಸಾಮಾನ್ಯವಾಗಿ ಯುದ್ಧಗಳ ಮತ್ತು ಐತಿಹಾಸಿಕ ಘಟನೆಗಳ ಬಗ್ಗೆ ವಿವರಗಳಿವೆ. ಅವರ ದಾವೆಯ ವಿವರಗಳು ಅದರಿಂದ ತಿಳಿದುಬರುವುದಿಲ್ಲ. ಅಂತೂ ಇಸ್ರಾಯಿಲೀ ನಬಿಯ ಇತಿಹಾಸ ಒಂದಷ್ಟು ಮಟ್ಟಕ್ಕೆ ಸುರಕ್ಷಿತವಾಗಿದೆ. ಹಝ್ರತ್ ಮೂಸ(ಅ) ರವರು ಸರದಾರರಾಗಿದ್ದರು. ಅಲ್ಲಾಹನು ರಸೂಲುಲ್ಲಾಹ್(ಸ) ರವರನ್ನು ಸಂಬೋಧಿಸಿ ಹೇಳಿದನು. ನೀನೂ ಮೂಸರಂತೆ ಒಂದು ನಬಿಯಾಗಿರುವೆ ಅಂದರೆ ಹಝ್ರತ್ ಮೂಸ(ಅ) ರವರಂತೆಯೇ ಮುಹಮ್ಮದ್ ರಸೂಲುಲ್ಲಾಹ್(ಸ) ಒಂದೇ ಕುಲಕ್ಕೆ ಸೇರಿದವರಾಗಿದ್ದರು. ಇದೀಗ ಹಝ್ರತ್ ಮೂಸ(ಅ) ರವರಿಗೆ ಲಭಿಸಿದ ಪ್ರವಾದಿ ಶ್ರೇಷ್ಠತೆಗಿಂತ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ರವರಿಗೆ ಲಭಿಸಿದ ಪ್ರವಾದಿತ್ವ ಶ್ರೇಷ್ಠತೆ ಸಾಬೀತಾದಾಗ ಮಾತ್ರ ರಸೂಲುಲ್ಲಾಹ್(ಸ) ರವರಿಗೆ ಕೌಸರ್ ಲಭಿಸಿದ ವಿಷಯ ಸಾಬೀತಾಗುತ್ತದೆ. ಏಕೆಂದರೆ ಅಲ್ಲಾಹನು ಇಲ್ಲಿ ಕೇವಲ ಹಝ್ರತ್ ಮೂಸ(ಅ) ಮತ್ತು ಮುಹಮ್ಮದ್ ರಸೂಲುಲ್ಲಾಹ್(ಸ) ಒಂದೇ ರೀತಿಯವರಾಗಿದ್ದಾರೆ ಎಂದು ಮತ್ತು ರಸೂಲುಲ್ಲಾಹ್(ಸ) ರವರ ಶ್ರೇಷ್ಠತೆ ಮೂಸ(ಅ) ರವರ ಶ್ರೇಷ್ಠತೆ ಒಂದೇ ರೀತಿಯದ್ದಾಗಿದೆ ಎಂದು ಹೇಳಲಿಲ್ಲ. ಬದಲು ಅಲ್ಲಾಹನು ಹೇಳುತ್ತಾನೆ. **“ಇನ್ನ ಆತೈನಾಕಲ್ ಕೌಸರ್”** ಅಂದರೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರಿಗೆ ದೊರಕಿದ ವಸ್ತುವು ಇತರರಿಗೆ ದೊರಕಿದ ವಸ್ತುವಿಗಿಂತ ಶ್ರೇಷ್ಠವಾಗಿದೆ ಎಂದರ್ಥ. ಅಂದರೆ ಹಝ್ರತ್ ಮೂಸ(ಅ) ರವರಿಗೆ ದೊರಕಿದ ಶ್ರೇಷ್ಠತೆಯೂ ರಸೂಲುಲ್ಲಾಹ್(ಸ) ರವರಿಗೆ ದೊರೆತಿದೆ ಮತ್ತು ಅವರಿಗಿಂತ ಮಿಗಿಲಾದ ಶ್ರೇಷ್ಠತೆಯೂ ದೊರೆತಿದೆ ಎಂದರ್ಥ. ಈಗ ನಾವು ನೋಡೋಣ. ಹಝ್ರತ್ ಮೂಸ(ಅ) ರವರೊಂದಿಗೆ ಘಟಿಸಿದ ಉನ್ನತ ಮಟ್ಟದ ದೃಷ್ಟಾಂತಗಳೇನಾಗಿದ್ದವು ಮತ್ತು ಮುಹಮ್ಮದ್ ರಸೂಲುಲ್ಲಾಹ್(ಸ) ರವರ ದೃಷ್ಟಾಂತಗಳೇನು ಸ್ಪರ್ಧಾತ್ಮಕ ದೃಷ್ಟಿಯಿಂದ ನೋಡಿದಾಗ ಮಾತ್ರ ತಿಳಿದು ಬರುವುದು. ಅಲ್ಲಾಹನು ಯಾವ ಯಾವ ವಿಧದಲ್ಲಿ ಕೌಸರ್ ನೀಡಿರುತ್ತಾನೆ. ಈ ಪೈಕಿ ನಾವು ಹಝ್ರತ್ ಮೂಸ(ಅ) ರವರ ಪರಿಸ್ಥಿತಿಗಳ ಮೇಲೆ ಅವಲೋಕನ ಮಾಡಿದಾಗ ನಮಗೆ ತಿಳಿದುಬರುತ್ತದೆ.

1) ಹಝ್ರತ್ ಮೂಸ(ಅ) ದೈವಿಕ ಸಂದೇಶವನ್ನು ಪ್ರಸಾರ ಮಾಡಲು ಮತ್ತು ಜನರಿಗೆ ಆಧ್ಯಾತ್ಮಿಕ ಜ್ಞಾನ ನೀಡಲು ಆಗಮಿಸಿದ್ದರು. ಈ ಕಾರ್ಯದಲ್ಲಿ ಭೌತಿಕ ಜ್ಞಾನ ಸಹಕಾರಿಯಾಗುತ್ತದೆ ಎಂಬ ಸತ್ಯ ಸ್ಪಷ್ಟವಿದೆ. ವಿದ್ಯೆ ಕಲಿಸುವುದು ವಿದ್ಯಾವಂತನೊಬ್ಬನಿಗೆ ಕಷ್ಟದ ಕೆಲಸವೇನಲ್ಲ. ಆದರೂ ಹಝ್ರತ್ ಮೂಸ(ಅ) ರವರಿಗೆ ಪ್ರವಾದಿಯ ಪದವಿ ದೊರೆತಾಗ ಅವರು ವಿದ್ಯಾವಂತರಾಗಿದ್ದರು. ಪವಿತ್ರ ಖುರ್‌ಆನ್ ಮತ್ತು ತಾರಾತ್ ಎರಡರಿಂದಲೂ ಈ ವಿಷಯ ತಿಳಿದುಬರುತ್ತದೆ. ಅಂದರೆ ಹಝ್ರತ್ ಮೂಸ(ಅ) ರವರಿಗೆ ನಬಿಯ ಜವಾಬ್ಧಾರಿ ದೊರೆತಾಗ ಅವರ ಬಳಿ ಲೌಕಿಕ ಆಯುಧವೊಂದು ಅವರ ಬಳಿಯಿತ್ತು. ಅಂದರೆ ಅವರು ವಿದ್ಯಾವಂತರಾದ ಕಾಎರಣ ಆ ಕಾರ್ಯವು ಒಳ್ಳೆಯ ರೀತಿಯಿಂದ ನೆರವೇರಿಸಬಹುದಾಗಿತ್ತು. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರಿಗೆ ಅದೇ ಕಾರ್ಯ ಒಪ್ಪಿಸಲ್ಪಟ್ಟಾಗ ಅವರು ವಿದ್ಯಾವಂತರಾಗಿರಲಿಲ್ಲ. ಆದರೆ ಅವಿದ್ಯಾವಂತರಾಗಿದ್ದರೂ ಅವರು ಹಝ್ರತ್ ಮೂಸ(ಅ) ರವರಿಗಿಂತ ಹೆಚ್ಚು ವಿಜಯ ಸಾಧಿಸಿದರು.

ಇದೊಂದು ಬಹು ದೊಡ್ಡ ಶ್ರೇಷ್ಠತೆ ಯಾಗಿದೆ. ಅದು ರಸೂಲುಲ್ಲಾಹ್(ಸ) ರವರಿಗೆ ಹಝ್ರತ್ ಮೂಸ(ಅ) ರವರ ಮೇಲೆ ದೊರೆತಿದೆ.

2) ಹಝ್ರತ್ ಮೂಸ(ಅ) ಓರ್ವ ಸುಸಂಸ್ಕೃತ ಸಮುದಾಯದಲ್ಲಿ ಆಗಮಿಸಿದ್ದರು. ಅವರು ಮಿಸರ್‌ಗೆ ಆಗಮಿಸಿದಾಗ ಆಗ ಮಿಸ್ರಿ ಸಮುದಾಯವು ಉತ್ತಮ ಸಮುದಾಯವಾಗಿ ಪರಿಗಣಿತವಾಗುತ್ತಿತ್ತು. ಬನಿ ಇಸ್ರಾಯಿಲ್ ಸಮುದಾಯವು ಅವರ ಸಂಗತಿಯಲ್ಲವಾದ ಕಾರಣ ವಿದ್ಯಾವಂತರಾಗಿದ್ದರು ಮತ್ತು ಸುಸಂಸ್ಕೃತರಾಗಿದ್ದರು. ವಿದ್ಯಾವಂತರನ್ನು, ಸುಂಸ್ಕೃತರನ್ನು ಧಾರ್ಮಿಕ ಜ್ಞಾನ ನೀಡುವುದು ಸರಳ ಕಾರ್ಯವಾಗಿರುತ್ತದೆ. ಅವರಲ್ಲಿ ಸಂಘಟನೆ ಸ್ಥಾಪಿಸುವುದು ಮತ್ತು ಅವರಲ್ಲಿ ಸಂಘಟನಾತ್ಮಕ ಆತ್ಮ ಬೆಳೆಸುವುದು ಸುಲಭದ ಕೆಲಸವಾಗಿರುತ್ತದೆ. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ಇಂತಹದೊಂದು ಸಮುದಾಯದಲ್ಲಿ ಆಗಮಿಸಿದರು. ಅದು ವಿಶ್ವದಲ್ಲಾಗಲೀ ಸಂಸ್ಕೃತಿಯಿಂದಾಗಲಿ ಸಂಬಂಧ ಹೊಂದಿರಲಿಲ್ಲ. ಹಝ್ರತ್ ಉಮರ್(ರ) ರವರ ಕಾಲದ ಒಂದು ಘಟನೆಯಿದೆ. ಕಿಸ್ರಾ (ಇರಾನಿ) ರವರೊಂದಿಗೆ ಮುಸಲ್ಮಾನರ ಯುದ್ಧವಾಗುತ್ತಿತ್ತು. ಒಂದು ಸಂದರ್ಭದಲ್ಲಿ ಕಿಸ್ರಾ ಅರಸನು ತನ್ನ ದರಬಾರಿಯವರನ್ನು ಸಂಬೋಧಿಸಿ ಹೇಳಿದನು. ಆ ಜನರನ್ನು ನನ್ನ ಬಳಿ ಕರೆ ತನ್ನಿ. ನನಗೆ ನೀವು ಅವರೊಡನೆ ಒಳ್ಳೆಯ ರೀತಿಯಲ್ಲಿ ವ್ಯವಹರಿಸುವುದಿಲ್ಲ ಎಂಬಂತೆ ಕಾಣುತ್ತದೆ. ನಾನು ಅವರಿಗೆ ಹಣ ಕೊಡುವೆನು ಮತ್ತು ಅವರು ಸಂತೋಷಪಟ್ಟು ಮರಳುವರು. ಅದರಂತೆ ಕಿಸ್ರಾ ಅರಸನು ಇಸ್ಲಾಮಿ ಸೈನ್ಯದ ಸರದಾರರನ್ನು ಹೇಳಿ ಕಳುಹಿಸಿದ. ನನ್ನ ಬಳಿ ನಿಮ್ಮ ಒಂದು ದೊಡ್ಡ ತಂಡವನ್ನು ಕಳುಹಿಸಿಕೊಡಿ. ಆ ತಂಡವು ಕಿಸ್ರಾ ಅರಸರ ಬಳಿ ಬಂದು ನಿಂತಿತು. ಆಗ ಕಿಸ್ರಾ ಅರಸನು ಹೇಳಿದನು. ನೀವು ಪಶುಗಳ ಸಮಾನ ಜನರಾಗಿದ್ದೀರಿ. ಮೃತ ಜೀವಿಗಳನ್ನು ತಿನ್ನುವವರು, ಹೊಲಸು ವಸ್ತುಗಳನ್ನು ತಿನ್ನುವವರು, ನಿಮಗೆ ನಮಗೆ ಇರುವ ಸಮಾನತೆಯಾದರೂ ಏನು. ನಾನು ನಿಮಗೆ ಹಣ ಕೊಡುವೆನು. ನೀವು ಮರಳಿ ಹೋಗಿ ಖರ್ಚು ಮಾಡಿರಿ. ಮನೆಗೆ ಹೋಗಿ ಆರಾಮವಾಗಿರಿ. ನೀವು ಮರಳಿ ಹೋಗಲು ಒಪ್ಪಿಕೊಂಡರೆ ನಾನು ನಿಮ್ಮ ಪ್ರತಿಯೊಬ್ಬ ಮುಖಂಡನಿಗೆ ಎರಡು ಅಶ್ರಫಿ (ಚಿನ್ನದ ನಾಣ್ಯ) ಮತ್ತು ಪ್ರತಿಯೊಬ್ಬ ಸೈನಿಕನಿಗೆ ಒಂದು ಅಶ್ರಫಿ (ಚಿನ್ನದ ನಾಣ್ಯ) ನೀಡುವ ವಾಗ್ದಾನ ಮಾಡುತ್ತೇನೆ. ಕಿಸ್ರಾ ಅರಸನು ತನ್ನ ಮಾತುಗಳನ್ನು ಮುಗಿಸಿದ ನಂತರ ತಂಡದ ಸರದಾರರು ಅವರು ಓರ್ವ ಸಹಾಬಿಯಾಗಿದ್ದರು. ಉತ್ತರ ನೀಡಿದರು. ನೀವು ಹೇಳಿದ್ದು ಸರಿಯಗಿದೆ. ನಾವು ನಿಜವಾಗಿಯೂ ಪಶು ಸಮಾನವೇ ಆಗಿದ್ದೆವು. ನಾವು ಮೃತ ಜೀವಿಗಳನ್ನು ತಿನ್ನುತ್ತಿದ್ದೆವು. ನಾವು ಹೊಲಸು ವಸ್ತುಗಳನ್ನು ತಿನ್ನುತ್ತಿದ್ದೆವು. ನಾವು ಅನಾಥರೊಂದಿಗೆ ಕೆಟ್ಟದಾಗಿ ವರ್ತಿಸುತ್ತಿದ್ದೆವು. ನಾವು ತನ್ನ ಮಾತೆಯವರೊಂದಿಗೆ ವಿವಾಹ ಮಾಡಿಕೊಳ್ಳುತ್ತಿದ್ದೆವು. ನಮ್ಮೊಳಗೆ ಇವೆಲ್ಲ ನ್ಯೂನತೆಗಳಿದ್ದವು. ಆದರೆ ಅಲ್ಲಾಹನು ನಮ್ಮೊಡನೆ ಓರ್ವ ಸಂದೇಶವಾಹಕನನ್ನು ಕಳುಹಿಸಿರುವನು. ಅವರ ಮೇಲೆ ನಾವು ವಿಶ್ವಾಸ ಹೊಂದಿದವರಾಗಿದ್ದೇವೆ. ಆದುದರಿಂದ ನಮ್ಮ ಸ್ಥಿತಿ ಮೊದಲಿನಂತಿಲ್ಲ. ನಾವು ಈಗ ಈ ತರಹದ ಆಮಿಷಗಳಿಗೆ ತುತ್ತಾಗುವವರಲ್ಲ. ನಮ್ಮ ನಿಮ್ಮ ಮಧ್ಯೆ ಯುದ್ಧ ಸಾರಿಯಾಗಿದೆ. ಈಗ ಅದರ ನಿರ್ಣಯ ಯುದ್ಧ ಮೈದಾನದಲ್ಲಾಗುವುದು ಹೊರತು ಅಶ್ರಫಿಗಳ ಆಮೀಷದಿಂದಲ್ಲ. ಒಂದು ನಾವು ನಿಮ್ಮನ್ನು ಹತ್ಯೆ ಮಾಡುವೆವು ಅಥವಾ ಸ್ವಯಂ ಈ ಯುದ್ಧದಲ್ಲಿ ಶಹೀದರಾಗುವೆವು. ಅರಸನು ತನ್ನ ನೌಕರನೊಬ್ಬನಿಗೆ ಹೇಳಿದನು. ಹೋಗು ಒಂದು ಮಣ್ಣಿನ ತೊಟ್ಟಿ ತೆಗೆದುಕೊಂಡು ಬನ್ನಿ. ಆ ನೌಕರನು ಹೋದನು ಮತ್ತು ಒಂದು ಮಣ್ಣು ತುಂಬಿದ ಚೀಲ ತಂದನು. ಕಿಸ್ರಾ ಅರಸನು ಆ ಸಹಾಬಿಗೆ ಹೇಳಿದನು. ಸ್ವಲ್ಪ ಮುಂದೆ ಬನ್ನಿ. ಅವರು ಮುಂದೆ ಬಂದಾಗ ಅವರಸು ನೌಕರನಿಗೆ ಹೇಳಿದನು. ಆ ಮಣ್ಣಿನ ತೊಟ್ಟಿ ಅವನ ತಲೆಯ ಮೇಲೆ ಇಡು. ಆ ಸಹಾಬಿಯರು ಅಲ್ಲಗಳೆಯಬಹುದಾಗಿತ್ತು. ಆದರೆ ಅವರು ಆದರದಿಂದ ಬಗ್ಗಿ ಆ ತೊಟಿಯನ್ನು ತಲೆಯ ಮೇಲೆ ಇರಿಸಿಕೊಂಡರು. ಅರಸನು ಹೇಳಿದನು. ಹೋಗು ಇನ್ನು ನಾನು ಏನನ್ನೂ ಕೊಡಲಾರೆ. ಈ ಮಣ್ಣು ನಿಮ್ಮ ಮೇಲೆ ಹಾಕುತ್ತೇನೆ. ಆ ಸಹಾಬಿ ಚಂಗನೆ ಜಿಗಿದು ಅಲ್ಲಿಂದ ಹೊರಟರು. ಮತ್ತು ತನ್ನ ಸಂಗಡಿಯರೊಂದಿಗೆ ಹೇಳಿದರು. ನಡೆಯಿರಿ ಅರಸನು ಸ್ವಯಂ ತನ್ನ ಕೈಗಳಿಂದ ಇರಾನಿನ ಭೂಮಿಯನ್ನು ನಮಗೆ ಒಪ್ಪಿಸಿದ್ದಾನೆ. ಅರಸನು ಬಹುದೇವಾರಾಧಕನಾಗಿದ್ದನು. ಬಹುದೇವಾರಾಧಕರು ಸಂಶಯಪಡುವವರಾಗಿರುತ್ತಾರೆ. ಅವನು ಈ ಪದಗಳನ್ನು ಕಂಪಿಸತೊಡಗಿದ ಮತ್ತು ತನ್ನ ದರಬಾರಿಯವರನ್ನು ಕರೆದು ಹೇಳಿದ. ಅವರನ್ನು ಮರಳಿ ಕರೆ ತನ್ನಿ. ಆದರೆ ಆ ಸಮಯದವರೆಗೆ ಅವರ ಕುದುರೆ ಹತ್ತಿ ಬಹು ದೂರದವರೆಗೆ ಹೊರಟು ಬಿಟ್ಟಿದ್ದರು. ಅಂತೂ ಹಝ್ರತ್ ಮೂಸ(ಅ) ಯಾವ ಸಮುದಾಯದಲ್ಲಿ ಹಾಗೂ ದೇಶದಲ್ಲಿ ಕಾರ್ಯ ಮಾಡಿದ್ದರು ಆ ಸಮುದಾಯ ಮತ್ತು ದೇಶವು ಎಲ್ಲರಿಗಿಂತ ಹೆಚ್ಚು ಸುಸಂಸ್ಕೃತರಾಗಿದ್ದರು. ಪುರಾತನ ಸಂಶೋಧನೆಗಳಿಂದಲೂ ಈ ವಿಷಯ ಸ್ಪಷ್ಟವಾಗುತ್ತದೆ. ಆ ಕಾಲದ ಕಟ್ಟಡಗಳನ್ನು ನೋಡಿ ಅದರ ಮುಂದೆ ಇಂದಿನ ಕಟ್ಟಡಗಳು ಕಳಪೆಯಾಗಿ ಕಾಣುತ್ತವೆ. ವಿಜ್ಞಾನ ಕ್ಷೇತ್ರದಲ್ಲಿ ನೋಡಿದರೆ ಅವರು ಮೃತರನ್ನು ಮಸಾಲೆ ಹಚ್ಚಿ ಇಂದಿನವರೆಗೆ ಜೀವಂತವಾಗಿ ಕಾಣುವ ಹಾಗೆ ಸುರಕ್ಷಿತವಾಗಿ ಇಟ್ಟಿದ್ದಾರೆ. ನಾನು ಎರಡು ಮಮ್ಮಿಗಳನ್ನು ಸ್ವತಃ ಕಂಡಿದ್ದೇನೆ. ಅವರ ಮೇಲಿನ ಚಾದರ ತೆಗೆದರೆ ಮಲಗಿಕೊಂಡಿದ್ದಾರೇನು ಎಂಬಂತೆ ಕಂಡುಬರುತ್ತದೆ. ಕೇವಲ ಒಂದಿಷ್ಟು ಸೊರಗಿದ್ದಾನೆ ಎಂದಷ್ಟೇ ಭಾವಿಸಬಹುದು. ಯೂರೋಪಿಯನರು ಹಾಗೆ ಮಾಡಲು ಇಲ್ಲಿಯವರೆಗೆ ಪ್ರಯತ್ನಪಟ್ಟರೂ ಸಾಧಿಸಲಾಗಲಿಲ್ಲ. ಈಗ ಅವರು ಮಮ್ಮಿಗಳಿಂದ ಮದ್ದು ತೆಗೆದುಕೊಂಡು ಅದರ ವಿಶ್ಲೇಷಣೆ ಮಾಡಿದ್ದಾರೆ. ಒಂದಿಷ್ಟು ಮಟ್ಟಿಗೆ ಅದನ್ನು ಸುರಕ್ಷಿತ ಇಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಆದರೂ ಅವರ ಮದ್ದು ಕೇವಲ ಹತ್ತು ಹನ್ನೆರಡು ವರ್ಷದವರೆಗೆ ಮಾತ್ರ ಕೆಲಸ ಮಾಡುತ್ತಿದೆ. ಆದರೆ ಈಜಿಫ್ಟ್‌ನ ಶವಗಳು ಸಾವಿರಾರು ವರ್ಷಗಳಿಂದ ಸುರಕ್ಷಿತವಾಗಿದೆ. 3400 ವರ್ಷ ಅಲ್ಲದೇ ಅದಕ್ಕಿಂತ ಹೆಚ್ಚು ಕಾಲದ ಶವಗಳು ಇಂದಿಗೂ ಸುರಕ್ಷಿತವಾಗಿವೆ. ಇದು ಎಷ್ಟು ದೊಡ್ಡ ಸಾಧನೆಯಾಗಿತ್ತು. ಇಂದಿಗೂ ಇಂದಿನ ದೇಶಗಳಿಗೆ ಸಾಧಿಸಲು ಆಗಲಿಲ್ಲ. ಈಜಿಫ್ಟ್ ದೇಶದಲ್ಲಿ ಚಿನ್ನದ ಕೆಲಸವು ಅತ್ಯಂತ ಉನ್ನತ ಮಟ್ಟದಲ್ಲಿ ಸಾಗುತಿತ್ತು. ಅದು ಅವರ ಪ್ರಗತಿಗೆ ಹಿಡಿದ ಕನ್ನಡಿಯಾಗಿದೆ. ಇದರಿಂದ ನಾವು ಅಂದಾಜಿಸಬಹುದು. ಈಜಿಫ್ಟ್ ಸಮುದಾಯದೊಡನೆ ವಾಸಿಸುವ ಜನರು ಎಷ್ಟೊಂದು ಸುಸಂಸ್ಕೃತರು ಮತ್ತು ಪ್ರಗತಿಶೀಲರಾಗಿದ್ದರು ಎಂದು. ಅಂದರೆ ಹಝ್ರತ್ ಮೂಸ(ಅ) ಅಂತಹದೊಂದು ಸುಸಂಸ್ಕೃತ ಮತ್ತು ಭೌತಿಕ ನೆಲೆಯಲ್ಲಿ ಶೈಕ್ಷಣಿಕ ಉನ್ನತಿ ಸಾಧಿಸಿದ ಜನರೆಡೆಯಲ್ಲಿ ಕೆಲಸ ಮಾಡಬೇಕಾಯಿತು. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರಿಗೆ ತನ್ನ ತಾಯಿಯನ್ನು ಆದರಿಸಲು ಕಲಿತಿರದಂತಹ ಮೂಡ ಜನರೆಡೆ ಕೆಲಸ ಮಾಡಿಸಿಕೊಳ್ಳಬೇಕಾಯಿತು. ಅವರು ತನ್ನ ಮಾತೆಯವರೊಂದಿಗೆ ವಿವಾಹವಾಗಲು ಹೇಸುತ್ತಿರಲಿಲ್ಲ. ಅಂತೆಯೇ ಇತರ ಹಲವು ನ್ಯೂನತೆಗಳು ಅವರಲ್ಲಿದ್ದವು. ಅಂತಹರೊಡನೆ ಕಾರ್ಯವೆಸಗಿ ಮುಹಮ್ಮದ್ ರಸೂಲ್ಲುಲ್ಲಾಹ್(ಸ) ಯಶಸ್ವಿಯಾದರು. ಹಝ್ರತ್ ಮೂಸ(ಅ) ರವರಿಗಿಂತ ಹೆಚ್ಚು ಯಶಸ್ವಿಯಾದರು.

3) ಹಝ್ರತ್ ಮೂಸಾ(ಅ) ರವರಿಗೆ ನುಬುವ್ವತ್ (ಪ್ರವಾದಿತ್ವ) ಲಭಿಸಿದಾಗ ಅವರು ಅಲ್ಲಾಹನೊಡನೆ ಹೇಳಿದರು. ಈ ಕೆಲಸ ಬಹುದೊಡ್ಡದಾಗಿದೆ. ನನ್ನಿಂದ ಆಗಲಿಕ್ಕಿಲ್ಲ. ತನ್ನ ಜೊತೆ ಇನ್ನೊಬ್ಬನನ್ನು ಸಹಾಯಕನಾಗಿ ನೇಮಿಸಿರಿ ಮತ್ತು ಅವರು ಹೇಳಿದರು. **ವಜ್‌ಅಲ್ ಲೀವಝೀರ ಮಿನ್ ಅಹ್‌ಲಿ** (ತಾಹಾ–2) ಆ ಸಹಾಯಕನು ನನ್ನ ಸಂಬಂಧಿಕರಲ್ಲಿ ಇರಬೇಕು. ಹಝ್ರತ್ ಮೂಸ(ಅ) ರವರ ಭಾವನೆಗಳನ್ನು ನೋಡಿ ಅಲ್ಲಾಹನು ಅವರಿಗೆ ಪ್ರವಾದಿತ್ವ ನೀಡುತ್ತಿದ್ದಾಗ ಅವರು ಈ ಕೆಲಸ ನನ್ನಿಂದಾಗದು ಎಂದರು. ಅಲ್ಲಾಹನು ಒಂದು ಕರ್ತವ್ಯ ಅವರಿಗೆ ನೀಡುತ್ತಿದ್ದಾನೆ ಮತ್ತು ಮೂಸ(ಅ) ಅದನ್ನು ನಿರಾಕರಿಸುತ್ತಾರೆ. ಅದು ಅವರ ವಿನಯವಾಗಿತ್ತು ಎಂದಾದರೆ, ವಿನಯಕ್ಕೂ ಒಂದು ಮಿತಿಯಿರುತ್ತದೆ. ಅಲ್ಲಾಹನು ಪದೇ ಪದೇ ಹೇಳುತ್ತಾನೆ. ಫಿರ್‌ಔನನ ಬಳಿಗೆ ಹೋಗಿರಿ. ಆದರೆ ತೌರಾತ್‌ನಿಂದ ತಿಳಿದುಬರುತ್ತದೆ. ಅವರು ಉತ್ತರವಾಗಿ ಒಪ್ಪುತ್ತಿರಲಿಲ್ಲ. ಮತ್ತು ಅವರು ತಮ್ಮ ಜೊತೆಯಲ್ಲಿ ಓರ್ವ ಸಹಾಯಕನನ್ನು ಬೇಡಿದರು. ಅದೂ ತಮ್ಮ ಕುಟುಂಬದಿಂದ, ಇದು

ತೋರಿಸಿ ಕೊಡುವುದೇನೆಂದರೆ ಅಲ್ಲಾಹನ ಆದೇಶ ಪಡೆದಾಗ್ಯೂ ತನ್ನ ಕೆಲಸದಲ್ಲಿ ಭೌತಿಕ ಸಾಧನೆಗಳ ನೆರವು ಬೇಡುತ್ತಿದ್ದರು. ಅವರ ಎದುರಿನಲ್ಲಿ ಮುಹಮ್ಮದ್ ರಸೂಲುಲ್ಲಾಹ್(ಸ) ನುಬುವ್ವತ್ ಕಾಲದಿಂದ ಎಷ್ಟೋ ದೂರವಾಗಿದ್ದರು. ಮೂಸ(ಅ) ರವರ ಸಮೀಪ ಕಾಲದಲ್ಲಿಯೇ ಹಝ್ರತ್ ಇಬ್ರಾಹಿಮ್(ಅ), ಹಝ್ರತ್ ಇಸ್ಹಾಖ್(ಅ), ಹಝ್ರತ್ ಯಾಖೂಬ್(ಅ), ಹಝ್ರತ್ ಯೂಸೂಫ್(ಅ) ರಂತಹ ಹಲವು ಪ್ರವಾದಿಗಳು ಅಗಲಿ ಹೋಗಿದ್ದರು. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರಿಗಿಂತ ಸುಮಾರು 2500 ವರ್ಷಗಳ ಹಿಂದೆ ಹಝ್ರತ್ ಇಬ್ರಾಹಿಂ(ಅ) ಮತ್ತು ಹಝ್ರತ್ ಇಸ್ಮಾಯಿಲ್(ಅ) ಆಗಮಿಸಿದ್ದರು. ಅನಂತರ ಅವರ ದೇಶದಲ್ಲಿ ಯಾವ ಪ್ರವಾದಿಯೂ ಬಂದಿರಲಿಲ್ಲ. ಆದರೂ ಅವರ ಸಾಹಸ ನೋಡಿ ಅವರ ಬಳಿ ದಿವ್ಯದೂತನು ಬಂದನು ಮತ್ತು ಅವರೊಡನೆ ಹೇಳಿದನು. **"ಇಕ್ರಾ"** ಅದರರ್ಥ ನೀನು ಓದು. ರಸೂಲುಲ್ಲಾಹ್(ಸ) ಹೇಳಿದರು. **"ಮಾ ಅನಾ ಬಿಖಾರಿಯಿಂ"** ನಾನು ಓದು ಬರಹ ಬಲ್ಲವನಲ್ಲ. ಅದರ ಅರ್ಥ ಅವರಿಗೆ ಆಗ ಯಾವುದೇ ಗ್ರಂಥ ಓದಬೇಕಾಗಿರಲಿಲ್ಲ. ಜಿಬ್ರೀಲ್(ಅ) ರವರ ಬಳಿ ಯಾವುದೇ ಗ್ರಂಥವಿರಲಿಲ್ಲ. ಆ ಗ್ರಂಥವನ್ನು ಅವರಿಗೆ ಓದಲು ಹೇಳಲು, ಹಾಗೆ ಒಬ್ಬನು ಗ್ರಂಥವಿಲ್ಲದೆ ಬರುವವನಾದರೆ ಅವನು ಓದಲು ಹೇಳಿದರೆ ಅದರ ಅರ್ಥ ನಾನೇನೆಲ್ಲ ಹೇಳುವೆನು ಅದನ್ನು ಉಚ್ಚರಿಸು ಎಂದರ್ಥವಾಗುತ್ತದೆ. ಆದುದರಿಂದ ಆ ಸಮಯ ದೇವದೂತನು ಓದು ಎಂದು ಹೇಳಿದ ಅರ್ಥವು ಓ ವ್ಯಕ್ತಿಯೇ (ಆ ಸಮಯ ಅವರು ನಬಿಯಾಗಿರಲಿಲ್ಲ) ನಾನು ಏನೆಲ್ಲ ಹೇಳುವೆನು ಅದನ್ನು ಉಚ್ಚರಿಸು. ಆದರೆ ಅವರು ಹೇಳುತ್ತಿದ್ದರು. "ಮಾ ಅನಾ ಬಿಖ್ಹಾರಿ" ನಾನು ಓದು ಬರಹ ಬಲ್ಲವನಲ್ಲ. ಇದಾಗಿತ್ತು ಅವರ ವಿನಯ. ಅವರು ಭಾವಿಸುತ್ತಿದ್ದರು. ನನಗೆ ಯಾವುದೊಂದು ಮಹತ್ತರ ಕೆಲಸ ಒಪ್ಪಿಸುವಂತಿದೆ. ಆದರೆ ಅಲ್ಲಾಹನು ಅತ್ಯಂತ ಜಾಣ್ಮೆಯುಳ್ಳವನಾಗಿದ್ದಾನೆ. ನಾನು ಅಬಲ ದಾಸನಾಗಿದ್ದೇನೆ. ನನ್ನಿಂದ ಆ ಕೆಲಸ ನಿರ್ವಹಿಸಲು ಆಗದಿರಬಹುದು. ಆದುದರಿಂದ ಅವರು ಹೇಳಿದರು. "ನಾನು ಓದು ಬರಹ ಬಲ್ಲವನಲ್ಲ. ದೇವದೂತರು ಮರು ನುಡಿದರು. "ಇಕ್ರಾ" ಓದು, ಅವರು ಮತ್ತೆ ಅದನ್ನೇ ಹೇಳಿದರು. "ಮಾ ಅನಾ ಬಿಖಾರಿಯಿಂ ನಾನು ಓದು ಬರಹ ಬಲ್ಲವನಲ್ಲ. ಮತ್ತು ಮೂರನೇ ಸಲ ದೇವದೂತರು ಹೇಳಿದರು. "ಇಕ್ರಾ" ಓದು ಆಗ ಅವರು ಪದೇ ಪದೇ ನಿರಾಕರಿಸಲಿಲ್ಲ. ಅಂತೂ ಅವರು ಭಾವಿಸಿದರು. ಅಲ್ಲಾಹನು ಯಾವುದೋ ಜವಾಬ್ದಾರಿ ನನಗೆ ಒಪ್ಪಿಸ ಬಯಸುತ್ತಾನೆಯಾದರೆ ಅವರು ತಕ್ಷಣದಿಂದ ಅವನ ಆದೇಶ ಒಪ್ಪಿಕೊಂಡರು ಮತ್ತು ಭಾವಿಸಿದರು. ಈಗಲೂ ನಿರಾಕರಿಸುವುದು ಅಸಭ್ಯ ರೀತಿಯಾಗಬಹದು ಮತ್ತು ಅವರು ತಮಗೆ ಯಾವುದೇ ಸಹಾಯಕನನ್ನೂ ಬೇಡಲಿಲ್ಲ. ಬದಲಾಗಿ ಹೇಳಿದರು. ಅಲ್ಲಾಹನು ಬಯಸುವನಾದರೆ ನಾನು ಈ ಭಾರವನ್ನು ಒಬ್ಬಂಟಿಯಾಗಿಯೇ ನಿರ್ವಹಿಸುವೆನು. ಇದಾಗಿದೆ ಅವರ ಶ್ರೇಷ್ಠತೆ ಅದು ಅವರ ಶ್ರೇಷ್ಠ ಸ್ಥಾನವನ್ನು ಎತ್ತಿ ಹಿಡಿಯುತ್ತದೆ. ಮೂಸ(ಅ) ರವರಿಗೆ ಒಂದು ಸಣ್ಣದಾದ ಕಾರ್ಯ ಒಪ್ಪಿಸಿದರೆ ಅವರು ಸಹಾಯಕನನ್ನು ಬೇಡಿದರು. ಆದರೆ ಅವರಿಗೆ ಬಹುದೊಡ್ಡ ಕಾರ್ಯ ಒಪ್ಪಿಸಿದರೂ ನಾನು ಒಬ್ಬಂಟಿಯಾಗಿಯೇ ಈ ಕಾರ್ಯ ನಿರ್ವಹಿಸುವೆನು ಎಂದು ಹೇಳಿದರು. ಮತ್ತು ಅವರು ಬಹು ಯಶಸ್ವಿಯಾಗಿ ಅದನ್ನು ನೆರವೇರಿಸಿ ತೋರಿಸಿದರು. ಇದು ಹಝ್ರತ್ ಮೂಸ(ಅ) ರವರಿಗೆ ಮೇಲೆ ದೊರೆತ ಮಹೋನ್ನತ ಶ್ರೇಷ್ಠತೆಯಾಗಿದೆ.

4) ಹಝ್ರತ್ ಮೂಸ(ಅ) ತಮ್ಮ ದೇಶದಿಂದ ಹೊರಟರು. ಫಿರ್‌ಔನ್ ಅವರನ್ನು ಹಿಂಬಾಲಿಸಿದರು. ಪವಿತ್ರ ಖುರ್‌ಆನಿನ ಪ್ರಕಾರ ಆಗ ಮೂಸ(ಅ) ರವರ ಸಮುದಾಯವು ಗಾಬರಿಗೊಂಡಿತು ಮತ್ತು ತಾವು ಫಿರ್‌ಔನಿನ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಭಾವಿಸಿದರು ಆದರೂ ಅವರು ಚೀರಿಕೊಂಡು ಹಝ್ರತ್ ಮೂಸ(ಅ) ರವರಿಗೆ ಹೇಳಿದರು. **ಇನ್ನ ಲಮುದ್ರಕೂನ್**–(ಶುಅಶಾಅ–4) ಓ ಮೂಸ ನಾವು ಸಿಕ್ಕಿಬಿದ್ದೆವು. ಆಗ ಹಝ್ರತ್ ಮೂಸ(ಅ) ಅವರಿಗೆ ಹೇಳಿದರು. **ಕಲ್ಲಾ ಇನ್ನ ಮಯಿಯರಬ್ಬಿ ಸಯಹದೀನ್** (ಅಶ್‌ಖೂರಾರ್–4) ಖಂಡಿತವಾಗಿಯೂ ಹೀಗಾಗಲು ಸಾಧ್ಯವಿಲ್ಲ. ಅಲ್ಲಾಹನು ನನ್ನ ಜೊತೆಯಲ್ಲಿದ್ದಾನೆ. ಅವನು ನಮಗೆ ಶತ್ರುಗಳ ಆಕ್ರಮಣದಿಂದ ರಕ್ಷಿಸುವನು. ಆದುದರಿಂದ ಅಲ್ಲಾಹನು ಅವರಿಗೆ ಸುರಕ್ಷಿತವಾಗಿಸಿದನು ಮತ್ತು ಫಿರ್‌ಔನ್ ಹೇಳಿದನು ತನ್ನ ಸೈನ್ಯಗಳ ಸಮೇತ ಸಮುದ್ರದಲ್ಲಿ ಮುಳುಗಿ ಹೋದನು.

ಅದೇ ರೀತಿ ರಸೂಲುಲ್ಲಾಹ್(ಸ) ವಲಸೆ ಹೋಗುವ ಸಮಯ ಮಕ್ಕದಿಂದ ಹೊರಟರು. ಮತ್ತು ಸೌರ್‌ಗುಹೆಯಲ್ಲಿ ರಕ್ಷಣೆ ಪಡೆದರು. ಶತ್ರುಗಳು ಒಬ್ಬ ಪರಿಣಿತ ಸಂಶೋಧಕನ ಮಾರ್ಗದರ್ಶನದಲ್ಲಿ ಹುಡುಕುತ್ತ ಸರಿಯಾಗಿ ಆ ಗುಹೆಯ ಮೇಲೆ ಬಂದು ತಲುಪಿದನು. ಅದರೊಳಗೆ ರಸೂಲುಲ್ಲಾಹ್(ಸ) ಹಝ್ರತ್ ಅಬೂಬಕರ್ ಅಡಗಿ ಕುಳಿತುಕೊಂಡಿದ್ದನು. ಆ ಸಮಯ ಸಂಶೋಧಕನು ತನ್ನ ಸಂಗಡಿಗರಿಗೆ ಹೇಳಿದನು. ಮುಹಮ್ಮದ್(ಸ) ನಿಶ್ಚಯವಾಗಿಯೂ ಇಲ್ಲಿ ಅಡಗಿಕೊಂಡಿದ್ದಾರೆ. ಅವರು ಈ ಗುಹೆಯಲ್ಲಿ ಇಲ್ಲ ಎಂದಾರೆ ಆಕಾಶದ ಮೇಲೆ ಹೋದರು ಎಂದಾಗಬಹುದು. ಆಗ ಶತ್ರು ಅವರಿಗೆ ಎಷ್ಟು ಹತ್ತಿರವಾಗಿದ್ದರು ಎಂದರೆ ಹಝ್ರತ್ ಅಬೂಬಕರ್ ಗಾಬರಿಗೊಂಡರು. ಮತ್ತು ಹೇಳಿದ. ಓ ಪ್ರವಾದಿಯವರೇ! ಶತ್ರು ಎಷ್ಟು ನಮ್ಮ ಸಮೀಪವಾಗಿರುವರೆಂದರೆ ಅವರು ಒಂದಿಷ್ಟು ಬಗ್ಗಿ ನೋಡಿದರೆ ನಮ್ಮನ್ನು ಕಾಣಬಹುದು. ಆಗ ಅವರು ಅತ್ಯಂತ ಸಮಾಧಾನದಿಂದ ನುಡಿದರು. ಓ ಅಬೂಬಕರ್ ಏಕೆ ಗಾಬರಿಗೊಳ್ಳುತ್ತೀರಿ. **ಇನ್ನಲ್ಲಾಹ ಮಅನ** (ಅತ್ತೌಬ–6) ಅಲ್ಲಾಹನು ನಮ್ಮ ಜೊತೆಗಿದ್ದಾನೆ. ಅವನು ನಮಗೆ ಸಹಾಯ ಮಾಡುವನು. ಆದಾಗ್ಯೂ ಶತ್ರುವು ಆ ಸ್ಥಳಕ್ಕೆ ತಲುಪಿದರೂ ಅಲ್ಲಿ ರಸೂಲುಲ್ಲಾಹ್(ಸ) ಉಪಸ್ಥಿತರಿದ್ದರು. ಆದರೂ ಅವರು ವಿಫಲಗೊಂಡು ಮರಳಿ ಹೋದರು. ಅವರಿಗೆ ಹಿಡಿಯಲು ಸಾಧ್ಯವಾಗಲಿಲ್ಲ. ಅಂತೂ ಹಝ್ರತ್ ಮೂಸ(ಅ) ಅವರು ಹೇಳಿದರು. ಅಲ್ಲಾಹನು ನನ್ನ ಜೊತೆಗಿದ್ದಾನೆಂದು ಮತ್ತು ಅವನು ನಮಗೆ ಸಹಾಯ ನೀಡುವನು ಎಂದು, ರಸೂಲುಲ್ಲಾಹ್(ಸ) ರವರೂ ಅದನ್ನೇ ಹೇಳಿದರು. ಅಲ್ಲಾಹನು ನಮ್ಮ ಜೊತೆಗಿದ್ದಾನೆ. ಅವನು ನಮಗೆ ಸಹಾಯ ಮಾಡುವವನು ಎಂದು. ಆದರೆ ಯೋಚನೆ ಮಾಡಿ ನೋಡಿದರೆ ಹಝ್ರತ್ ಮೂಸ(ಅ) ರವರ ಶತ್ರು ಅವಸಾನ ಕಂಡ ಪರಿ ಹೇಗಿತ್ತು, ಶತ್ರುಗಳು ಈಗಲೂ ಹೇಳುತ್ತಾರೆ. ಮೂಸ ಮತ್ತು ಅವರ ಸಮುದಾಯ ಸಮುದ್ರ ಹಾದು ಹೋಗುವ ಆ ಸಮಯ ಸಮುದ್ರ ಇಳಿಕೆಯ ಸಮಯವಾಗಿತ್ತು. *** ನ ಸಮಯ ಬಂದ ಕಾರಣ ಫಿರ್‌ಔನ್ ಮತ್ತು ಅವನ ಸಂಗಡಿಗರು ಮುಳುಗಿ ಹೋದರು. ಅದರಲ್ಲಿ ಪವಾಡ ಅಥವಾ ದೃಷ್ಟಾಂತ ಎನ್ನುವ ಮಾತೆಲ್ಲಿದೆ. ಆದರೆ ರಸೂಲುಲ್ಲಾಹ್(ಸ) ರವರನ್ನು ಅಲ್ಲಾಹನು ಹೇಗೆ ರಕ್ಷಿಸಿದನೆಂದರೆ ಶತ್ರು ರಸೂಲುಲ್ಲಾಹ್(ಸ) ರವರ ಹೆಜ್ಜೆ ಗುರುತು ಅನುಸರಿಸುತ್ತ ಅವರು ಅಡಗಿದ ಗುಹೆ ತನಕ ಬಂದು ತಲುಪಿದರು. ಆದರೂ ಅವರನ್ನು ನೋಡಲಾಗಲಿಲ್ಲ. ಹಾಗೆ ನೋಡಿದರೆ ನಂಬಿಗಸ್ತ ಸಂಶೋಧಕ ಅವರ ಜೊತೆಯಲ್ಲಿದ್ದನು. ಅವನು ಹೇಳಿದ್ದ. ಮುಹಮ್ಮದ್ ರಸೂಲುಲ್ಲಾಹ್(ಸ) ನಿಸ್ಸಂದೇಹವಾಗಿಯೂ ಇಲ್ಲೇ ಅಡಗಿರುವರು. ಇಲ್ಲಿ ಇಲ್ಲ ಎಂದಾದರೆ ಆಕಾಶಕ್ಕೆ ಹೋಗಿರಲು ಸಾಧ್ಯ. ಇಷ್ಟೊಂದು ಖಾತರಿ ಪಡಿಸಿದರೂ ಶತ್ರುವಿಗೆ ಗುಹೆಯೊಳಗೆ ಬಗ್ಗಿ ನೋಡುವ ಭಾಗ್ಯ ದೊರೆಯಲಿಲ್ಲ ಮತ್ತು ಅವನು ವಿಫಲಗೊಂಡು ನಿರಾಶರಾಗಿ ಮರಳಿ ಹೋದನು.

ಅನಂತರ ರಸೂಲುಲ್ಲಾಹ್(ಸ) ರವರನ್ನು ಬಂಧಿಸಲು ಮಕ್ಕ ಅವಿಶ್ವಾಸಿಗಳು ಒಂದು ನೂರು ಒಂಟೆಯ ಬಹುಮಾನದ ಘೋಷಣೆ ಮಾಡಿದ್ದರು. ಇದು ಎಷ್ಟು ದೊಡ್ಡ ಮಟ್ಟದ ಬಹುಮಾನವಾಗಿತ್ತೆಂದರೆ ಅದನ್ನು ಪಡೆಯಲು ಅರಬರು ನಾಲ್ಕು ದಿಶೆಗಳಲ್ಲಿ ಹೊರಟು ಬಿಟ್ಟರು. ಅವರು ಭಾವಿಸಿದರು ಮುಹಮ್ಮದ್ ರಸೂಲುಲ್ಲಾಹ್ ನಮಗೆ ಸಿಕ್ಕಿಬಿಟ್ಟರೆ ನಮಗೆ ಒಂದು ನೂರು ಒಂಟೆಗಳು ಸಿಗಬಹುದಾಗಿದೆ. ನಮ್ಮ ಮನೆಯ ಸ್ಥಿತಿ ಉತ್ತಮವಾಗಬಹುದು. ಒಂದು ನೂರು ಒಂಟೆ ಆ ಸಮಯಕ್ಕೆ ಬಹುದೊಡ್ಡ ಬಹುಮಾನವಾಗಿತ್ತು. ಇಂದಿನ ಸರಕಾರಗಳು ಅಪರಾಧಿಗಳನ್ನು ಬಂಧಿಸಲು ಐದ್ಯೆದು ಸಾವಿರ ಅಥವಾ ಹತ್ತು ಹತ್ತು ಸಾವಿರ ರೂಪಾಯಿಗಳ ಬಹುಮಾನ ಘೋಷಣೆ ಮಾಡುತ್ತದೆ. ನೂರು ಒಂಟೆಗಳ ದರ ಇಂದಿನ ಕಾಲಕ್ಕೂ ಹೋಲಿಸಿದರೆ ಅರವತ್ತು ಎಪ್ಪತ್ತು ಸಾವಿರ ಬಹುಮಾನವಾಗುತ್ತದೆ. ತಾತ್ಪರ್ಯವೇನೆಂದರೆ ಅದೊಂದು

ಬಹುದೊಡ್ಡ ಬಹುಮಾನವಾಗಿತ್ತು. ಅದನ್ನು ಪಡೆಯಲು ಹಲವು ಜನರು ಹೊರಟಿದ್ದರೂ ಒಬ್ಬ ವ್ಯಕ್ತಿ ರಸೂಲುಲ್ಲಾಹ್(ಸ) ಮದೀನಕ್ಕೆ ಹೊರಟ ಮಾರ್ಗದಲ್ಲಿ ಬಂದು ತಲುಪಿದನು. ಆ ವ್ಯಕ್ತಿಯು ರಸೂಲುಲ್ಲಾಹ್(ಸ) ರವರನ್ನು ನೋಡಿದರು ಮತ್ತು ಅವರನ್ನು ಹಿಡಿಯಲು ಶಕ್ತನಾಗಬಹುದೆಂದು ಭಾವಿಸಿದನು. ಅವನ ಸಮೀಪ ತಲುಪುತ್ತಲೇ ಆಕಸ್ಮತ್ತಾಗಿ ಅವನ ಕುದುರೆ ಎಡವಿಬಿತ್ತು. ಮತ್ತು ಅವನು ಮೊಳಕಾಲವರೆಗೆ ಭೂಮಿಯಲ್ಲಿ ಹುದುಗಿ ಹೋದನು. ಅವನು ಅರಬರ ಪುರಾತನ ರೀತಿ ರಿವಾಜಿನ ಪ್ರಕಾರ ಆ ಸಂದರ್ಭದಲ್ಲಿ ತಕ್ಷಣ ಬಾಣ ತೆಗೆದು ಭವಿಷ್ಯ ತಿಳಿಯಲು ಜ್ಯೋತಿಷ್ಯ ಜ್ಞಾನ ಪ್ರಯೋಗಿಸಿ ನನಗೆ ಮುಂದು ಹೋಗಬೇಕೋ ಬೇಡವೋ ಎಂದು ತಿಳಿಯಬಯಸಿದನು. ಆಗ ತಿಳಿಯಿತು. ಮುಂದುವರೆಯಬಾರದು. ಆದರೆ ಒಂದು ನೂರು ಒಂಟೆಗಳ ಬಹುಮಾನದ ವಿಷಯವಾಗಿತ್ತು ಅವನಿಗೆ ಸಹಿಸಲಾಗಲಿಲ್ಲ. ಮತ್ತೆ ಜಿಗಿದು ಹತ್ತಿರ ತಲುಪಿದನು. ಮತ್ತೆ ಕುದುರೆ ಎಡವಿ ಬಿತ್ತು. ಈಗ ಅವನು ಹೆಜ್ಜೆಯವರೆಗೆ ಹುದುಗಿ ಹೋದನು. ಅವನು ಗಾಬರಿಗೊಂಡನು. ಮತ್ತು ಇದೇನೋ ಬೇರೆ ಮಾತಾಗಿದೆ ಎಂದು ಭಾವಿಸಿದನು. ಆಗ ಅವನು ರಸೂಲುಲ್ಲಾಹ್(ಸ) ಅವರ ಸೇವೆಯಲ್ಲಿ ಅತ್ಯಂತ ಆದರದಿಂದ ಹಾಜರಾದನು ಮತ್ತು ಹೇಳಿದನು. ನಾನು ಅಭಯ ಯಾಚಿಸುತ್ತೇನೆ. ನಾನು ಈಗ ನೀವು ಅಲ್ಲಾಹನ ಸಂದೇಶವಾಹಕರೆಂಬ ಸತ್ಯ ತಿಳಿಯುವಂತಾಗಿದೆ. ನಾನು ನಿಮಗೆ ಹಿಂಬಾಲಿಸಿಕೊಂಡು ಬಂದಿದ್ದೆ. ಆದರೆ ಮರಳಿ ಹೋಗುತ್ತೇನೆ. ನನಗೆ ಮನವರಿಕೆಯಾಗಿದೆ. ನೀವು ಅಲ್ಲಾಹನ ಸತ್ಯ ಪ್ರವಾದಿಗಳಾಗಿದ್ದೀರಿ. ಸತ್ಯ ಪರವಾದಿಯಾದ ಕಾರಣ ಒಂದಲ್ಲ ಒಂದು ದಿನ ನೀವು ಅವಶ್ಯವಾಗಿ ವಿಜಯ ಸಾಧಿಸುವಿರಿ. ಆದುದರಿಂದ ನಾನು ಬಯಸುವುದೇನೆಂದರೆ ನೀವು ಒಂದು ಕಾಗದದಲ್ಲಿ ಬರೆದುಕೊಡಬೇಕು. ನಿಮಗೆ ಅಲ್ಲಾಹನು ವಿಜಯ ದೊರಕಿಸಿಕೊಟ್ಟಾಗ ನನ್ನೊಡನೆ ಸದ್‌ವ್ಯವಹಾರ ಮಾಡುವಿರೆಂದು. ರಸೂಲುಲ್ಲಾಹ್(ಸ) ಅದೇ ಸಮಯ ಹಝ್ರತ್ ಅಬೂಬಕರ್ ಅವರಿಗೆ ಆದೇಶ ನೀಡಿದರು. ನೀವು ಅವರಿಗೆ ಬರೆದುಕೊಡಿ. ಅಲ್ಲಾಹನು ಮುಸಲ್ಮಾನರಿಗೆ ವಿಜಯ ದಯಪಾಲಿಸಿದಾಗ ಆ ವ್ಯಕ್ತಿಯೊಡನೆ ಸದ್‌ವ್ಯವಹಾರ ಮಾಡುವರು. ಅಂದರೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರಿಗೆ ಮೂಸ(ಅ) ರಂತೆ ಕೇವಲ ಒಂದು ಘಟನೆ ಎದುರಾಗಲಿಲ್ಲ. ಅವರ ಜೊತೆ ಎರಡೆರಡು ಸಲ ಈ ಘಟನೆ ಎದುರಾಗಿದೆ. ಶತ್ರುವು ಅವರನ್ನು ಹಿಡಿಯಲು ಪ್ರಯತ್ನಿಸಿದರು. ಆದರೆ ಎರಡೂ ಸಮಯದಲ್ಲೂ ಅದು ವಿಫಲಗೊಂಡಿತು. ಫಿರ್‌ಔನ್ ತನ್ನ ಸೈನ್ಯ ಸಮೇತ ಹಝ್ರತ್ ಮೂಸ (ಅ) ರವನ್ನು ಹಿಂಬಾಲಿಸಿದಾಗ ಅವರನ್ನು (ಅ) ನೋಡಿದನು. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಶತ್ರುವು ಅವರ ಬಳಿ ತಲುಪಿಯೂ ನೋಡಲಾಗಲಿಲ್ಲ. ಎರಡನೆಯ ಸಲ ಶತ್ರು ಅವರನ್ನು ಬಂಧಿಸಲು ನೋಡಿದಾಗ ಆಗಲು ವಿಫಲನಾದನು. ಕೇವಲ ಅಸಫಲನಾಗಲಿಲ್ಲ. ಬದಲು ಅವನು ಅವರ ಶ್ರೇಷ್ಠತೆಯನ್ನು ಒಪ್ಪಿಕೊಂಡನು. ಹಝ್ರತ್ ಮೂಸ(ಅ) ರವರ ಶತ್ರುವಿಗೆ ಮುಳುಗುವ ಸಮಯ ಅಲ್ಲಾಹನ ಅರಿವು ಮೂಡಿತು. ಆದರ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಹೀಗೆ ಬರುತ್ತದೆ. ಫಿರ್‌ಔನ್ ಮುಳುಗುತ್ತಿದ್ದಾಗ ಅವನು ಹೇಳಿದನು. ನಾನು ಮೂಸ ಮತ್ತು ಹಾರೂನನ ಅಲ್ಲಾಹನ ಮೇಲೆ ವಿಶ್ವಾಸ ತರುವೆನು. ಅದಕ್ಕೆ ಉತ್ತರವಾಗಿ ಅಲ್ಲಾಹನು ಹೇಳಿದನು. ನೀನು ಅಂತಿಮ ಸಮಯದಲ್ಲಿ ವಿಶ್ವಾಸ ತಂದಿರುವೆ. ಈಗ ನಿನಗೆ ಮುಕ್ತಿ ದೊರೆಯುವುದು ಅಸಾಧ್ಯ. ಆದರೆ ನಿನ್ನ ಶರೀರಕ್ಕೆ ಮುಕ್ತಿ ನೀಡಲಾಗುವುದು. ಅದರಿಂದ ಇತರರು ಪಾಠ ಕಲಿಯುವರು ಆದರೆ ರಸೂಲುಲ್ಲಾಹ್(ಸ) ರವರಿಗೆ ಬಂಧಿಸಲು ಹೊರಟ ಶತ್ರು ಜೀವಂತನಾಗಿದ್ದನು ಮತ್ತು ಅವನು ತನ್ನ ಜೀವನದಲ್ಲಿ ಒಪ್ಪಿಕೊಂಡನು ಅವರು ಅಲ್ಲಾಹನ ಸತ್ಯ ಪ್ರವಾದಿಗಳಾಗಿದ್ದಾರೆಂದು, ಅಲ್ಲದೇ ಅವರಿಂದ ಈ ಒಡಂಬಡಿಕೆಯು ಬರೆದುಕೊಂಡ ನಿಮಗೆ ಅಲ್ಲಾಹನು ವಿನಯ ನೀಡಿರುವಾಗ ನನ್ನೊಡನೆ ಸದ್‌ವ್ಯವಹಾರ ಮಾಡುವಿರಿ. ಅಲ್ಲಾಹನು ಅವನಿಗೆ ವಿಜಯದ ದಿವಸದವರೆಗೆ ಅವನನ್ನು ಜೀವಂತವಾಗಿ ಇರಿಸಿದನು ಮತ್ತು ಮುಸಲ್ಮಾನರು ಅವನೊಂದಿಗೆ ಸದ್‌ವ್ಯವಹಾರ ಮಾಡಿದರು ಇದು ಎಷ್ಟೊಂದು ಶ್ರೇಷ್ಠತೆಯ ಮಾತಾಗಿದೆ. ಅದು ರಸೂಲುಲ್ಲಾಹ್(ಸ) ರವರಿಗೆ ಮೂಸ(ಅ) ರವರ ಮೇಲೆ ದೊರೆಯಿತು.

5) ಹಝ್ರತ್ ಮೂಸ(ಅ) ಮತ್ತು ರಸೂಲುಲ್ಲಾಹ್(ಸ) ರೊಡನೆ ಇರುವ ಇನ್ನೊಂದು ವ್ಯತ್ಯಾಸವೆಂದರೆ ಹಝ್ರತ್ ಮೂಸ(ಅ) ರವರ ಶತ್ರು ನಾಶ ಹೊಂದಿದನು. ಆದರೆ ಶತ್ರುವಿನ ನಾಶವಾದ ನಂತರ ಅವರಿಗೆ ಅವರ ದೇಶದ ಮೇಲೆ ವಿಜಯ ಸಾಧಿಸಲು ಆಗಲಿಲ್ಲ. ಕೆಲವು ಅಜ್ಞಾನಿ ಮುಲ್ಲಾಗಳು (ಮತಪಂಡಿತರು) ಹೇಳುತ್ತಾರೆ. ಹಝ್ರತ್ ಮೂಸ(ಅ) ರವರಿಗೆ ನಂತರದಲ್ಲಿ ಆ ದೇಶದ ಮೇಲೆ ವಿಜಯ ದೊರಕಿತ್ತು ಎಂದು. ಅವರು ಒಂದು ವಚನದ ತಾತ್ಪರ್ಯ ಮಾಡಿಕೊಂಡು ಈ ಫಲಿತಾಂಶ ಹೊರಡಿಸುತ್ತಾರೆ. ಆದರೆ ಅದಕ್ಕೆ ಯಾವ ಆಧಾರವು (ಪುರಾವೆ) ದೊರೆಯುತ್ತಿಲ್ಲ. ಪವಿತ್ರ ಖುರ್‌ಆನಿನಲ್ಲಿ ಪುರಾವೆ ದೊರೆಯುವುದಿಲ್ಲ. ಬೈಬಲ್‌ನಿಂದಲೂ ಪುರಾವೆ ದೊರೆಯುವುದಿಲ್ಲ. ಹಾಗೆ ಸುಮ್ಮನೆ ಅವರಿಗೆ ಈಜಿಪ್ಟ್‌ನ ಮೇಲೆ ವಿಜಯ ದೊರಕಿತ್ತು ಎಂದು ಹೇಳುವುದರಲ್ಲಿ ಯಾವ ಅರ್ಥವು ಇಲ್ಲ. ನಿಜಸ್ಥಿತಿ ಎಂದರೆ ಅದು ಪವಿತ್ರ ಖುರ್‌ಆನಿನಿಂದ ಸಾಬೀತಾಗಿದೆ. ನಂತರ ಅವರು ಅರಣ್ಯ ಪ್ರದೇಶದಲ್ಲಿ ಅಲೆದಾಡುತ್ತಿದ್ದರು. ತನ್ನ ಗುರಿ ಸಾಧನೆಗೆ ಅವರು ಒಂದು ದೀರ್ಘ ಕಾಲದವರೆಗೆ ತಲುಪಲೇ ಇಲ್ಲ. ಆದರೆ ರಸೂಲುಲ್ಲಾಹ್(ಸ) ರವರ ಶತ್ರುಗಳು ಸೋಲನ್ನು ಒಪ್ಪಿಕೊಂಡಾಗ ರಸೂಲುಲ್ಲಾಹ್(ಸ) ಅವರ ದೇಶದ ಮೇಲೆ ವಿಜಯ ಸಾಧಿಸಿದರು. ಇದು ಮೂಸ(ಅ) ರವರ ಮೇಲೆ ರಸೂಲುಲ್ಲಾಹ್(ಸ) ರವರಿಗೆ ದೊರೆತ ಶ್ರೇಷ್ಠತೆಯಾಗಿದೆ.

6) ಹಝ್ರತ್ ಮೂಸ(ಅ) ರಿಗೆ ಅವರ ಸಮುದಾಯ ಹೇಳಿತು. ಇಝ್‌ಹಬ್ ಅಮತ ವ ರಬ್ಬುಕ ಫಕಾತಿಲ ಇನ್ನಾ ಹಾಹುನಾ ಖಾಯಿದೂನ್-(ಅಲ್-ಮಾಇದ-4) ಆಗ ಅಲ್ಲಾಹನು ಹೇಳಿದನು. ಓ ಮೂಸ ನಿನ್ನ ಸಮುದಾಯವು ಅತ್ಯಂತ ಅನಾದರ ತೋರಿಸಿದೆ. ಈ ಅನಾದರದ ಪರಿಣಾಮವಾಗಿ ನಾವು ಅವರನ್ನು ವಿಜಯದಿಂದ ವಂಚಿತನನ್ನಾಗಿ ಮಾಡುತ್ತಿದ್ದೇವೆ. ಅದಾಗ್ಯೂ ಅದು ನಮ್ಮ ವಾಗ್ದನವಾಗಿತ್ತು. ಹೋಗಿರಿ ಈಗ ನಲವತ್ತು ವರ್ಷದವರೆಗೆ ಅರಣ್ಯಗಳಲ್ಲಿ ಅಲೆದಾಡಿರಿ ಮತ್ತು ತಮ್ಮ ಪಾಪಗಳ ಕ್ಷಮೆಯಾಚಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಕ್ಷಮಿಸುವನು. ಆಗ ಹಝ್ರತ್ ಮೂಸ(ಅ) ರವರ ಸಮುದಾಯಕ್ಕೆ ನಲವತ್ತು ವರ್ಷಗಳ ಕಾಲ ಅರಣ್ಯಗಳಲ್ಲಿ ಅಲೆದಾಡಿದ ನಂತರ ಕನ್‌ಅನ್ ಸಿಕ್ಕಿತು. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಸಮುದಾಯಕ್ಕೆ ಅವರು(ಸ) ವಫಾತ್‌ಗೊಂಡ ಹನ್ನೆರಡು ವರ್ಷಗಳ ಅವಧಿಯಲ್ಲಿಯೇ ಇಡೀ ಸುಸಂಸ್ಕೃತ ಲೋಕದ ಮೇಲೆ ವಿಜಯ ದೊರೆಯಿತು. ಇದು ಸಹ ಮುಹಮ್ಮದ್ ರಸೂಲುಲ್ಲಾಹ್(ಸ) ರವರಿಗೆ ಹಝುರತ್ ಮೂಸ(ಅ) ಅವರ ಮೇಲೆ ದೊರೆತ ಒಂದು ಬಹು ದೊಡ್ಡ ಶ್ರೇಷ್ಠತೆಯಾಗಿದೆ.

7) ಹಝ್ರತ್ ಮೂಸ(ಅ) ರವರ ಮೇಲೆ ಹಝ್ರತ್ ರಸೂಲುಲ್ಲಾಹ್(ಸ) ರವರ ಶ್ರೇಣಿ ಅಂತ್ಯಗೊಂಡಿತು. ಆದರೆ ರಸೂಲುಲ್ಲಾಹ್(ಸ) ರವರ ಕಾಲ ಎಂದೂ ಅಂತ್ಯಗೊಳ್ಳುವುದಿಲ್ಲ. ನಿಸ್ಸಂಶಯವಾಗಿ ಮೂಸರವರ ಶ್ರೇಣಿ ಹಝ್ರತ್ ಈಸಾ(ಅ) ರವರ ಕಾಲದವರೆಗೆ ಜಾರಿಯಲ್ಲಿತ್ತು. ಅಲ್ಲದೇ ಅನಂತರವೂ ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಕಾಲದವರೆಗೂ ಬಂದು ತಲುಪಿತು. ಆದರೆ ನಾಮಮಾತ್ರಕ್ಕೆ, ಏಕೆಂದರೆ ಹಝ್ರತ್ ಈಸಾ(ಅ) ರವರ ವಫಾತಿನ ಕೆಲ ಅವಧಿಯಲ್ಲಿಯೇ ಜನರು ಹೇಳತೊಡಗಿದರು. ಹಝ್ರತ್ ಈಸಾ(ಅ) ಹಝ್ರತ್ ಮೂಸಾ(ಅ) ರವರಿಗಿಂತ ಶ್ರೇಷ್ಠವಾಗಿದ್ದಾರೆ ಎಂದು. ಅಲ್ಲದೇ ಅವರು ಅವರನ್ನು ದೇವಪುತ್ರ ಎಂದು ಹೇಳಲು ಪ್ರಾರಂಭಿಸಿದರು. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಕಾಲ ಎಂದೂ ಅಂತ್ಯಗೊಳ್ಳುವುದಿಲ್ಲ. ಅಂತ್ಯ ತೀರ್ಮಾನದ ದಿನದವರೆಗೂ ಜಾರಿಯಲ್ಲಿರುವುದು. ಅಲ್ಲದೇ ಅವರು ಅವರನ್ನು ದೇವಪುತ್ರ ಎಂದು ಹೇಳಲು ಪ್ರಾರಂಭಿಸಿದರು. ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಕಾಲ ಎಂದೂ ಅಂತ್ಯಗೊಳ್ಳುವುದಿಲ್ಲ ಅಂತ್ಯ ತೀರ್ಮಾನದ ದಿನದವರೆಗೂ ಜಾರಿಯಲ್ಲಿರುವುದು.

8) ಹಜ್‌ರತ್ ಮೂಸ(ಅ) ರವರ ಅಂತಿಮ ಖಲೀಫರ ಅಂದರೆ ಮಸೀಹ್ ನಾಸರಿ ಅವರ ಜಮಾಅತ್ ಅವರಿಗೆ ಕೈಕೊಟ್ಟರು. ಮತ್ತು ಹಝ್ರತ್ ಮೂಸ(ಅ) ರವರ ಶ್ರೇಷ್ಠತೆಯನ್ನು ನಿರಾಕರಿಸಿದರು. ಅದರಲ್ಲಿ ಹಝ್ರತ್ ಮಸೀಹ್(ಅ) ರವರ ನಾಲಿಗೆಯಿಂದ ಹೊರಟ ದ್ವಿಭಾಷೆಯ ಮೋಸವು ಕಾರಣವಾಗಿತ್ತು. ಅದರಿಂದ ಮೂಸ(ಅ) ರವರ ಸಮುದಾಯ ಗೊಂದಲಕ್ಕೀಡಾಯಿತು. ಮತ್ತು ಅವರು ಹಝ್ರತ್ ಮೂಸ(ಅ) ರವರನ್ನು ಬಿಟ್ಟುಬಿಟ್ಟರು. ಆದರೆ ನಮ್ಮ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್(ಅ) ಅವರು ಮುಹಮ್ಮದಿ ಶ್ರೇಣಿಯ ಅಂತಿಮ ಖಲೀಫರಾಗಿರುವರು. ಅವರು

ಹೇಳಿದರಾದರೆ ಹೀಗೆ ಹೇಳಿದರು. ವೋ ಹೈ ಮೈ ಭೇರ್ಝ್ ಕ್ಯಾ ಹೂ ಬಸ್ ಫೈಸ್ಲಾ ವಹಿ ಹೈ (ಅವರೇ ರಕ್ಷಿಸಲ್ಪಡಲು ಅರ್ಹರು: ನಾನು ನಿಸ್ವಾರ್ಥನು. ಇದೇ ತೀರ್ಮಾನವಾಗಿದೆ). ಅಂದರೆ ನನಗೆ ದೊರೆತ ಶ್ರೇಷ್ಠತೆಗಳಿಲ್ಲದ್ದಕ್ಕೆ ಮುಹಮ್ಮದ್ ರಸೂಲುಲ್ಲಾಹ್ ರವರ ಅನುಸರಣೆಯ ಫಲವಾಗಿದೆ. ಅವರ ಎದುರಿನಲ್ಲಿ ನಾನಿದ್ದೇನೆ ಎಂದು ಭಾವಿಸಬೇಡಿರಿ. ಹಝ್ರತ್ ಈಸಾ(ಅ) ರವರ ಕುರಿತು ಹೇಳಲಾಗುತ್ತದೆ. ಅವರು ತನ್ನನ್ನು ದೇವಪುತ್ರ ಎಂದು ಹೇಳಿದರು ಎಂದು ಆದರೆ ನಮ್ಮ ಸ್ಥಾಪಕರಾದ ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಅಂತಿಮ ಖಲೀಫರು ಅತ್ಯಂತ ನಮ್ರತೆಯೊಂದಿಗೆ ಹೇಳಿದರು. ವೋ ಹೈ ಮೈ ಬೇರ್ಝ್ ಕ್ಯಾ ಹೂಂ ಬಸ್ ಫೈಸ್ಲಾಯಹೀ ಹೈ: (ಅವರೇ ರಕ್ಷಿಸಲ್ಪಡಲು ಅರ್ಹರು; ನಾನು ನಿಸ್ವಾರ್ಥನು. ಇದೇ ತೀರ್ಮಾನವಾಗಿದೆ.

ಅಂದರೆ ನನಗೆ, ನಮ್ಮ ಮಾಲಿಕ ಮುಹಮ್ಮದ್ ರಸೂಲುಲ್ಲಾಹ್(ಸ) ರವರೊಂದಿಗೆ ಯಾವ ಹೋಲಿಕೆಯೂ ಇಲ್ಲ. ಹಝ್ರತ್ ಮಸೀಹ್ ಮೌಊದ್(ಅ) ರವರ ಒಂದು ಕವನ ಪಂಕ್ತಿಯಿದೆ. ಜನರು ಅದರ ಮೇಲೆ ಆಕ್ಷೇಪ ವ್ಯಕ್ತಪಡಿಸುತ್ತಾರೆ. ಆದರೆ ನಮಗೆ ಅದರಿಂದ ಆನಂದ ದೊರೆಯುತ್ತದೆ. ಅವರು ಹೇಳುತ್ತಾರೆ:

ಇಬ್ನು ಮರಿಯಮ್ ಕೆ ಝಿಕ್ರ ಕೋ ಛೋಡೊ.
ಉಸ್ ಸೇ ಬೆಹ್ತರ್ ಗುಲಾಮ್ ಅಹ್ಮದ್ ಹೈ॥

ಇದರ ಮೇಲೆ ಜನರು ಆಕ್ಷೇಪ ಮಾಡುವುದೇನೆಂದರೆ ಹಝ್ರತ್ ಮಸೀಹ್ ಮೌಊದ್(ಅ) ರವರು ತನ್ನನ್ನು ಇಬ್ನು ಮರಿಯಮ್ (ಮರಿಯನ್ ಪುತ್ರನಿಗಿಂತ ಶ್ರೇಷ್ಠ ಎಂದು ಸಾರಿದ್ದಾರೆ. ಇವೆರಡರಲ್ಲಿ ತುಂಬ ವ್ಯತ್ಯಾಸವಿದೆ. ಇಲ್ಲಿ ಅಹ್ಮದ್ ಎಂದರೆ ಮುಹಮ್ಮದ್ ರಸೂಲುಲ್ಲಾಹ್ ಆಗಿರುತ್ತಾರೆ. ಅವರು ಹೇಳುವುದು. ಈಸಾ(ಅ) ರವರಿಗಿಂತ ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಗುಲಾಮನೂ ಶ್ರೇಷ್ಠನಾಗಿದ್ದಾನೆ. ಅಂದರೆ ಅವರ ಗುಲಾಮ ಹಝ್ರತ್ ಈಸಾ(ಅ) ರವರಿಗಿಂತ ಶ್ರೇಷ್ಠ ಆದ ಮೇಲೆ ಅವರಂತೂ ಮಹೋನ್ನತ ಶ್ರೇಷ್ಠರಾದರು. ಅಂತೂ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ರವರಿಗೆ ಮೂಸ(ಅ) ರವರ ಶ್ರೇಣಿಯ ಅಂತಿಮ ಖಲೀಫರಾದ ಹಝ್ರತ್ ಈಸಾ(ಅ) ರವರ ಜಮಾಅತ್ ಹಝ್ರತ್ ಈಸಾ(ಅ) ರನ್ನು ತನ್ನ ಸರ್ವಶ್ರೇಣಿಯ ಸ್ಥಾಪಕರಿಗಿಂತ ಶ್ರೇಷ್ಠರನ್ನಾಗಿಸಿದರು. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಅಂತಿಮ ಖಲೀಫರು ತನ್ನ ಮಾಲೀಕನ ವೈಭವ ಮತ್ತು ಶ್ರೇಷ್ಠತೆಯನ್ನು ಎತ್ತಿ ಹಿಡಿದರು. ಮತ್ತು ಅವರು ಲೋಕಕ್ಕೆ ಸಾರಿ ಸಾರಿ ಘೋಷಣೆ ಮಾಡಿದರು. ನಾನು ಏನೆಲ್ಲ ಪಡೆದೆನು. ಅದು ರಸೂಲುಲ್ಲಾಹ್(ಸ) ರವರ ಅನುಗ್ರಹಗಳ ಫಲವಾಗಿದೆ.

9) ಹಝ್ರತ್ ಮೂಸ(ಅ) ರವರ ನಂತರ ಬಂದ ಎಲ್ಲಾ ಪ್ರವಾದಿಗಳು ಮುಸ್ತಖಿಲ್ ಪ್ರವಾದಿಗಳಾಗಿದ್ದರು. ಅದಾಗ್ಯೂ ಅವರು ಹೊಸ ಶರೀಅತ್ (ಧರ್ಮಗ್ರಂಥ) ತಂದಿರಲಿಲ್ಲ. ಆದರೆ ಅವರು ಪ್ರವಾದಿತ್ವದ ಸ್ಥಾನವನ್ನು ನೇರವಾಗಿ ಪಡೆದಿದ್ದರು. ಅಂದರೆ ಹಝ್ರತ್ ಮೂಸ(ಅ) ರವರ ಅನುಗ್ರಹ ಅನುಸರಣೆ ಕಾರಣವಾಗಿರಲಿಲ್ಲ. ಅವರ ಶಿಕ್ಷಣವು ಪ್ರವಾದಿತ್ವ ಮಟ್ಟಕ್ಕೆ ತಲುಪಿಸುವ ಸಾಮರ್ಥ್ಯ ಹೊಂದಿರಲಿಲ್ಲ. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರು ಹಝ್ರತ್ ಮೂಸ(ಅ) ರವರ ಮೇಲೆ ಈ ಶ್ರೇಷ್ಠತೆ ಹೊಂದಿದ್ದಾರೆ. ನಬಿ ಆದವರಾಗಲಿ, ಆಗಲಿಕ್ಕಿರುವವರಾಗಲಿ ಅವರಿಗೆ ಏನೆಲ್ಲ ದೊರೆಯಬಹುದು ಅದು ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಅನುಗ್ರಹದಿಂದ ಮಾತ್ರ ದೊರೆಯುವುದಾಗಿದೆ. ಹಝ್ರತ್ ಈಸಾ(ಅ) ಹಝ್ರತ್ ಮೂಸ(ಅ) ರವರ ಹಿಂಬಾಲಕರಾದದ್ದು ಹೌದಾದರೂ ಅವರು ನೇರವಾಗಿ ಪ್ರವಾದಿತ್ವ ಸ್ಥಾನ ಪಡೆದಿದ್ದರು. ಮೂಸ(ಅ) ರವರ ಶಿಕ್ಷಣದಲ್ಲಿ ಒಬ್ಬರನ್ನು ಪ್ರವಾದಿತ್ವ ಸ್ಥಾನಕ್ಕೆ ತಲುಪುವಂತೆ ಮಾಡುವ ಗುಣವಿರಲಿಲ್ಲ. ಆದರೆ ಪವಿತ್ರ ಖುರ್‌ಆನ್ ಆ ಗುಣ ಹೊಂದಿದೆ. ಆದರೆ ಅವನು ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಗುಲಾಮ (ಉಮ್ಮತಿ) ಮತ್ತು ಪವಿತ್ರ ಖುರ್‌ಆನಿನ ಸೇವಕನಾಗಿರುತ್ತಾನೆ.

10) ಹಝ್ರತ್ ಮೂಸ(ಅ) ರವರಿಗೆ ಈಸಾರ (ಲಾಠಿ) ದೊರೆತಿತ್ತು. ಅದು ಬೇಕಾದಾಗ ಹಾವಾಗಿ ಮಾರ್ಪಡುತ್ತಿತ್ತು. ಅದೊಂದು ಕಡಿಯುವ ವಸ್ತುವಾಗಿತ್ತು. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ಖುರ್‌ಆನ್ ಎಂಬ ಆಯುಧ ದೊರೆಯಿತು. ಅದು ಯಾವಾಗಲೂ ಅನುಗ್ರಹ ರೂಪವೇ ಧಾರಣೆ ಮಾಡಿರುತ್ತದೆ. ಅಲ್ಲಾಹನು ಈ ಆಯುಧದ ಪೈಕಿ ವಿವರಣೆ ನೀಡುತ್ತ ಹೇಳುತ್ತಾನೆ. **ವ ಜಾಹಿದ್‌ಹುಮ್ ಬಿಹೀ ಜಿಹಾದನ್ ಕಬೀರ** (ಅಲ್-ಫುರ್‌ಖಾನ್-5) ನೀನು ಪವಿತ್ರ ಖುರ್‌ಆನ್ ಎಂಬ ಆಯುಧ ತೆಗೆದುಕೋ. ಆ ಮೂಲಕ ಜಿಹಾದ್ ಮಾಡುತ್ತಿರು. ಭೌತಿಕ ಆಯುಧಗಳಿಂದ ಆದ ಯುದ್ಧಗಳು ಸಾಮಾನ್ಯವಾದದ್ದು. ಅವು ಬಹುಬೇಗ ಕೊನೆಗೊಳ್ಳುತ್ತವೆ. ಆದರೆ ಪವಿತ್ರ ಖುರ್‌ಆನ್ ಎಂಬ ಆಯುಧವು ಶತ್ರುಗಳ ವಿರುದ್ಧ ಎಂದೆಂದೂ ಬಳಸತಕ್ಕದ್ದಾಗಿದೆ. ಮತ್ತು ಅದರ ಪ್ರಭಾವವು ಅನುಗ್ರಹ ಹೊರತು ಬೇರೇನಿಲ್ಲ. ಆ ಕಾರಣದಿಂದ ರಸೂಲುಲ್ಲಾಹ್(ಸ) ರನ್ನು ಪದೇ ಪದೇ "ರಹಮತುಲ್ ಅಲ್ ಆಲಮೀನ್ ಎಂದು ಕರೆಯಲಾಗಿದೆ. ಅವರ ಶಿಕ್ಷಣವು ಸೇಡು, ಶಿಕ್ಷೆಗಿಂತ ಮಿಗಿಲಾಗಿ ಪ್ರೀತಿ ನಮ್ರತೆಗೆ ಆದ್ಯತೆ ಕೊಟ್ಟಿದೆ. ಉದಾಹರಣೆಗೆ ಹಝ್ರತ್ ಮೂಸ(ಅ) ರವರ ಶಿಕ್ಷಣವು ಯಾರಾದರೂ ನಿಮ್ಮ ಕೆನ್ನೆಗೆ ಬಾರಿಸಿದರೆ ನೀವು ಅವರನ್ನು ಬಾರಿಸಿರಿ. ಯಾರಾದರೂ ನಿಮ್ಮ ಕಣ್ಣು ತೆಗೆದರೆ ನೀವು ಅವರ ಕಣ್ಣನ್ನು ತೆಗೆದುಕೊಳ್ಳಿರಿ. ಯಾರಾದರೂ ನಿಮ್ಮ ದಂತವನ್ನು ಮುರಿದರೆ ನೀವು ಸಹ ಅವರ ದಂತಗಳನ್ನು ಮುರಿಯಿರಿ. ಆದರೆ ಇಸ್ಲಾಮಿನ ಶಿಕ್ಷಣವು... ನೀವು ಇಡುವ ಯಾವುದೇ ಹೆಜ್ಜೆಯನ್ನು ವಿಚಾರ ಮಾಡಿ ಪರಿಸ್ಥಿತಿಗೆ ಅನುಗುಣವಾಗಿ ಮುಂದಿರಿಸಿರಿ. ಕ್ಷಮಿಸುವುದರಲ್ಲಿ ಒಳಿತು ಕಂಡರೆ ಕ್ಷಮಿಸಿ ಬಿಡಿರಿ. ಶಿಕ್ಷೆಗೆ ಗುರಿಪಡಿಸಲು ಒತ್ತಾಯ ಬೇಡ. ಏಕೆಂದರೆ ನಿಮ್ಮ ಮುಖ್ಯ ಗುರಿ ಸುಧಾರಣೆ ಹೊರತು ಸೇಡಲ್ಲ.

11) ಹಝ್ರತ್ ಮೂಸ(ಅ) ರವರಿಗೆ **"ಯದೆ ಬೇಝಾ"** (ಹೊಳಪಿನ ಕೈ) ದ ದೃಷ್ಟಾಂತ ಕೊಡಲಾಗಿತ್ತು. ಅಂದರೆ ಅವರ ಕೈ ಆಗಾಗ ಹೊಳಪಿನ ಶಕ್ತಿ ಹೊಂದಿತ್ತು. ಆದರೆ ಅಲ್ಲಾಹನು ಮುಹಮ್ಮದ್ ರಸೂಲುಲ್ಲಾಹ್(ಸ) ರವರನ್ನು **"ಸಿರಾಜುಮ್ ಮುನೀರಾ"** (ಅಹಝಾಬ್-6) (ಪ್ರಕಾಶಮಾನವಾದ ದೀಪ) ಅಂದನು. ಸೂರ್ಯನು ಸಂಪೂರ್ಣವಾಗಿ ಹೊಳಪು ಹೊಂದಿರುತ್ತದೆಯೇ ಹೊರತು ಯಾವುದೇ ಒಂದು ಭಾಗವಲ್ಲ. ಅಂದರೆ ಹಝ್ರತ್ ಮೂಸ(ಅ) ರವರ ಕೇವಲ ಒಂದು ಕೈ ಮಾತ್ರ ಹೊಳಪು ಹೊಂದಿತ್ತು. ಆದರೆ ರಸೂಲುಲ್ಲಾಹ್(ಸ) ರವರ ಇಡೀ ಶರೀರವೇ ಪ್ರಕಾಶ ಮತ್ತು ಹೊಳಪು ಹೊಂದಿತ್ತು. ಸೂರ್ಯವು ಸದಾ ಕಾಲಕ್ಕೂ ಪ್ರಕಾಶ ನೀಡುತ್ತಿದೆಯೇ ಹೊರತು ಆಗೊಮ್ಮೆ ಈಗೊಮ್ಮೆ ಅಲ್ಲ. ಆದರೆ ಹಝ್ರತ್ ಮೂಸ(ಅ) ರವರ ಕೈ ಮಾತ್ರ ಆಗೊಮ್ಮೆ ಈಗೊಮ್ಮೆ ಹೊಳೆಯುತ್ತಿತ್ತು. ಅಂದರೆ ಹಝ್ರತ್ ರಸೂಲುಲ್ಲಾಹ್(ಸ) ರವರು ಹೊರತು ಎಂದೂ ಕೊನೆಗೊಳ್ಳುವಂತಹದಲ್ಲ.

12) ಹಝ್ರತ್ ಮೂಸ(ಅ) ಕೇವಲ ಬನೀ ಇಸ್ರಾಯೀಲರಿಗೆ ನಬಿಯಾಗಿ ಕಳುಹಿಸಲ್ಪಟ್ಟಿದ್ದರು. **"ವಮಾ ಅರ್‌ಸಲಾನಾಕ ಇಲ್ಲಾ ಕಾಫ್ಫತನ್ ಲಿನ್ನಾಸಿ"**- (ಸಬಾ-3ರು)

ನಾವು ನಿನ್ನನ್ನು ಸಕಲ ಮನುಷ್ಯರಿಗೆ ಶುಭವಾರ್ತೆ ನೀಡುವವನಾಗಿಯೂ ಮುನ್ನೆಚ್ಚರಿಕೆಗಾರನಾಗಿಯೂ ಕಳುಹಿಸಿದ್ದೇನೆ. ಇದೂ ಸಹ ರಸೂಲುಲ್ಲಾಹ್(ಸ) ರವರ ಶ್ರೇಷ್ಠತೆಗಿರುವ ಒಂದು ಉಜ್ವಲ ಪುರಾವೆಯಾಗಿದೆ.

**(ತಫ್ಸೀರ್ ಕಬೀರ್ ಸಂಪುಟ-10,ಪುಟ-251)**

**************

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800-103-2131**

**Love for All, Hatred for None**
**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

# ಹಝ್ರತ್ ರಸೂಲುಲ್ಲಾಹ್(ಸ) ರವರ ಜೀವನ ಚರಿತ್ರೆ

**ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ) ರವರ ಲೇಖನಿಯಿಂದ ಪ್ರಾರಂಭಿಕ ಜೀವನ.**

## ಆರಂಭದ ಜಿವನ

**ಪವಿತ್ರ ಜನನ:**

ಆಮೀನರ ಪ್ರಕಾಶ ಪ್ರಕಟವಾಗುವ ಸಮಯ ಹತ್ತಿರ ಬರುತ್ತಿತ್ತು. ಮತ್ತು ಹೆರಿಗೆಯಾಗುವ ಸಮಯ ಸಮೀಪವಿದ್ದವು. ಅವರು ಶಅಬ್ ಬನು ಹಾಶಮ್‌ನಲ್ಲಿ ವಾಸಿಸುತ್ತಿದ್ದರು. ಅವರು ತನ್ನ ದಿವಂಗತ ಪತಿಯ ನೆನಪುಗಳ ಸಾಕಾರಪಡಿಸುವ ಆ ಮಗುವನ್ನು ಲೋಕದ ಬೆಳಕಾಗಿ ಬರುವ ಹಾಗೂ ತನ್ನ ದುಃಖಿತ ಮನಸ್ಸನ್ನು ಸಾಂತ್ವನಗೊಳಿಸುವ ಆ ಬೆಳಕಿನ ನಿರೀಕ್ಷೆಯಲ್ಲಿದ್ದರು. ಅದಾಗ್ಯೂ ಅಸ್‌ಹಾಬುಲ್ ಫೀಲ್ ಘಟನೆ ಘಟಿಸಿದ 25 ದಿನಗಳ ನಂತರ 12 ರಬಿಉಲ್ ಅವ್ವಲ್, 20 ಆಗಸ್ಟ್ 570 ಕ್ರಿ. ಶ. ಅಥವಾ ಒಂದು ಆಧುನಿಕ ಸಂಶೋಧನೆಯ ಪ್ರಕಾರ ಒಂದು ರೀತಿಯಲ್ಲಿ ಸರಿ ಎನ್ನಬಹುದಾದ ನೆಲೆಯಲ್ಲಿ 9 ರಬಿಯಲ್ ಅವ್ವಲ್ 20 ಏಪ್ರಿಲ್ 571 ಕ್ರಿ. ಶ. ಸೋಮವಾರ ದಿನ ಮುಂಜಾವಿನ ಸಮಯ ಹಝ್ರತ್ ರಸೂಲುಲ್ಲಾಹ್(ಸ) ರವರ ಜನ್ಮವು ಯಾವ ರೀತಿ ಅಲ್ಲಾಹನು ಕಅಬದ ಮೇಲಿನ ಆಕ್ರಮಣವನ್ನು ವಿಫಲಗೊಳಿಸಿದ್ದನೋ ಅದೇ ರೀತಿ ದೈವಿಕ ಧರ್ಮದ ವಿರುದ್ಧ ಮಿಥ್ಯ ಧರ್ಮದ ಅಳಿವಿನ ಸಮಯ ಸನ್ನಿಹಿತವಾಗಿದೆ ಎಂಬುದಕ್ಕೆ ಸಂಕೇತವಾಗಿತ್ತು. ಪವಿತ್ರ ಖುರ್‌ಆನಿನಲ್ಲಿ "ಅಸ್‌ಹಾಬುಲ್ ಫೀಲ್" ಆಕ್ರಮಣದ ವಿವರಣೆಯು ಅದೇ ಉದ್ದೇಶ ದೃಷ್ಟಿಯಿಂದ ಬಂದಿರುತ್ತದೆ. ಅಂತೂ ಮಗು ಹುಟ್ಟುತ್ತದೆ. ಆಮಿನಾ ಅವರು ಅಬ್ದುಲ್ ಮುತಲ್ಲಿಬ್ ಅವರಿಗೆ ಸಂದೇಶ ತಲುಪಿದರು. ಅವರು ಕೇಳುತ್ತಲೇ ಸಂತೋಷಭರಿತರಾಗಿ ಆಮಿನರ ಬಳಿ ಬಂದರು. ಆಮಿನ ಅವರು ಆ ಮಗುವನ್ನು ಅವರ ಕೈಯಲ್ಲಿ ಒಪ್ಪಿಸಿದರು. ಮತ್ತು ಹೇಳಿದರು. "ನಾನು ಒಂದು ಸ್ವಪ್ನದಲ್ಲಿ ಅವನ ಹೆಸರು "ಮುಹಮ್ಮದ್" ಎಂದು ಕಂಡಿದ್ದೆ. ಅಬ್ದುಲ್ ಮುತಲ್ಲಿಬ್ ಆ ಮಗುವನ್ನು ತನ್ನ ಕೈಗಳಲ್ಲಿ ಎತ್ತಿಕೊಂಡು ಬೈತುಲ್ಲಾಹ್‌ಗೆ ಹೋದರು. ಅಲ್ಲಿ ಹೋಗಿ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದರು ಮತ್ತು ಮಗುವಿನ ಹೆಸರು "ಮುಹಮ್ಮದ್" ಎಂದು ಹೆಸರಿಸಿದರು. ಅದರ ಅರ್ಥ "ಪ್ರಶಂಸಿಲ್ಪಟ್ಟವನು" ಮತ್ತು ಆ ಮಗುವನ್ನು ಸಂತೋಷದಿಂದ ಮರಳಿ ತಾಯಿಗೆ ಒಪ್ಪಿಸಿದರು.

ಇತಿಹಾಸಕಾರರು ಹಝ್ರತ್ ರಸೂಲುಲ್ಲಾಹ್(ಸ) ರವರ ಜನ್ಮಸಂಬಂಧವಾಗಿ ಚಿತ್ರವಿಚಿತ್ರ ಘಟನೆಗಳನ್ನು ಬರೆದಿದ್ದಾರೆ. ಉದಾಹರಣೆಗೆ ಆ ಸಮಯದ ಕಿಸ್ರಾ ಇರಾನ್ ಅರಸರ ಅರಮನೆಯಲ್ಲಿ ಭಯಂಕರವಾದ ಭೂಕಂಪ ಬಂದಿತ್ತು. ಅದರ ಹದಿನಾಲ್ಕು ಗೋಪುರಗಳು ಬಿದ್ದು ಹೋದವು. ಪವಿತ್ರ ಅಗ್ನಿಕುಂಟ ಅದು ಶತಮಾನಗಳಿಂದ ಪ್ರಜ್ವಲಿಸುತ್ತ ಬಂದಿತ್ತು. ಏಕಾಏಕೀ ಆರಿಹೋಯಿತು. ಕೆಲವು ನದಿಗಳು ಮತ್ತು ಸರೋವರಗಳು ಬತ್ತಿ ಹೋದವು. ಮತ್ತು ತನ್ನದೇ ಮನೆಯಲ್ಲೂ ಬಣ್ಣ ಬಣ್ಣದ ಪವಾಡಗಳು ಪ್ರಕಟವಾದವು. ಮುಂತಾದವು. ಆದರೆ ಇವೆಲ್ಲ ವರದಿಗಳು ದುರ್ಬಲವಾಗಿವೆ. ಹೀಗೂ ಒಂದು ವರದಿ ಬರುತ್ತದೆ. ಅದು ಬಹುಶ: ಸತ್ಯವಾಗಿದೆ. ಅದೇನೆಂದರೆ ಅವರ ಜನನದ ಸಮಯದಲ್ಲಿ ಆಕಾಶದ ಮೇಲೆ ಅಸಾಮಾನ್ಯ ರೀತಿಯಲ್ಲಿ ಧಾರಾಳವಾಗಿ ನಕ್ಷತ್ರಗಳು ಮುರಿದು ಬೀಳುತ್ತಿದ್ದವು. ಅದೇ ರೀತಿ ಒಂದು ವರದಿ ಹೀಗೂ ಇದೆ. ಹಝ್ರತ್ ರಸೂಲುಲ್ಲಾಹ್(ಸ) ದೈವಿಕ ರೀತಿಯಲ್ಲಿ ಮುಂಜೆ ಆಗಿ ಹುಟ್ಟಿದ್ದರು. ಇದು ಸರಿಯಾದುದಾದರೆ ಅಚ್ಚರಿಯ ಮಾತೇನಲ್ಲ. ಏಕೆಂದರೆ ಕೆಲವು ಸಮಯ ಮಕ್ಕಳಲ್ಲಿ ಇಂತಹ ದೈವಿಕ ಕ್ರಿಯೆಗಳು ಕಂಡು ಬಂದಿದ್ದವು. ಅವರಲ್ಲಿ ಇನ್ನೊಂದು ಮಾತು ದೈವಿಕ ರೀತಿಯದ್ದಾಗಿತ್ತು. ಅದೇನೆಂದರೆ ಅವರ ಬೆನ್ನಿನ ಎಡಬದಿಯಲ್ಲಿ ಒಂದು ಮಾಂಸದ ಉಬ್ಬಿದ ತುಂಡಿತ್ತು. ಅದು ಸಾಮಾನ್ಯ ರೂಪದಲ್ಲಿ ಮುಸ್ಲಿಮರಲ್ಲಿ ಖತಮೆ ನುಬುವ್ವತ್ ಅಂದರೆ ನುಬುವ್ವತ್ತಿನ ಮುದ್ರೆ ಎಂದು ಪ್ರಸಿದ್ಧಿಗೊಂಡಿದೆ.

**ಬಾಲ್ಯಾವಸ್ಥೇಯ ದಿನಗಳು**

ಮಕ್ಕದ ಶ್ರೀಮಂತರಲ್ಲಿ ಈ ಸಂಪ್ರದಾಯವಿತ್ತು. ತಾಯಿಯರು ತನ್ನ ಮಕ್ಕಳಿಗೆ ಸ್ವಯಂ ಹಾಲುಣಿಸುತ್ತಿರಲಿಲ್ಲ. ಬದಲು ಸಾಮಾನ್ಯವಾಗಿ ಮಕ್ಕಳಿಗೆ ನಗರದ ಹೊರವಲಯದ ಹಳ್ಳಿಗರಿಂದ ದಾಯಿಗಳಿಗೆ ಹಾಲುಣಿಸಲು ಕರೆದು ಅವರ ಸುಪರ್ಧಿಗೆ ಒಪ್ಪಿಸುತ್ತಿದ್ದರು. ಅದರ ಪ್ರಯೋಜನವೇನಾಗುತ್ತಿತ್ತೆಂದರೆ ಹಳ್ಳಿಗಳ ಶುದ್ಧಗಾಳಿಯಲ್ಲಿ ಇದ್ದು ಮಕ್ಕಳು ಸ್ಪಷ್ಟವಾಗಿರುತ್ತಿದ್ದರು. ಶಕ್ತಿವಂತರಾಗುತ್ತಿದ್ದರು ಮತ್ತು ಭಾಷೆಯು ಉತ್ತಮ ಹಾಗೂ ಸ್ವಚ್ಛ ರೀತಿಯಲ್ಲಿ ಕಲಿಯುತ್ತಿದ್ದರು.

ಹಝ್ರತ್ ರಸೂಲುಲ್ಲಾಹ್(ಸ) ರವರಿಗೆ ಪ್ರಾರಂಭದಲ್ಲಿ ಅವರ ಮಾತೆಯು ಮತ್ತೆ ಸೋಬಿಯಾ ಅವರು ಹಾಲುಣಿಸಿದರು. ಸೋಬಿಯಾ ಅವರ ಚಿಕ್ಕಪ್ಪರಾದ ಅಬುಲಹಬಿನ ದಾಸಿಯಾಗಿದ್ದರು. ಅವರು ತಮ್ಮ ಸಹೋದರ ಮಗನ ಜನ್ಮದ ಸಂತೋಷದಲ್ಲಿ ಅವಳನ್ನು ಸ್ವತಂತ್ರಗೊಳಿಸಿದ್ದರು. ಅದೇ ಸೋಬಿಯವು ಹಝ್ರತ್ ಹಂಝು ಅವರಿಗೂ ಹಾಲುಣಿಸಿದ್ದರು. ಈ ರೀತಿ ಹಂಝು ಅವರ ಚಿಕ್ಕಪ್ಪರಾಗಿದ್ದರೂ ಹಾಲುಣಿಸಿದ ಸಂಬಂಧದಿಂದ ಅವರ ಸಹೋದರರಾದರು. ಸೋಬಿಯಾರ ಈ ಕೆಲವು ದಿನಗಳ ಸೇವೆಯು ರಸೂಲುಲ್ಲಾಹ್(ಸ) ರು ಎಂದೂ ಮರೆಯಲಿಲ್ಲ. ಅವರು ಜೀವಂತವಿರುವವರೆಗೆ ಸಹಾಯ ನೀಡುತ್ತ ಬಂದರು. ಮತ್ತು ಮರಣ ಹೊಂದಿದ ನಂತರವು ಕೇಳಿದರು. ಅವರ ಯಾರಾದರೂ ಸಂಬಂಧಿಕರು ಇರುವರೇ. ಆದರೆ ಯಾರು ಇಲ್ಲ ಎಂದು ತಿಳಿದು ಬಂದಿತು. ಸೋಬಿಯಾ ನಂತರ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಖಾಯಂ ಆಗಿ ಹಾಲುಣಿಸಲು ಹಲೀಮಾ ಅವರ ಸುಪರ್ಧಿಗೆ ಒಪ್ಪಿಸಲಾಯಿತು.

ಅವರು ಹವಾಝುನ್ ಸಮುದಾಯದ ಬನಿ ಸಅದ್ ಗೋತ್ರಕ್ಕೆ ಸಂಬಂಧಿಸಿದ ಓರ್ವ ಮಹಿಳೆಯಾಗಿದ್ದರು. ಅವರು ಇತರ ಮಹಿಳೆಯರ ಒಡಗೂಡಿ ಮಕ್ಕದಲ್ಲಿ ಹಾಳುಣಿಸುವ ಕಾರ್ಯಕ್ಕಾಗಿ ಮಕ್ಕಳನ್ನು ಹುಡುಕಲು ಬಂದಿದ್ದರು. ಒಂದು ಅನಾಥ ಮಗುವನ್ನು ತನ್ನ ಜೊತೆಯಲ್ಲಿ ತೆಗೆದುಕೊಂಡು ಹೋಗಲು ಪ್ರಾರಂಭದಲ್ಲಿ ಸಂತುಷ್ಠರಾಗಿರಲಿಲ್ಲ. ಏಕೆಂದರೆ ಅವರ ಬಯಕೆಯಿದ್ದದ್ದು. ತಂದೆಯಿದ್ದ ಮಗುವನ್ನು ಪಡೆದರೆ ಹೆಚ್ಚು ಸಂಬಳ ಹಾಗೂ ಪಾರಿತೋಷಕಗಳೆಲ್ಲ ಪಡೆಯುವ ಸಂಭವವಿರುತ್ತಿತ್ತು. ಆದುದರಿಂದ ಪ್ರಾರಂಭದಲ್ಲಿ ಅವರು ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗಲು ಹಿಂಜರಿದರು. ಆದರೆ ಇನ್ನಾವುದೆ ಮಗು ಸಿಗಲಿಲ್ಲ. ಮತ್ತು ಅವರ ಜೊತೆಯಲ್ಲಿ ಬಂದಿದ್ದ ಎಲ್ಲ ಮಹಿಳೆಯರಿಗೆ ಮಕ್ಕಳು ಸಿಕ್ಕಿದ್ದವು. ಇನ್ನೂ ಖಾಲಿ ಕೈ ಹೋಗುವುದಕ್ಕಿಂತ ಅವರನ್ನು ಕರೆದುಕೊಂಡು ಹೋಗುವುದೇ ಉತ್ತಮ ಎಂದು ಎಣಿಸಿ ಜೊತೆಗೆ ಕರೆದುಕೊಂಡು ಹೋದರು. ಆದರೆ ಅತಿ ಶೀಘ್ರದಲ್ಲಿ ಹಲೀಮಾ ಅವರಿಗೆ ತಿಳಿದು ಬಂತು. ತಾನು ತೆಗೆದುಕೊಂಡು ಬಂದ ಮಗುವಿನ ನಕ್ಷತ್ರವು ಉನ್ನತಮಯವಾಗಿದೆ. ಕಾರಣ ಅವರಿಂದ ವರದಿಯಾಗಿದೆ. "ಹಝ್ರತ್ ರಸೂಲುಲ್ಲಾಹ್(ಸ) ರವರು ಬರುವುದಕ್ಕಿಂತ ಮುಂಚೆ ನಮ್ಮ ಸ್ಥಿತಿಯು ಚೆನ್ನಾಗಿರಲಿಲ್ಲ. ಆದರೆ ಅವರ ಆಗಮನದಿಂದ ಸ್ಥಿತಿ ಉತ್ತಮವಾಗಿ ಬದಲಾಯಿತು. ತಮ್ಮ ಪ್ರತಿ ವಸ್ತುವಿನಲ್ಲೂ ಅನುಗ್ರಹ ಕಾಣುವಂತಾಯಿತು.

ಹಲೀಮಾ ಅವರ ಮಗ, ಹಝ್ರತ್ ರಸೂಲುಲ್ಲಾಹ್(ಸ) ರವರ ಜೊತೆಯಲ್ಲಿ ಹಾಲುಣಿಸುತ್ತಿದ್ದ ಅವನ ಹೆಸರು ಅಬ್ದುಲ್ಲ ಎಂದಾಗಿತ್ತು. ಅವನಿಗೆ ಒಬ್ಬ ಹಿರಿಯ ಸಹೋದರಿಯಿದ್ದರು. ಅವಳ ಹೆಸರು ಶೀಮಾ ಎಂದಾಗಿತ್ತು. ಅವರು ಹಝ್ರತ್ ರಸೂಲುಲ್ಲಾಹ್‌ರವರನ್ನು ತುಂಬ ಪ್ರೀತಿಸುತ್ತಿದ್ದಳು.

ಎರಡು ವರ್ಷಗಳ ನಂತರ ಹಾಲುಣಿಸುವ ಅವಧಿ ಪೂರ್ಣಗೊಂಡಾಗ ಖಾಯಿದೆಯ ಪ್ರಕಾರ ಹಲೀಮಾ ಅವರು ಮಕ್ಕಳನ್ನು ಕರೆ ತಂದಳು. ಆದರೆ ಅವರಿಗೆ ಹಝ್ರತ್ ರಸೂಲುಲ್ಲಾಹ್(ಸ) ರವರೊಂದಿಗೆ ಎಷ್ಟೊಂದು ಪ್ರೀತಿಯಿತ್ತೆಂದರೆ ಊರಿಗೆ ಕರೆದುಕೊಂಡು

ಹೋಗಬೇಕು ಎಂದೆನಿಸುತ್ತಿತ್ತು. ಕಾರಣ ಇನ್ನು ಕೆಲಸ ಸಮಯಕ್ಕಾಗಿ ತನ್ನ ಬಳಿಯಿರಲಿ, ನಾನು ಎಲ್ಲ ರೀತಿಯಿಂದ ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ನಂಬಿಸಿದರು. ಆಮಿನ ಅವರು ಮೊದಲಂತು ನಿರಾಕರಿಸಿದರು. ಆದರೆ ಮತ್ತೆ ಅವಳ ಮನಸಿಗೆ ಕಿವಿಗೊಟ್ಟು ಮತ್ತು ಪ್ರಸಕ್ತ ಸಮಯದಲ್ಲಿ ಮಕ್ಕದ ಹವಾಮಾನವು ಸರಿಯಿಲ್ಲ. ಇಲ್ಲಿಂದ ಅಲ್ಲಿಯ ಹವಾಮಾನವೇ ಉತ್ತಮವಾಗಿದೆ ಎಂದು ಭಾವಿಸಿ ಅವಳ ಮಾತನ್ನು ಒಪ್ಪಿದರು. ಆಗ ಹಲೀಮಾ ತುಂಬ ಸಂತೋಷದಿಂದ ತನ್ನ ಮನೆಗೆ ಮರಳಿದರು. ಅನಂತರ ಸುಮಾರು ನಾಲ್ಕು ವರ್ಷದವರೆಗೆ ಹಲೀಮಾ ಅವರ ಬಳಿಯಿದ್ದರು. ಬನು ಸಅದ್ ಗೋತ್ರದ ಬಾಲಕ ಬಾಲಕಿಯರಲ್ಲಿ ಆಟವಾಡಿಕೊಂಡು ದೊಡ್ಡವರಾದರು. ಆ ಗೋತ್ರದ ಭಾಷೆಯು ಸ್ವಚ್ಛ ಹಾಗೂ ಉತ್ತಮವಾಗಿತ್ತು. ಹಜ್‌ರತ್ ರಸೂಲುಲ್ಲಾಹ್(ಸ) ರವರೂ ಅದೇ ಭಾಷೆಯನ್ನು ಕಲಿತರು.

ಹಲೀಮಾ ಅವರನ್ನು ತುಂಬ ಪ್ರೀತಿಸುತ್ತಿದ್ದು. ಅಲ್ಲದೇ ಆ ಗೋತ್ರದ ಎಲ್ಲ ಜನರು ಅವರನ್ನು ಪ್ರೀತಿಯಿಂದ ಕಾಣುತ್ತಿದ್ದರು. ಆದರೆ ಅವರು ನಾಲ್ಕು ವರ್ಷದವರಾದಾಗ ಒಂದು ಘಟನೆ ಎದುರಾಯಿತು. ಅದರಿಂದ ಹಲೀಮಾ ಅವರಿಗೆ ಭಯ ಉಂಟಾಗಿ ಅವರನ್ನು ಮಕ್ಕಕ್ಕೆ ಮರಳಿ ತಂದು ಅವರ ತಾಯಿಗೆ ಒಪ್ಪಿಸಿದರು. ಆ ಘಟನೆ ಇತಿಹಾಸದಲ್ಲಿ ಹೀಗೆ ವರದಿಯಾಗಿದೆ. ಒಂದು ಸಂದರ್ಭದಲ್ಲಿ ತನ್ನ ಹಾಲುಣಿಸಿದ ಸಹೋದರರ ಜೊತೆಯಲ್ಲಿ ಕೂಡಿ ಆಡುತ್ತಿದ್ದರು. ಆಗ ಯಾವ ಹಿರಿಯ ವ್ಯಕ್ತಿಯು ಪಕ್ಕದಲ್ಲಿ ಇರಲಿಲ್ಲ. ಆಕಸ್ಮಾತ್ತಾಗಿ ಇಬ್ಬರು ಬಿಳಿವಸ್ತ್ರಧಾರಿ ಮನುಷ್ಯರು ದೃಷ್ಟಿಗೆ ಬಿದ್ದರು. ಅವರು ರಸೂಲುಲ್ಲಾಹ್(ಸ) ರವರನ್ನು ಹಿಡಿದು ನೆಲದ ಮೇಲೆ ಮಲಗಿಸಿದರು ಮತ್ತು ಅವರ ಎದೆಯನ್ನು ಸೀಳಿದರು. ಈ ದೃಶ್ಯವನ್ನು ಕಂಡು ಅವರ ಹಾಳುಣಿಸಿದ ಸಹೋದರ ಅಬ್ದುಲ್ಲ ಬಿನ್ ಹಾರಿಸ್ ಓಡಿ ಹೋಗಿ ತನ್ನ ತಂದೆ ತಾಯಿಯರಿಗೆ ತಿಳಿಸಿದರು. ನನ್ನ ಖುರೇಶಿ ಸಹೋದರರನ್ನು ಇಬ್ಬರು ಮನುಷ್ಯರು ಹಿಡಿದುಕೊಂಡಿದ್ದಾರೆ. ಮತ್ತು ಅವರ ಎದೆಯನ್ನು ಸೀಳುತ್ತಿದ್ದಾರೆ. ಹಾರಿಸ್ ಮತ್ತು ಹಲೀಮಾ ಇದನ್ನು ಕೇಳುತ್ತಲೇ ಧಾವಿಸಿ ಬಂದರು. ನೋಡಿದರೆ ಅಲ್ಲಿ ಯಾರೂ ಇರಲಿಲ್ಲ. ಆದರೆ ಹಝ್‌ರತ್ ರಸೂಲುಲಾಹ್(ಸ) ಭಯಭೀತರಾಗಿ ನಿಂತುಕೊಂಡಿದ್ದರು. ಮುಖದ ಭಾವ ಬದಲಾಗಿತ್ತು. ಹಲೀಮಾ ಅವರು ಮುಂದೆ ಬಂದು ಅವರನ್ನು ತಬ್ಬಿಕೊಂಡರು. ಮತ್ತು ಕೇಳಿದರು. ಮಗು ಏನಾಯಿತು? ಹಝ್‌ರತ್ ರಸೂಲುಲ್ಲಾಹ್(ಸ) ಆದ ಘಟನೆಯನ್ನು ಹೇಳೀದರು. ಅವರು ಯಾವುದೋ ಒಂದು ವಸ್ತು ನನ್ನ ಎದೆಯಲ್ಲಿ ಹುಡುಕುತ್ತಿದ್ದರು. ಅದನ್ನು ಅವರು ತೆಗೆದು ಬಿಸಾಕಿದರು. ಮತ್ತೆ ಹಲೀಮಾ ಹಾಗೂ ಹಾರಿಸ್ ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋದರು. ಹಾರಿಸ್ ಹಲೀಮಾ ಅವರಿಗೆ ಹೇಳಿದರು. ನನಗೆ ಈ ಹುಡುಗನಿಗೆ ಏನೋ ಆಗಿದೆ ಎಂಬ ಭಯವಿದೆ. ಆದುದರಿಂದ ಇವನನ್ನು ತಕ್ಷಣದಿಂದ ಕರೆದುಕೊಂಡು ಹೋಗಿ ಅವರ ತಾಯಿಗೆ ಒಪ್ಪಿಸಿ ಬರುವುದು ಉತ್ತಮ ಎನಿಸುತ್ತದೆ. ಆಗ ಹಲೀಮಾ ಅವರು ಮಕ್ಕಕ್ಕೆ ಕರೆ ತಂದು ಅವರ ತಾಯಿಗೆ ಒಪ್ಪಿಸಿದರು. ಆಮಿನ ಅವರು ಈ ಅವಸರಕ್ಕೆ ಕಾರಣ ಹೇಳಲು ವಿವಶಪಡಿಸಿದರು. ಆಗ ಹಲೀಮಾ ಅವರು ನಡೆದ ಘಟನೆಯನ್ನು ವಿವರಿಸಿ ತಮ್ಮ ಭಯವನ್ನು ವ್ಯಕ್ತಪಡಿಸಿದರು. "ಈ ಹುಡುಗನ ಮೇಲೆ ಜಿನ್ನ್ ಇತ್ಯಾದಿಯ ಪ್ರಭಾವ ಬೀರಿದಂತೆ ಕಾಣುತ್ತದೆ. ಆಮಿನ ಅವರು ಹೇಳಿದರು. ಹೀಗೆ ಆಗಲು ಸಾಧ್ಯವೆ ಇಲ್ಲ. ನನ್ನ ಮಗ ತುಂಬ ವೈಭವಶಾಲಿಯಾಗಿದ್ದಾನೆ. ನಾನು ಗರ್ಭಿಣಿಯಾಗಿದ್ದಾಗ ನೋಡಿದ್ದೆ. ನನ್ನ ಒಳಗಿನಿಂದ ಒಂದು ಪ್ರಕಾಶ ಪ್ರಕಟವಾಗಿದೆ. ಅದು ದೂರ ದೂರದ ದೇಶಗಳವರೆಗೆ ಹಬ್ಬಿಕೊಂಡಿದೆ.

ಈ ಘಟನೆಯ ಸಂಪೂರ್ಣ ಪುಷ್ಟಿ ಸಹೀ ಮುಸ್ಲಿಮಿನ ಒಂದು ವರದಿಯಿಂದ ಲಭ್ಯವಾಗುತ್ತದೆ. ಅದರಲ್ಲಿ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ. ಒಂದು ಸಂದರ್ಭದಲ್ಲಿ ಹಝ್‌ರತ್ ರಸೂಲುಲ್ಲಾಹ್(ಸ) ಮಕ್ಕಳ ಜೊತೆಯಲ್ಲಿ ಆಡುತ್ತಿದ್ದರು. ಅವರ ಬಳಿ ಜಿಬ್ರೀಲ್ ಬಂದರು. ರಸೂಲುಲ್ಲಾಹ್(ಸ) ಅವರನ್ನು ನೆಲದ ಮೇಲೆ ಮಲಗಿಸಿ ಅವರ ಎದೆಯನ್ನು ಸೀಳಿದರು. ಮತ್ತೆ ಎದೆಯ ಒಳಗಿನಿಂದ ಅವರ ಹೃದಯವನ್ನು ತೆಗೆದರು. ಅದರಿಂದ ಯಾವುದೋ ವಸ್ತು ತೆಗೆದು ಹೊರಗೆ ಬಿಸಾಕಿದರು ಒಡನೆಯೇ ಹೇಳಿದರು. ಇದು ನ್ಯೂನತೆಗಳ ಶುದ್ಧಿಯಾಗಿತ್ತು. ಅದನ್ನು ಈಗ ಬೇರ್ಪಡಿಸಲಾಗಿದೆ. ಅನಂತರ ಜಿಬ್ರೀಲರು ಅವರ(ಸ) ಹೃದಯವನ್ನು ಶುದ್ಧ ನೀರಿನಿಂದ ಸ್ವಚ್ಛಗೊಳಿಸಿದರು. ಮತ್ತು ಎದೆಗೂಡಿನಲ್ಲಿ ಮರು ಜೋಡಿಸಿದರು. ಜಿಬ್ರೀಲಾ ಅವರನ್ನು(ಸ) ನೆಲದ ಮೇಲೆ ಉರುಳಿಸುತ್ತಿದ್ದನ್ನು ಮತ್ತು ಎದೆಯನ್ನು ಸೀಳುತ್ತಿದ್ದನ್ನು ನೋಡಿ ಗಾಬರಿಗೊಂಡು ಓಡಿ ಹೋಗಿ ಅವರ ದಾಯಿಯ ಬಳಿಗೆ ಹೋದರು ಮತ್ತು ಹೇಳೀದರು. ಮುಹಮ್ಮದರನ್ನು ಯಾರೋ ಹತ್ಯೆ ಮಾಡಿದ್ದಾರೆ. ಜನರು ಹಝ್‌ರತ್ ರಸೂಲುಲ್ಲಾಹ್(ಸ) ರವರ ಬಳಿ ಹೋದಾಗ ದೇವದೂತನೂ ಮಾಯವಾಗಿದ್ದನು. ಮತ್ತು ಅವರು ಭಯಭೀತರಾಗಿ ನಿಂತುಕೊಂಡಿದ್ದರು. ಸಹೀ ಮುಸ್ಲಿಮ್ ಇದನ್ನು ದೃಢೀಕರಿಸಿದ ನಂತರ ಇಬ್ನು ಹಶ್ಯಾಮ್ ಅವರ ಈ ವರದಿಗೆ ಎಂತಹ ಪುಷ್ಠಿ ದೊರೆಯುತ್ತದೆ ಎಂದರೆ ಅದನ್ನು ದುರ್ಬಲ ಹದೀಸ್ ಎಂದು ಹೇಳೀ ರದ್ದುಗೊಳಿಸಲು ಸಾಧ್ಯವಿಲ್ಲ. ಆದರೆ ಇದೊಂದು ದಿವ್ಯ ಸ್ವಪ್ನದ ದೃಶ್ಯವಾಗಿತ್ತು. ಅದಾಗ್ಯೂ ದೈಹಿಕವಾಗಿ ಎದೆ ಸೀಳಿದ ಗುರುತುಗಳು ಹಲೀಮ ಅವರಿಗೆ ಕಾಣದಿದ್ದದ್ದು ಸ್ಪಷ್ಟಪಡಿಸುವುದೇನೆಂದರೆ ಅದು ದಿವ್ಯ ಸ್ವಪ್ನವೇ ಆಗಿತ್ತು. ಈ ಮಾತು ಇತರ ಮಕ್ಕಳವರೆಗೂ ಹಬ್ಬಿತ್ತು. ಅವರು ಸ್ವಯಂ ಈ ದಿವ್ಯ ಸ್ವಪ್ನವನ್ನು ಉಲ್ಲೇಖಿಸಿ ಹೇಳುತ್ತಾರೆ. ಅದರ ತಾತ್ಪರ್ಯವು ದೇವದೂತನು ದಿವ್ಯ ಸ್ವಪ್ನದಲ್ಲಿ ಬಂದು ತನ್ನ ಎದೆಯನ್ನು ಸೀಳಿ ಎಲ್ಲ ನ್ಯೂನತೆಗಳನ್ನು ಒಳಗಿನಿಂದ ತೆಗೆದು ಹಾಕಿ ಶುದ್ಧಗೊಳಿಸಿದನು. ಸಹೀ ಹದೀಸುಗಳಿಂದಲೂ ಸಾಬೀತಾಗಿದೆ. ಮಿಅ್‌ರಾಜ್ ರಾತ್ರಿಯಲ್ಲಿಯೂ ಹಝ್‌ರತ್ ರಸೂಲುಲ್ಲಾಹ್(ಸ) ರೊಂದಿಗೆ ಅದೇ ರೀತಿ ಎದೆ ಸೀಳುವ ಘಟನೆ ಘಟಿಸಿತ್ತು. ದೇವದೂತನು ರಸೂಲುಲ್ಲಾಹ್(ಸ) ರವರ ಹೃದಯವನ್ನು ತೆಗೆದು ಶುದ್ಧ ನೀರಿನಿಂದ (ಝಂಝಂ) ನಿಂದ ಸ್ವಚ್ಛಗೊಳಿಸಿ ಅದೇ ಜಾಗದಲ್ಲಿ ಇಟ್ಟಿದ್ದರು.

ಈ ಸಂದರ್ಭವನ್ನು ಸರ್ ವಿಲಿಯಮ್ ಈ ಘಟನೆಯನ್ನು ಲಘೂಕರಿಸಿ ಟೀಕಾಸ್ತ್ರವಾಗಿ ಹೇಳಿದ್ದರ ವಿವರ ನೀಡುವುದು ಉಚಿತವೆನಿಸುವುದು. ನಊಝು ಬಿಲ್ಲಾಹ್ ಸರ್ ವಿಲಿಯಮ್ ಹೇಳುವುದೇನೆಂದರೆ ಅದೊಂದು ಮೂರ್ಛೆ ಹೋಗುವ (ಮಿರ್ಗಿ) ಕಾಯಿಲೆ ಆಗಿತ್ತು. ಆದ್ದರಿಂದ ಅವರು ನೆಲಕ್ಕೆ ಉರುಳಿದರು. ನಾವು ಯಾರ ನಾಲಿಗೆಯನ್ನು ತಡೆಯಲಿಕ್ಕಂತೂ ಸಾಧ್ಯವಿಲ್ಲ. ಆದರೆ ನಿಶ್ಚಯವಾಗಿಯೂ ಮೇಯರ್ ಸಾಹಿಬ್ ಈ ಆಕ್ಷೇಪ ಮಾಡಿದ್ದು ಅವರ ದ್ವೇಷಕ್ಕೆ ಹಿಡಿದ ಕನ್ನಡಿಯಾಗಿದೆ. ಏಕೆಂದರೆ ಮಿರ್ಗಿ ಕಾಯಿಲೆ ಇದ್ದವರು ಒಂದು ದುರ್ಬಲ ಮಗುವುಳ್ಳ ಮನುಷ್ಯರಾಗಿರುತ್ತಾರೆ. ಹಝ್‌ರತ್ ರಸೂಲುಲ್ಲಾಹ್(ಸ) ರವರು ಒರ್ವ ಸ್ವಚ್ಛ ಶಕ್ತಿಯುಳ್ಳ ಉತ್ತಮ ಆರೋಗ್ಯ ಹೊಂದಿದವರಾಗಿದ್ದರು ಎಂದು ಹೇಳುವವರಿದ್ದಾರೆ. ಅಲ್ಲದೇ ಕೊನೆಯಲ್ಲಿ ಬಂದ ಈ ಮರಣ ಅದನ್ನು ತಳ್ಳಿ ಹಾಕುತ್ತದೆ. ಏಕೆಂದರೆ ಈ ವರದಿಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಶೀ ದೃಶ್ಯವು ಹಝ್‌ರತ್ ರಸೂಲುಲ್ಲಾಹ್(ಸ) ರವರ ಹಾಲುಣಿಸುವ ಸಹೋದರಿಯನ್ನು ನೋಡಿರುತ್ತಾರೆ. ಅವರು ಓಡಿ ಹೋಗಿ ತನ್ನ ಹೆತ್ತವರಿಗೆ ತಿಳಿಸಿದರು ತನ್ನ ಖುರೇಶಿ ಸಹೋದರನ್ನು ಇಬ್ಬರು ಬಿಳಿವಸ್ತ್ರದಾರಿಗಳು ನೆಲಕ್ಕುರುಳಿಸಿ ಅವರ ಎದೆ ಸೀಳುತ್ತಿದ್ದಾರೆ ಎಂದು. ಲೋಕದಲ್ಲಿ ಈ ಮಿರ್ಗಿ ಇರುವುದನ್ನು ಯಾರಾದರೂ ಸಾಕ್ಷಿ ನೀಡಬಲ್ಲರೇ. ಆ ಬಗ್ಗೆ ಇತರರು ಈ ರೀತಿಯ ದೃಶ್ಯ ಕಂಡಿರಬೇಕು. ಮಿರ್ಗಿ ಕಾಯಿಲೆ ಇದ್ದವನಿಗೆ ಸ್ವಯಂ ಅವನಿಗೆ ಗೊತ್ತಿರುವುದಿಲ್ಲ. ಏನು ಮತ್ತು ಹೇಗಾಯಿತೆಂದು ಮತ್ತು ಇತರರು ಆ ದೃಶ್ಯ ಕಂಡಿರಬೇಕು. ಇಂತಹ ನಿರಾಧಾರ ಆರೋಪ ನಮ್ಮ ಒಬ್ಬ ದ್ವೇಷಿ ಮಾತ್ರ ಹೇಳಬಲ್ಲನು.

ಅಂತಹ ಸಮಯ ರಸೂಲುಲ್ಲಾಹ್(ಸ) ರವರ ಪ್ರಾಯ ನಾಲ್ಕು ವರ್ಷವೆಂದು ಆಧಾರ ಹೇಳಿತು. ಅವರು ಮರಳಿ ತಂದು ಅವರ ತಾಯಿಗೆ ಒಪ್ಪಿಸಿದರು. ಹಲೀಮಾ ಅವರ ಈ ನಾಲ್ಕು ವರ್ಷಗಳ ಸೇವೆ ಸಾಧಾರಣವಾದದ್ದೇನೂ ಆಗಿರಲಿಲ್ಲ. ಹಝ್‌ರತ್ ರಸೂಲುಲ್ಲಾಹ್(ಸ) ಸಣ್ಣ ಸಣ್ಣ ಸೇವೆಗಳನ್ನು ಅವಗಣಿಸುತ್ತಿರಲಿಲ್ಲ. ಆದುದರಿಂದ ಅವರು ಜೀವನ ಪೂರ್ತಿ ಅವರ ಸೇವೆಯನ್ನು ನೆನಪಿಟ್ಟರು ಮತ್ತು ಸದಾ ಅವರೊಂದಿಗೆ ಉತ್ತಮ ರೀತಿಯಲ್ಲಿ ವ್ಯವಹರಿಸಿದರು. ಅದಾಗ್ಯೂ ಒಂದು ಸಂದರ್ಭದಲ್ಲಿ ಅವರ ದೇಶದಲ್ಲಿ ಬರ ಬಂದ್ದಿತ್ತು. ಹಲೀಮಾ ಅವರು ಮಕ್ಕಕ್ಕೆ ಬಂದಿದ್ದರು. ಆಗ ರಸೂಲುಲ್ಲಾಹ್(ಸ) ಅವರಿಗೆ ನಲವತ್ತು ಕುರಿಗಳು ಮತ್ತು ಒಂದು ಒಂಟೆಯನ್ನು ದಯಪಾಲಿಸಿದರು. ಪ್ರವಾದಿತ್ವ ಕಾಲದಲ್ಲಿ ಒಮ್ಮೆ ಹಲೀಮಾ ಅವರು ಬಂದಾಗ ಅವರನ್ನು ನೋಡುತ್ತಲೆ

ಎದ್ದು ನಿಂತು "ನನ್ನ ತಾಯಿ ನನ್ನ ತಾಯಿ" ಎಂದು ಸಂತೋಷ ವ್ಯಕ್ತಪಡಿಸಿದರು. ಮತ್ತು ತನ್ನ ಮೇಲಿನ ಚಾದರ ತೆಗೆದು ಅವರ ಕೆಳಗೆ ಹಾಸಿದರು. ಇನ್ನೊಂದು ವೇಳೆ ಹುನೈನ್ ಯುದ್ಧದಲ್ಲಿ ಹವಾಝುನಿನ ಸಾವಿರಾರು ಖೈದಿಗಳು ಹಿಡಿಯಲ್ಪಟ್ಟಿದ್ದರು. ರಸೂಲುಲ್ಲಾಹ್(ಸ) ಅದೇ ಸಂಬಂಧದದ ನಿಮಿತ್ತ ಅವರಿಂದ ಫಿದಿಯಾ ಪಡೆದುಕೊಳ್ಳದೆ ಎಲ್ಲರನ್ನು ಬಿಡುಗಡೆಗೊಳಿಸಿದರು. ಒಂದು ಪೈಸೆಯೂ ಅವರಿಂದ ವಸೂಲು ಮಾಡಲಿಲ್ಲ. ಆ ಖೈದಿಗಳಲ್ಲಿ ಅವರ ಹಾಲುಣಿಸಿದ ಸಹೋದರಿಯು ಬಂದಿದ್ದಳು. ಅವಳನ್ನು ಪಾರಿತೋಷಕಗಳನ್ನು ನೀಡಿ ಸಂಪತ್ಭರಿತರನ್ನಾಗಿ ಮಾಡಿದರು. ಹಲೀಮಾ ಮತ್ತು ಅವರ ಪತಿ ಹಾರಿಸ್ ಇಸ್ಲಾಮ್ ಸ್ವೀಕರಿಸಿದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆದರೆ ಅವರಿಬ್ಬರು ಮುಸಲ್ಮಾನರಾಗಿದ್ದರು ಎಂಬುದಕ್ಕೆ ಪ್ರಬಲ ಸಾಕ್ಷ್ಯಗಳಿವೆ. ಅವರು ಇಸ್ಲಾಮ್ ಸ್ವೀಕರಿಸಿಯೇ ತೀರಿ ಹೋದರು. ರಸೂಲುಲ್ಲಾಹ್(ಸ) ರವರ ಹಾಲುಣಿಸಿದ ಸಹೋದರ ಅಬ್ದುಲ್ಲ ಮತ್ತು ಸಹೋದರಿ ಶೀನೂ ಇಸ್ಲಾಮ್ ಸ್ವೀಕರಿಸಿ ತೀರಿಹೋದರು.

**ತಾಯಿಯ ಪಾಲನೆ ಪೋಷಣೆ ಮತ್ತು ಎಸರಬ್ ಪ್ರವಾಸ:**

ಹಲೀಮ ಅವರು ರಸೂಲುಲ್ಲಾಹ್(ಸ) ರವರನ್ನು ಅವರ ತಾಯಿಗೆ ಮರಳಿ ಒಪ್ಪಿಸಿದಾಗ ಅವರ(ಸ) ಪ್ರಾಯ ಹೆಚ್ಚು ಕಡಿಮೆ ನಾಲ್ಕು ವರ್ಷದ್ದಾಗಿತ್ತು. ಅನಂತರ ಅವರು ತನ್ನ ಮಾತೆಯ ಆಶ್ರಯದಲ್ಲಿ ಬೆಳೆದರು. ರಸೂಲುಲ್ಲಾಹ್(ಸ) ರವರ ವಯಸ್ಸು 6 ವರ್ಷವಾದಾಗ ಆಮಿನ ತನ್ನ ಸಂಬಂಧಿಕರನ್ನು ಭೇಟಿಯಾಗಲು ಎಸ್‌ರಬ್‌ಗೆ ಹೋದರು. ತಮ್ಮ ಜೊತೆಯಲ್ಲಿ ರಸೂಲುಲ್ಲಾಹ್(ಸ) ರವರನ್ನು ಕರೆದುಕೊಂಡು ಹೋಗಿದ್ದರು. ಒಮ್ಮೆ ನುಮನ್ ಅವರೂ ಜೊತೆಗಿದ್ದರು. ಈ ಪ್ರವಾಸದಲ್ಲಿ ಆಮಿನ ಅವರು ತನ್ನ ಪತಿಯ ಸಮಾಧಿ ನೋಡಿದ ಸಾಧ್ಯತೆಯೂ ಇದೆ. ಅಂತೂ ಅವರು ಎಸ್‌ರಬ್‌ಗೆ ಹೋದರು. ಅಲ್ಲಿ ಸುಮಾರು ಒಂದು ತಿಂಗಳವರೆಗೆ ತಂಗಿದ್ದರು. ಹಝ್ರತ್ ರಸೂಲುಲ್ಲಾಹ್(ಸ) ಅವರಿಗೆ ಈ ಕಾಲ ಕೊನೆಯ ವಯಸ್ಸಿನತನಕ ನೆನಪಿತ್ತು. ಸುಮಾರು 50 ವರ್ಷ ನಂತರ ಅವರು ಹಿಝ್ರತ್ ಮಾಡಿ ಮದೀನಕ್ಕೆ ಹೋದಾಗ ಅವರು ಸಹಾಬರಿಗೆ ತಾವು ತಾಯಿಯ ಜೊತೆಯಲ್ಲಿ ತಂಗಿದ್ದ ಆ ಮನೆಯನ್ನು ತೋರಿಸಿದರು. ಮತ್ತು ತಾವು ಮದೀನದ ಆ ಮಕ್ಕಳ ಜೊತೆಯಲ್ಲಿ ಆಡುತ್ತಿದ್ದ ಸ್ಥಳ ತೋರಿಸಿದರು ಮತ್ತು ತಾವು ಈಜಾಡುತ್ತಿದ್ದ ಆ ಕೆರೆಯು ತೋರಿಸಿದರು.

**ತಾಯಿಯರ ವಫಾತ್ (ನಿಧನ)**

ಸುಮಾರು ಒಂದು ತಿಂಗಳ ವಾಸದ ನಂತರ ಆಮಿನ ಅವರು ಮರಳಿ ಹೋಗುತ್ತಿರುವಾಗ ತನ್ನ ಪತಿಯ ಹಾಗೆ ಅವರ ವಫಾತ್ ಸಹ ಪರದೇಶದಲ್ಲಿಯೇ ಆಗುವುದಿತ್ತು. ಅದಾಗ್ಯೂ ಅವರು ರಸ್ತೆ ಮಧ್ಯದಲ್ಲಿಯೇ ಅಸ್ವಸ್ಥರಾದರು ಮತ್ತು ಅಬಾ ಸ್ಥಳದಲ್ಲಿ ನಿಧನರಾದರು ಮತ್ತು ಅಲ್ಲೇ ದಫನ ಮಾಡಲಾಯಿತು. ಪ್ರವಾದಿತ್ವ ಕಾಲದಲ್ಲಿ ಒಮ್ಮೆ ಆ ಸ್ಥಳದಿಂದ ಹೋಗುವ ಸಂದರ್ಭ ಬಂದಾಗ ತನ್ನ ತಾಯಿಯ ಸಮಾಧಿ ಬಳಿ ಹೋದರು ಮತ್ತು ಅದನ್ನು ನೋಡಿ ಕಣ್ಣು ತುಂಬಿ ಬಂದವು. ಸಹಾಬರೂ ಆ ದೃಶ್ಯ ನೋಡಿ ಅವರು ಅಳತೊಡಗಿದರು. ರಸೂಲುಲ್ಲಾಹ್(ಸ) ಸಹಾಬರೊಡನೆ ಹೇಳಿದರು. ಅಲ್ಲಾಹನು ನನಗೆ ಸಮಾಧಿಯನ್ನು ನೋಡುವ ಅನುಮತಿ ಕೊಟ್ಟಿದ್ದಾನೆಯಾದರೂ ಪ್ರಾರ್ಥನೆ ಮಾಡುವ ಅನುಮತಿ ನೀಡಲಿಲ್ಲ. ಆದ್ದರಿಂದ ಅವರ ತಾಯಿಯ ಮಗ್‌ಫಿರತ್ ಆಗಿರಲಿಕ್ಕಿಲ್ಲ ಎಂದು ತಿಳಿಯವುದುದು ಬೇಡ. ಏಕೆಂದರೆ ಅಲ್ಲಾಹನಿಗೆ ಸಂಬಂಧಿಸಿದ ವಿಷಯವಾಗಿದೆ. ಆ ಕುರಿತು ಏನು ಹೇಳಲಾಗದು. ಏನಾಗಬಹುದು ಮತ್ತು ಏನಾಗಲಿಕ್ಕಿಲ್ಲ ಎಂದು. ಆದರೆ ಅದರಿಂದ ತಿಳಿದು ಬರುವುದು ಇಷ್ಟೇ ಬಹುದೇವಾರಾಧತ್ವದಲ್ಲಿ ನಿಧನ ಹೊಂದಿದವರ ಮೇಲೆ ಪ್ರಾರ್ಥನೆ ಮಾಡುವುದು ಸರಿಯಾದುದಲ್ಲ. ಬದಲು ಆ ಸಮಸ್ಯೆಯನ್ನು ಅಲ್ಲಾಹನ ಮೇಲೆ ಬಿಡತಕ್ಕದ್ದು.

ತಾಯಿ ನಿಧನಗೊಂಡಾಗ ಹಝ್ರತ್ ರಸೂಲುಲ್ಲಾಹ್(ಸ) ರವರ ಮೇಲೆ ದುಃಖ ಆವರಿಸಿತು. ಕಿರಿದಾದ ವಯಸ್ಸು, ಜನ್ಮ ಸ್ಥಳದಿಂದ ದೂರ ಸಂಬಂಧದೂರ, ತಾಯಿಯ ಅಗಲಿಕೆಯ ದುಃಖ ಮೊದಲೆ ತಂದೆಯೂ ತೀರಿ ಹೋದದ್ದು ಇದೇನು ಸಾಧಾರಣ ರೀತಿಯ ದುಃಖವಾಗಿರಲಿಲ್ಲ. ಅದಾಗ್ಯೂ ಇದು ರಸೂಲುಲ್ಲಾಹ್(ಸ) ರವರ ಹೃದಯದ ಮೇಲೆ ಒಂದು ಆಳವಾದ ಹಾಗೂ ಮರೆಯಲಾಗದ ಪ್ರಭಾವ ಬೀರಿತು. ನಿಸ್ಸಂದೇಹವಾಗಿ ಅವರು ಅಲ್ಲಾಹನಿಂದ "ರಹಮತುಲ್ ಲಿಲ್ಲ ಆಲಮೀನ್" ಲೋಕದ ಎಲ್ಲ ಜನರಿಗೆ ಒಂದು ಅನುಗ್ರಹವಾಗಿ ಕಳುಹಿಸಿದ್ದು ಹೌದು. ಆದರೆ ಲೌಕಿಕ ನೆಲೆಯಲ್ಲಿ ಅದರ ಪ್ರಭಾವ ಅವರ ಮೇಲೆ ತುಂಬ ಆಯಿತು. ಒಂದು ರೀತಿಯಲ್ಲಿ ನೋಡುವುದಾದರೆ ಈ ಪ್ರಾರಂಭಿಕ ದುಃಖಗಳ ಪರಿಣಾಮವಾಗಿಯೇ ಅವರು ಚರಿತ್ರೆಯಲ್ಲಿ ಬಡವರ ಪ್ರತಿ ಪ್ರೀತಿ ಮತ್ತು ಆಪತ್ತಿನಲ್ಲಿರುವವರ ಪ್ರತಿ ಒಂದು ವಿಶೇಷವಾದ ಒಲವು ಹೊಂದಿದ್ದರು. ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ರವರ ಈ ಸ್ಥಿತಿಯನ್ನು ಹೀಗೆ ವರ್ಣಿಸಲಾಗಿದೆ. **"ಅಲಮ್ ಯಜಿದ್‌ಕ ಯತೀಮನ್ ಫಾವಾ. ವವಜದಕ ಝ್ವಾಲ್ಲನ್ ಫಹದಾ. ವವಜದಕ ಆಯಿಲನ್ ಫಲಿಗ್ನಾ, ಫಮ್ಮಲ್ ಯತೀಮ ಫಲಾ ತಖ್‌ಹರ್,"** (ಅಝ್–ಝುಹಾ–7 ರಿಂದ 10)

"ಅವನು ನನ್ನನ್ನು ಅನಾಥನಾಗಿ ಕಂಡು ನಿನಗೆ ಆಶ್ರಯ ನೀಡಲಿಲ್ಲವೇ? (ತನ್ನನ್ನು) ಹುಡುಕುತ್ತ ಅಲೆದಾಡುವವನಾಗಿ ಅವನು ನಿನ್ನನ್ನು ಕಂಡರು. ಆಗ ಅವನು (ತನ್ನೆಡೆಗೆ) ಮಾರ್ಗದರ್ಶನ ಮಾಡಿದನು. ಅವನು ನಿನ್ನನ್ನು ನಿರ್ಗತಿಕನಾಗಿ ಕಂಡಾಗ ಐಶ್ವರ್ಯವಂತನಾಗಿ ಮಾಡಿದನು. ಆದ್ದರಿಂದ ನೀನು ಅನಾಥರೊಡನೆ ಕಾಠಿಣ್ಯದಿಂದ ವರ್ತಿಸಬೇಡ,"

**ಅಬ್ದುಲ್ ಮುತಲ್ಲಿಬ್‌ರವರ ಪಾಲನೆ ಪೋಷಣೆ**

ತಾಯಿಯ ನಿಧನ ನಂತರ ಹಝ್ರತ್ ರಸೂಲುಲ್ಲಾಹ್(ಸ) ತನ್ನ ಸೇವಕಿ ಉಮ್ಮೆ ಯಮನ್ ಅವರ ಜೊತೆ ಮಕ್ಕ ತಲುಪಿದರು. ಈ ಉಮ್ಮೆ ಯಮನ್ ಅವರ ತಂದೆಯ ನಿಧನ ನಂತರ ಸೇವಕಿಯ ನೆಲೆಯಲ್ಲಿ ಬಳುವಳಿಯಾಗಿ ದಕ್ಕಿದ್ದರು. ದೊಡ್ಡವರಾಗಿ ರಸೂಲುಲ್ಲಾಹ್(ಸ) ಅವರನ್ನು ಸ್ವತಂತ್ರವಾಗಿಸಿದರು ಮತ್ತು ಅವರ ಜೊತೆ ಉಪಕಾರದ ವ್ಯವಹಾರ ಮಾಡುತ್ತಿದ್ದರು. ಅನಂತರ ಉಮ್ಮೆ ಯಮನ್ ಅವರ ವಿವಾಹ ರಸೂಲುಲ್ಲಾಹ್(ಸ) ಸ್ವತಂತ್ರಗೊಳಿಸಿದ್ದ. ಗುಲಾಮ ಝೈದ್ ಬಿನ್ ಹಾರಿಸ್ ಅವರ ಜೊತೆ ಆಗಿತ್ತು. ಅವರ ಉದರದಿಂದ ಉಸಾಮ ಬಿನ್ ಝೈದ್ ಜನ್ಮ ಪಡೆದಿದ್ದರು. ಉಮ್ಮೆ ಯಮನ್ ರಸೂಲುಲ್ಲಾಹ್(ಸ) ವಫಾತ್ ಆದ ನಂತರವು ಬದುಕಿದ್ದರು. ಅಂತೂ ತಾಯಿಯ ನಿಧನ ನಂತರ ರಸೂಲುಲ್ಲಾಹ್(ಸ) ಉಮ್ಮೇ ಯಮನ್ ಅವರ ಜೊತೆಯಲ್ಲಿ ಮಕ್ಕ ತಲುಪಿದರು. ಅಲ್ಲಿಂದ ಅವರು ನೇರವಾಗಿ ಅಬ್ದುಲ್ ಮುತಲ್ಲಿಬ್ ಅವರ ಪಾಲನೆ ಪೋಷಣೆಗೆ ಒಳಪಟ್ಟರು. ಅಬ್ದುಲ್ ಮುತಲ್ಲಿಬ್ ಅವರನ್ನು ತುಂಬ ಪ್ರೀತಿಸುತ್ತಿದ್ದರು. ಕಅ್‌ಬ ಪ್ರದಕ್ಷಿಣೆ ಮಾಡುವಾಗ ಅವರನ್ನು ತನ್ನ ಹೆಗಲ ಮೇಲೆ ಕುಳ್ಳಿರಿಸಿಕೊಳ್ಳುತ್ತಿದ್ದರು. ರಸೂಲುಲ್ಲಾಹ್(ಸ) ರವರೂ ಜೊತೆ ಬೆರೆತು ಹೋಗಿದ್ದರು. ಕಅಬ ಅಂಗಗಳಿಂದ ನೆಲದ ಮೇಲೆ ಚಾದರ ಹಾಸಿ ಕೂಡುವುದು ಅಬ್ದುಲ್ ಮುತಲ್ಲಿಬ್ ಅವರ ಅಭ್ಯಾಸವಾಗಿತ್ತು. ಅವರ ಪಕ್ಕದಲ್ಲಿ ಕೂಡುವ ಧೈರ್ಯ ಯಾರಿಗೂ ಇರಲಿಲ್ಲ. ಅವರ ಮಕ್ಕಳೂ ಸಹ ಅವರಿಂದ ಸ್ವಲ್ಪ ದೂರವೇ ಕುಳಿತುಕೊಳ್ಳುತ್ತಿದ್ದರು. ಆದರೆ ಹಝ್ರತ್ ರಸೂಲುಲ್ಲಾಹ್(ಸ) ಪ್ರೀತಿಯ ಉತ್ಸಾಹದಲ್ಲಿ ನೇರವಾಗಿ ಅಬ್ದುಲ್ ಮುತಲ್ಲಿಬ್ ಅವರ ಬಳಿ ಹೋಗಿ ಕುಳಿತುಕೊಳ್ಳುತ್ತಿದ್ದರು ಮತ್ತು ಅವರು ರಸೂಲುಲ್ಲಾಹ್(ಸ) ರವರನ್ನು ಕಂಡು ತುಂಬ ಸಂತೋಷಪಡುತ್ತಿದ್ದರು. ಕೆಲವೊಮ್ಮೆ ಅವರ ಚಿಕ್ಕಪ್ಪನವರು ಅವರನ್ನು ಅವರ ಬಳಿ ಕುಳಿತುಕೊಳ್ಳಲು ತಡೆದರೆ ಅಬ್ದುಲ್ ಮುತಲ್ಲಿಬರು ತಡೆಯುತ್ತಿದ್ದರು ಮತ್ತು ಏನು ಹೇಳಬಾರದು ಎಂದು ಹೇಳುತ್ತಿದ್ದರು.

**ಅಬ್ದುಲ್ ಮುತಲ್ಲಿಬರವರ ನಿಧನ**

ಅದೇ ಪ್ರೀತಿಯಲ್ಲಿ ರಸೂಲುಲ್ಲಾಹ್(ಸ) ರವರ ದಿನಗಳು ಕಳೆಯುತ್ತಿದ್ದವು. ಅಬ್ದುಲ್ ಮುತಲ್ಲಿಬರಿಗೂ ವಫಾತಿನ ಸಂದೇಶ ಬಂದು ತಲುಪಿತು. ಅವರ ಜನಾಝ ಹೋಗುತ್ತಿದ್ದಾಗ ರಸೂಲುಲ್ಲಾಹ್(ಸ) ಜೊತೆ ಜೊತೆಯಲ್ಲಿ ಹೋಗುತ್ತಿದ್ದರು ಮತ್ತು ಅಳುತ್ತಿದ್ದರು. ಇದು ಬಾಲ್ಯಾವಸ್ಥೆಯಲ್ಲಿಯೇ ಎದುರಿಸುವ ಮೂರನೇ ದುಃಖದ ಸಂದರ್ಭವಾಗಿತ್ತು. ಆ ಸಮಯ ಅವರ ವಯಸ್ಸು 8 ವರ್ಷವಾಗಿತ್ತು. ಅಬ್ದುಲ್ ಮುತಲ್ಲಿಬ್ ಅವರ ವಯಸ್ಸು ಭಿನ್ನಾಭಿಪ್ರಾಯಗಳೊಂದಿಗೆ 80 ರಿಂದ 140 ವರ್ಷ ಎಂದು ವರದಿಗಳಿಂದ ತಿಳಿದುಬರುತ್ತದೆ.

ಹಲವು ಪತ್ನಿಯರಿಂದ ಅಬ್ದುಲ್ ಮುತಲ್ಲಿಬರಿಗೆ ಅನೇಕ ಪುತ್ರರಿದ್ದರು. ಅವರಲ್ಲಿ ಚಿರಪರಿಚಿತರಾದ ಕೆಲವು ಹೆಸರುಗಳು ಇಂತಿವೆ. ಹಾರಿಸ್. ಝುಬೇರ, ಅಬೂತಾಲಿಬ್, ಅಬೂ ಲಹಬ್, ಅಬ್ದುಲ್ಲ, ಅಬ್ಬಾಸ್ ಮತ್ತು ಹಂಝ. ಅವರಲ್ಲಿ ಅಬೂತಾಲಿಬ್ ಮತ್ತು ಅಬ್ದುಲ್ಲ ಒಂದೇ ತಾಯಿಯ ಮಕ್ಕಳಾಗಿದ್ದರು. ಬಹುಶಃ ಅದೇ ಸಂಬಂಧದಿಂದಾಗಿ ಅಬ್ದುಲ್ ಮುತ್ತಲಿಬ್ ವಫಾತ್ ಹೊಂದುವ ಸಮಯ ಅವರಿಗೆ ಅಬುತಾಲಿಬ್ ಆಶ್ರಯದಲ್ಲಿ ಕೊಟ್ಟರು. ಸಮುದಾಯಿಕ ಕಾರ್ಯಗಳಲ್ಲಿ ಸಖಾಯ ಮತ್ತು ರಿಫಾದ (ನೀರು ಕುಡಿಸುವ ಕಾರ್ಯ ಮತ್ತು ತೆರಿಗೆ ವಸೂಲು ಮಾಡುವ ಕಾರ್ಯ) ಅಬ್ದುಲ್ ಮುತಲ್ಲಿಬರು ನಿರ್ವಹಿಸುತ್ತಿದ್ದರು. ಅದನ್ನು ಅವರು ತನ್ನ ಜೀವಂತ ಮಕ್ಕಳಲ್ಲಿ ಹಿರಿಯ ಮಗನಾದ ಝುಬೇರನಿಗೆ ಒಪ್ಪಿಸಿದರು. ಆ ಕೆಲಸಕ್ಕೆ ಹಣಕಾಸಿನ ಅವಶ್ಯಕತೆ ತುಂಬ ಇತ್ತು. ಆ ಕಾರಣದಿಂದ ಅವರು ತನ್ನ ಕೈಯಿಂದ ಆಗದ ಮಾತೆಂದು ಪರಿಗಣಿಸಿ ಅಬೂ ತಾಲಿಬ್ ಅವರಿಗೆ ಒಪ್ಪಿಸಿದರು. ಆದರೆ ಅಬೂತಾಲಿಬ್ ತುಂಬ ಬಡವರಾಗಿದ್ದರು. ಆದುದರಿಂದ ತೆರಿಗೆಯ ವ್ಯಹವಾರ ಬನುನೋಫಿಲ್ ಅವರ ಪಾಲಾಯಿತು. ಸಖಾಯದ (ನೀರು ಕುಡಿಸುವ) ಕೆಲಸವು ಅಬುತಾಲಿಬ್ ಅಂತಿಮವಾಗಿ ಅಬ್ಬಾಸ್ ಅವರಿಗೆ ವಹಿಸಿಕೊಟ್ಟರು. ಅವರು ಸ್ವಲ್ಪಮಟ್ಟಿಗೆ ಶ್ರೀಮಂತರಾದರು.

ಈ ಸಂದರ್ಭದಲ್ಲಿ ಅನಿವಾರ್ಯವಾಗಿ ವಿವರಿಸುವ ವಿಷಯವೆಂದರೆ ಅಬ್ದುಲ್ ಮುತಲ್ಲಿಬ್ ಅವರು ಜೀವಂತವಾಗಿರುವವರೆಗೆ ಬನು ಹಾಶಮ್ ಅತ್ಯಂತ ಗೌರವಸ್ಥರು ಹಾಗೂ ಆದರಿಣಿಯರಾಗಿದ್ದರು. ಎಲ್ಲ ಖುರೇಶ ಗೋತ್ರಗಳಲ್ಲಿ ಉನ್ನತ ಸ್ಥಾನ ಪಡೆದಿದ್ದರು. ಆದರೆ ಅವರ ವಫಾತ್ ನಂತರ ಹಾಶೀಮರಲ್ಲಿ ಆ ಸ್ಥಾನಕ್ಕೆ ತಕ್ಕುದಾದ ಯಾವ ವ್ಯಕ್ತಿಯು ಕಾಣದಾಯಿತು. ಆದುದರಿಂದ ಖುರೇಶರಿಂದ ಅವರ ಸಾಮಾನ್ಯವಾದ ಮುಖಂಡತ್ವ ಅವರ ಕೈಯಿಂದ ಜಾರಿತು. ಮತ್ತು ಬನು ಹಾಶಿಮನ ಶತ್ರುಗಳಾದ ಬನು ಉಮ್ಮಿಯ ನಿಧಾನವಾಗಿ ಬಲಯುತರಾದರು.

**ಅಬೂ ತಾಲಿಬರ ಪಾಲನೆ ಪೋಷಣೆ**

ಅಬೂ ತಾಲಿಬ್ ಅವರು ತನ್ನ ತಂದೆಯ ವಸಿಯ್ಯತ್ ಅತ್ಯಂತ ಪ್ರಮಾಣಿಕವಾಗಿ ಹಾಗೂ ಒಳ್ಳೆಯ ರೀತಿಯಲ್ಲಿ ನಿರ್ವಹಿಸಿಕೊಟ್ಟರು. ತಮ್ಮ ಮಕ್ಕಳಿಗಿಂತ ಹೆಚ್ಚು ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಪ್ರೀತಿಸಿದರು. ಎಲ್ಲಾ ಸಮಯದಲ್ಲೂ ತನ್ನ ಕಣ್ಣೆದುರಿನಲ್ಲಿ ಇರಿಸಿಕೊಳ್ಳುತ್ತಿದ್ದರು. ರಾತ್ರಿಯ ಸಮಯದಲ್ಲೂ ಸಾಮಾನ್ಯವಾಗಿ ತನ್ನ ಜೊತೆಯಲ್ಲಿ ಮಲಗಿಸಿಕೊಳ್ಳುತ್ತಿದ್ದರು.

**ಸಿರಿಯಾ ಪ್ರವಾಸ ಮತ್ತು ಬಹಿರಾ ರಾಹಿಬನ ಘಟನೆ**

ರಸೂಲುಲ್ಲಾಹ್(ಸ) ಅವರ ವಯಸ್ಸು 12 ವರ್ಷವಾಗಿದ್ದಾಗ ಅಬೂ ತಾಲಿಬ್ ಅವರಿಗೆ ಒಂದು ವ್ಯಾಪಾರ ತಂಡದೊಂದಿಗೆ ಸಿರಿಯಾ ಪ್ರವಾಸ ಮಾಡಬೇಕಾಗಿತ್ತು. ದೂರದ ಹಾಗೂ ಕಠಿಣದ ಪ್ರವಾಸ ಆದ ಕಾರಣ ಅವರು ರಸೂಲುಲ್ಲಾಹ್(ಸ) ರವರನ್ನು ಮಕ್ಕದಲ್ಲಿಯೇ ಬಿಟ್ಟು ಹೋಗಲು ನಿಶ್ಚಯಿಸಿದರು. ಆದರೆ ರಸೂಲುಲ್ಲಾಹ್(ಸ) ರವರಿಗೆ ಅಂಬೂತಾಲಿಬರ ಅಗಲಿಕೆ ಸಹಿಸಲಾಗಲಿಲ್ಲ. ಪ್ರವಾಸಕ್ಕೆ ಹೊರಡಲು ಸಿದ್ಧರಾದಾಗ ಪ್ರೀತಿಭಾವದಿಂದ ಅಬುತಾಲಿಬರನ್ನು ತಬ್ಬಿಕೊಂಡರು ಮತ್ತು ಅಳತೊಡಗಿದರು. ಇದನ್ನು ಕಂಡು ಅಬುತಾಲಿಬರ ಹೃದಯವು ಮರುಗಿತು. ಅವರನ್ನೂ ತನ್ನ ಜೊತೆಯಲ್ಲಿ ಕರೆದುಕೊಂಡು ಹೋದರು.

ಸಿರಿಯಾ ದಕ್ಷಿಣ ಭಾಗದಲ್ಲಿ ಅನ್‌ಸರಾ ಎಂಬ ಒಂದು ಪ್ರಸಿದ್ಧವಾದ ಸ್ಥಳವಿದೆ. ಅಲ್ಲಿಗೆ ತಲುಪಿದಾಗ ಒಂದು ವಿಚಿತ್ರವಾದ ಘಟನೆ ಎದುರಾಯಿತು. ಅಲ್ಲಿ ಒಬ್ಬ ಕ್ರೈಸ್ತ ರಾಹಿಬಿ (ಸನ್ಯಾಸಿ) ವಾಸಿಸುತ್ತಿದ್ದ. ಅವನ ಹೆಸರು ಬಹಿರಾ ಎಂದಾಗಿತ್ತು. ಖುರೇಶರ ತಂಡವು ಅವರ ಆಸ್ಥಾನಕ್ಕೆ ತಲುಪಿತು. ಆ ರಾಹಿಬನು (ಸನ್ಯಾಸಿ) ನೋಡುವುದೇನೆಂದರೆ ಎಲ್ಲ ಕಲ್ಲುಗಳು ಮತ್ತು ವೃಕ್ಷಗಳು ಆಕಸ್ಮತ್ತಾಗಿ ಸಾಷ್ಟಾಂಗ ಪ್ರಣಾಮದಲ್ಲಿದ್ದರು. ದೈವಿಕ ಗ್ರಂಥಗಳಲ್ಲಿ ಒರ್ವ ಪ್ರವಾದಿಯ ಆಗಮನದ ವಿಷಯ ಅವರಿಗೆ ತಿಳಿದಿತ್ತು. ಅವರು ತನ್ನ ಜಾಣ್ಮೆಯ ದೃಷ್ಟಿಯಿಂದ ಭಾವಿಸಿಕೊಂಡರು. ಈ ತಂಡದಲ್ಲಿ ಆ ಪ್ರವಾದಿ ಉಪಸ್ಥಿತರಿರಬಹುದು ಎಂದು. ಅದಾಗ್ಯೂ ಅವರು ಜೋತಿಷ್ಯ ಸಹಾಯದಿಂದ ಹಝ್ರತ್ ರಸೂಲುಲ್ಲಾಹ್(ಸ) ರವರನ್ನು ಗುರುತಿಸಿಕೊಂಡರು. ಮತ್ತು ಅಬೂತಾಲಿಬರಿಗೆ ಇದರ ಸೂಚನೆ ನೀಡಿದರು. ಮತ್ತು ಉಪದೇಶ ನೀಡಿದರು. ಅವರನ್ನು ಗ್ರಂಥಧಾರಿಗಳ ಉಪದ್ರವಗಳಿಂದ ರಕ್ಷಿಸಬೇಕು.

ಜ್ಞಾನಾಧಾರಿತವಾಗಿ ನೋಡಿದರೆ ಈ ಘಟನೆಯ ವರದಿಯು ತುಂಬ ದುರ್ಬಲವಾಗಿದೆ. ಆದರೆ ವಾಸ್ತವದಲ್ಲಿ ಈ ಘಟನೆ ನಡೆದಿದ್ದೆ ಆದಲ್ಲಿ ಆಶ್ಚರ್ಯಪಡುವಂತದ್ದೇನಿಲ್ಲ. ವೃಕ್ಷ ಇತ್ಯಾದಿಗಳ ಸಾಷ್ಟಾಂಗ ಪ್ರಣಾಮ ಮಾಡುವ ರೀತಿಯು ಒಂದು ದಿವ್ಯ ಸ್ವಪ್ನ ಎಂದು ಪರಿಗಣಿಸಬಹುದಾಗಿದೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಸ್ಥಾನಮಾನದ ನೆಲೆಯಲ್ಲಿ ಇದು ಅಸಾಮಾನ್ಯ ಮಾತೇನಲ್ಲ.

**ರಸೂಲುಲ್ಲಾಹ್(ಸ) ರವರ ಮೇಕೆಗಳನ್ನು ಮೇಯಿಸುವುದು**

ಹಝುರತ್ ರಸೂಲುಲ್ಲಾಹ್(ಸ) ಸಿರಿಯಾ ಪ್ರವಾಸದಿಂದ ಮರಳಿ ಬಂದ ಮೇಲೆ ಸಾಮಾನ್ಯವಾಗಿದ್ದಂತೆ ಅಬೂತಾಲಿಬರ ಬಳಿಯೇ ಇರುತ್ತಿದ್ದರು. ಸಾಮಾನ್ಯವಾಗಿ ಅರಬರ ಮಕ್ಕಳು ದನ ಮೇಯಿಸುವ ಕಾರ್ಯ ಮಾಡುತ್ತಿದ್ದರು. ಆದುದರಿಂದ ಆ ಕಾಲದಲ್ಲಿ ರಸೂಲುಲ್ಲಾಹ್(ಸ) ರವರು ಒಮ್ಮೊಮ್ಮೆ ಈ ಕಾರ್ಯವನ್ನು ಮಾಡುತ್ತಿದ್ದರು. ಕುರಿಗಳನ್ನು ಮೇಯಿಸುತ್ತಿದ್ದರು. ಪ್ರವಾದಿತ್ವ ಕಾಲದಲ್ಲಿ ಹೇಳುತ್ತಿದ್ದರು. ಕುರಿಗಳನ್ನು ಮೇಯಿಸುವುದು ಪ್ರವಾದಿಗಳ ಸುನ್ನತ್ ಆಗಿದೆ. ಆದುದರಿಂದ ನಾನೂ ಕುರಿಗಳನ್ನು ಮೇಯಿಸಿರುತ್ತೇನೆ. ಅದಾಗ್ಯೂ ಒಂದು ಸಂದರ್ಭದಲ್ಲಿ ಪ್ರವಾಸದಲ್ಲಿರುವಾಗ(ಸ) ರವರ ಸಹಾಬರು ಅರಣ್ಯದಲ್ಲಿ ಪೀಲು(ಒಂದು ಹಣ್ಣಿನ ಹೆಸರು) ಸಂಗ್ರಹಿಸಿ ತಿನ್ನುತ್ತಿದ್ದರು ರಸೂಲುಲ್ಲಾಹ್(ಸ) ಹೇಳಿದರು. ಕಪ್ಪು ಮೇಲುಗಳನ್ನು ಹುಡುಕಿ ತಿನ್ನಿರಿ. ಏಕೆಂದರೆ ನಾನು ಕುರಿಗಳನ್ನು ಮೇಯಿಸುತ್ತಿರುವಾಗ ನನ್ನ ಅನುಭವವಿದೆ. ಕಪ್ಪು ಬಣ್ಣದ ಪೀಲುಗಳು ತುಂಬ ಉತ್ತಮವಾಗಿರುತ್ತದೆ.

**ಪಾಪಕಾರ್ಯಗಳಿಂದ ದೈವಿಕ ರಕ್ಷಣೆ**

ಅದೇ ಕಾಲದ ಒಂದು ಘಟನೆಯಿದೆ. ಹಝ್ರತ್ ರಸೂಲುಲ್ಲಾಹ್(ಸ) ಒಂದು ರಾತ್ರಿ ತನ್ನ ಕುರಿಗಳ ಮೇಯಿಸುವ ಸಂಗಡಿಗನಿಗೆ ಹೇಳಿದರು. ನೀವು ನನ್ನ ಕುರಿಗಳನ್ನು ಸ್ವಲ್ಪ ನೋಡಿಕೊಳ್ಳಿ. ನಾನು ನಗರಕ್ಕೆ ಹೋಗಿ ಜನರ ಸಭೆಯನ್ನು ನೋಡಿ ಬರುತ್ತೇನೆ. ಆ ದಿನಗಳಲ್ಲಿ ಕಾಯಿದೆಯಿತ್ತು. ರಾತ್ರಿಯ ಸಮಯದಲ್ಲಿ ಜನರು ಯಾವುದೇ ಒಂದು ಮನೆಯಲ್ಲಿ ಸಭೆ ಸೇರಿ ಕಥೆಗಳನ್ನು ಹೇಳುತ್ತಿದ್ದರು ಮತ್ತು ಕವಿತೆ ಕವನಗಳನ್ನು ಹೇಳುವುದರಲ್ಲಿ ಸಮಯ ಕಳೆಯುತ್ತಿದ್ದರು. ಹಝ್ರತ್ ರಸೂಲುಲ್ಲಾಹ್(ಸ) ಬಾಲ್ಯದ ಸಂತೋಷದಲ್ಲಿ ಆ ತಮಾಷೆ ನೋಡಲು ಹೋಗಿದ್ದರು. ಆದರೆ ಅಲ್ಲಾಹನಿಗೆ ಆ ಅಸಭ್ಯ ಕಾರ್ಯದಲ್ಲಿ ಖಾತಮನ್ನಬಿಯೀನ್(ಸ) ರವರ ಪಾಲ್ಗೊಳ್ಳುವಿಕೆ ಹಿಡಿಸಲಿಲ್ಲ. ಅದಾಗ್ಯೂ ಒಂದು ಸ್ಥಳಕ್ಕೆ ರಸೂಲುಲ್ಲಾಹ್(ಸ) ಹೋಗಿದ್ದರು. ಆದರೆ ಅವರಿಗೆ ರಸ್ತೆಯಲ್ಲಿಯೇ ನಿದ್ರೆ ಬಂದುಬಿಟ್ಟಿತು ಮತ್ತು ಮುಂಜಾನೆಯವರೆಗೆ ಮಲಗಿಬಿಟ್ಟರು. ಇನ್ನೊಂದು ಸಂದರ್ಭಲ್ಲೂ ಅವರಿಗೆ ಅದೇ ರೀತಿಯ ಅಭಿಲಾಷೆ ಉಂಟಾಯಿತು. ಆದರೆ ಮತ್ತು ಒಂದು ಅಗೋಚರ ಶಕ್ತಿ ಅದರಿಂದ ರಕ್ಷಿಸಿತು. ಪ್ರವಾದಿತ್ವ ಕಾಲದಲ್ಲಿ ರಸೂಲುಲ್ಲಾಹ್(ಸ) ಹೇಳುತ್ತಿದ್ದರು. ನಾನು ವಯಸ್ಸು ಪೂರ್ತಿಯಲ್ಲಿ ಕೇವಲ ಎರಡು ಸಲ ಆ ರೀತಿಯ ಸಭೆಗಳಲ್ಲಿ ಭಾಗವಹಿಸಲು ನಿಶ್ಚಯಿಸಿದ್ದೆ. ಆದರೆ ಎರಡೂ ಸಲ ತಡೆಯಲ್ಪಟ್ಟೆನು.

**(ಸೀರತ್ ಖಾತಮನ್ನಬಿಯೀನ್ ಪುಟ–93)**

*************

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ನಾವು ನ್ಯಾಯ ನೀತಿಯ ದೃಷ್ಟಿಯಿಂದ ಎಲ್ಲ ಪ್ರವಾದಿಗಳನ್ನು ನೋಡಿದರೆ ಅವರಲ್ಲಿ ಎಲ್ಲರಿಗಿಂತಲೂ ಧೈರ್ಯಶಾಲಿಯೂ ಚೈತನ್ಯಶಾಲಿಯೂ ದೇವನಂದ ಅತ್ಯಂತ ಹೆಚ್ಚು ಪ್ರೀತಿಸಲ್ಪಟ್ಟವರೂ ಆದ ಪ್ರವಾದಿಯಾಗಿ ನಾವು ಒಬ್ಬರನ್ನು ಮಾತ್ರ ಕಾಣುತ್ತೇವೆ. ಅವರೇ ಪ್ರವಾದಿಗಳ ನಾಯಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ, ಅಹ್ಮದ್ ಮುಜ್ತಬಾ(ಸ).

*(ಸಿರಾಜೆ ಮುನೀರ್; ರೂಹಾನೀ ಖಿಝಾಇನ್ ಸಂಪುಟ 12, ಪುಟ 82)*

ಪುಟ ಸಂಖ್ಯೆ 01ರ ಉಳಿದ ಭಾಗ

ವಿಧವೆಯನ್ನು ವಿವಾಹವಾಗಿರುವೆನು ಎಂದು. ಆಗ ಹುಝೂರ್(ಸ) ಹೇಳಿದರು ಕುಮಾರಿಯನ್ನು ವಿವಾಹವಾಗ ಬೇಕಾಗಿತ್ತು ಆಕೆಯು ನಿಮ್ಮೊಂದಿಗೆ ಆಟವಾಡುತ್ತಿದ್ದಳು ನೀವು ಅವಳೊಂದಿಗೆ ಆಟವಾಡಬಹುದಾಗಿತ್ತು. ಅದಕ್ಕೆ ನಾನು ಉತ್ತರಿಸಿದೆ ಹುಝೂರ್! ನನ್ನ ತಂದೆಯವರು ಶಹೀದ್ ಆಗಿದ್ದಾರೆ ಮತ್ತು ಅವರು ನನಗೆ ಅನೇಕ ಚಿಕ್ಕ ಪ್ರಾಯದ ಸಹೋದರಿಯರನ್ನು ಅಗಲಿ ಹೋಗಿದ್ದಾರೆ. ಆದ್ದರಿಂದ ನಾನು ಅವರ ಹಾಗೆ ಪತ್ನಿಯನ್ನು ತರುವುದಕ್ಕೆ ಇಷ್ಟಪಡಲಿಲ್ಲ. ಮತ್ತು ಅವರನ್ನು ಪಾಲನೆ ಮಾಡುವವರು ಯಾರು ಇರುತ್ತಿರಲಿಲ್ಲ. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಮದೀನಕ್ಕೆ ತಲುಪಿದಾಗ. ನಾನು ಮುಂಜಾನೆ ಒಂಟೆಯನ್ನು ತೆಗೆದುಕೊಂಡು ಅವರ ಬಳಿ ಹಾಜರಾದೆನು. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ನನಗೆ ಅದರ ಹಣ ನೀಡಿದರು ಅದರೊಂದಿಗೆ ಆ ಒಂಟೆಯನ್ನು ಸಹ ಉಡುಗೋರೆಯಾಗಿ ನೀಡಿದರು. (ಬುಖಾರಿ ಕಿತಾಬುಲ್ ಜಿಹಾದ್, ಹದೀಖತುಸ್ಸಾಲಿಹೀನ್ ಹದೀಸ್-357)

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಓರ್ವ ಸಹಾಬಿ ಹಝ್ರತ್ ನುಅ್‌ಮಾನ್ ಬಿನ್ ಅಮರ್(ರ) ಆಗಿದ್ದರು. ಹಝ್ರತ್ ನುಅ್‌ಮಾನ್ ಬೈಅತೆ ಅಖಬ ಸಾನಿಯುದಲ್ಲಿ ಎಪ್ಪತ್ತು ಅನ್‌ಸಾರ್‌ಗಳೊಂದಿಗೆ ಸೇರಿದ್ದರು. ಅವರು ಬದರ್, ಉಹುದ್, ಖಂದಕ್ ಮೊದಲಾದ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದ್ದರು. ಒಂದು ವರದಿ ಹೀಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನುಅ್‌ಮಾನ್ ಬಗ್ಗೆ ಒಳ್ಳೆಯ ಮಾತು ಹೊರತು ಬೇರೆ ಏನನ್ನೂ ಹೇಳಬೇಡಿರಿ. ಯಾಕೆಂದರೆ ಅವರು ಅಲ್ಲಾಹನನ್ನೂ ಅವನ ರಸೂಲರನ್ನೂ ಪ್ರೀತಿಸುವವರಾಗಿದ್ದಾರೆ. ಅವರು ತಮಾಷೆ ಮಾಡುವ ಸ್ವಭಾವ ಹೊಂದಿದ್ದರು. ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಒಬ್ಬ ಗ್ರಾಮೀಣ ಅರಬಿ ಬಂದರು. ಅವರು ತನ್ನ ಒಂಟೆಯನ್ನು ಅಂಗಳದಲ್ಲಿ ಕಟ್ಟಿ ಮಸ್‌ಜಿದ್‌ನೊಳಗೆ ಹೋದರು. ಆಗ ಕೆಲವು ಸಹಾಬರು ಹಝ್ರತ್ ನುಅ್‌ಮಾನ್‌ರೊಂದಿಗೆ ಹೇಳಿದರು: ನೀನು ಈ ಒಂಟೆಯನ್ನು ವಧಿಸಿದರೆ ನಾವು ಅದರ ಮಾಂಸ ತಿನ್ನುವೆವು. ನಮಗೆ ಮಾಂಸ ತಿನ್ನುವ ಆಸೆ ಬಹಳ ಇದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಇದರ ಬಗ್ಗೆ ದೂರಿತ್ತರೆ ಅವರು ಅದಕ್ಕೆ ಪರಿಹಾರ ನೀಡುವರು. ವರದಿಗಾರ ಹೇಳುತ್ತಾರೆ: ಹಝ್ರತ್ ನುಅ್‌ಮಾನ್ ಅವರ ಮಾತುಗಳನ್ನು ಅಂಗೀಕರಿಸಿ ಒಂಟೆಯನ್ನು ವಧಿಸಿದರು. ಗ್ರಾಮೀಣ ಅರಬಿ ಮಸ್‌ಜಿದ್‌ನಿಂದ ಹೊರಗೆ ಬಂದಾಗ ತನ್ನ ಒಂಟೆಯ ಸ್ಥಿತಿಯನ್ನು ಕಂಡು ಬೊಬ್ಬಿಟ್ಟನು. ಓ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನನ್ನ ಒಂಟೆ ವಧಿಸಲ್ಪಟ್ಟಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೊರಗೆ ಬಂದು ಕೇಳಿದರು: ಹೀಗೆ ಮಾಡಿದುದು ಯಾರು? ಜನರು ಹೇಳಿದರು: ನುಅ್‌ಮಾನ್ ಹಾಗೆ ಮಾಡಿದರು ಎಂದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ನುಅ್‌ಮಾನ್‌ರನ್ನು ಹುಡುಕಲು ಹೊರಟರು. ಏಕೆಂದರೆ ಹಝ್ರತ್ ನುಅ್‌ಮಾನ್ ಅಲ್ಲಿಂದ ಹೋಗಿ ಅಡಗಿ ಕುಳಿತಿದ್ದರು. ಅವರು ಹಝ್ರತ್ ಝುಬಾಬ್ ಬಿನ್ತ್ ಝುಬೈರ್ ಬಿನ್ ಅಬ್ದುಲ್ ಮುತ್ತಲಿಬರ ಬಳಿ ಅಡಗಿ ಕುಳಿತಿರುವುದಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಂಡರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನೀನು ಈ ರೀತಿ ಏಕೆ ಮಾಡಿದೆ? ಹಝ್ರತ್ ನುಅ್‌ಮಾನ್ ಹೇಳಿದರು: ನನ್ನ ಬಗ್ಗೆ ತಮಗೆ ತಿಳಿಸಿದವರೇ ನನ್ನನ್ನು ಉತ್ತೇಜಿಸಿ ಒಂಟೆಯನ್ನು ವಧಿಸುವಂತೆ ಮಾಡಿದರು. ಅದಕ್ಕೆ ಪರಿಹಾರ ಧನವನ್ನು ತಾವು ನೀಡುವಿರೆಂದು ಅವರು ಹೇಳಿದ್ದರು. ಈ ಮಾತುಗಳನ್ನು ಕೇಳಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ನುಅ್‌ಮಾನರ ಮುಖವನ್ನು ಸ್ಪರ್ಶಿಸಿ ಮಂದಹಾಸ ಬೀರಿದರು. ಅವರು ಆ ಗ್ರಾಮೀಣ ಅರಬಿಗೆ ಒಂಟೆಯ ಬೆಲೆಯಷ್ಟು ಹಣ ನೀಡಿದರು.

ಮದೀನದಲ್ಲಿ ಯಾರಾದರೂ ದಾರಿಹೋಕ ವ್ಯಾಪಾರಿ ಪ್ರವೇಶಿಸಿದರೆ ಹಝ್ರತ್ ನುಅ್‌ಮಾನ್ ಅವರಿಂದ ಏನಾದರೂ ಖರೀದಿಸಿ ಅದನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪಾರಿತೋಷಕವಾಗಿ ನೀಡುತ್ತಿದ್ದರು. ಆ ವ್ಯಾಪಾರಿ ವಸ್ತುವಿನ ಹಣವನ್ನು ಕೇಳಿದರೆ ಅವರನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಕರೆದುಕೊಂಡು ಬಂದು, ಇವರಿಗೆ ನಾನು ನಿಮಗೆ ಕೊಟ್ಟ ವಸ್ತುವಿನ ಹಣ ನೀಡಿರಿ ಎಂದು ಹೇಳುತ್ತಿದ್ದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳುತ್ತಿದ್ದರು: ನೀನು ಈ ವಸ್ತುವನ್ನು ನನಗೆ ಪಾರಿತೋಷಿಕವಾಗಿ ಕೊಟ್ಟಿರಲಿಲ್ಲವೇ? ಆಗ ಹಝ್ರತ್ ನುಅ್‌ಮಾನ್ ಹೇಳುತ್ತಿದ್ದರು: ಅಲ್ಲಾಹನ ಸಂದೇಶವಾಹಕರೇ, ಅಲ್ಲಾಹನಾಣೆ ಆ ವಸ್ತುವನ್ನು ಖರೀದಿಸಲು ನನ್ನಲ್ಲಿ ಹಣವಿರಲಿಲ್ಲ. ಆದರೆ ನನ್ನ ಇಚ್ಛೆ ಏನತ್ತೆಂದರೆ ಅದು ತಿನ್ನುವ ವಸ್ತುವಾಗಿದ್ದರೆ ತಾವು ಅದನ್ನು ತಿನ್ನಬೇಕು. ತೆಗೆದಿಟ್ಟುಕೊಳ್ಳುವ ವಸ್ತುವಾಗಿದ್ದರೆ ತಾವು ಅದನ್ನು ಇಟ್ಟುಕೊಳ್ಳಬೇಕು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಗುಳು ನಗುತ್ತಾ ಆ ವಸ್ತುವಿನ ಹಣವನ್ನು ಅದರ ಮಾಲಿಕನಿಗೆ ಕೊಡಲು ಆಜ್ಞಾಪಿಸುತ್ತಿದ್ದರು. (ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಖುತ್‌ಬ ಜುಮುಅ 13-09-2019)

ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಓರ್ವ ನಿಷ್ಠಾವಂತ ಸಹಾಬಿ ಹಝ್ರತ್ ಅಬ್ದುಲ್ಲಾ(ರ) ಇದ್ದರು. ಅವರ ತಂದೆಯ ಹೆಸರು ಅಬ್ದುಲ್ಲಾ ಬಿನ್ ಉಬೈ ಬಿನ್ ಸುಲೂಲ್ ಎಂದಾಗಿತ್ತು ಆತನು ಕಪಟವಿಶ್ವಾಸಿಗಳ ಸರದಾರನಾಗಿದ್ದನು. ಆತನು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ತೊಂದರೆ ನೀಡಲು ಸಿಗುವ ಯಾವುದೇ ಅವಕಾಶ ಬಿಡುತ್ತಿರಲಿಲ್ಲ.

ಉಹದ್ ಯುದ್ಧದ ಸಂದರ್ಭದಲ್ಲಿ ಅಬ್ದುಲ್ಲಾ ಬಿನ್ ಉಬೈ ಬಿನ್ ಸುಲೂಲ್ ಯುದ್ಧದಲ್ಲಿ ಬಾಗವಹಿಸಿದ ತನ್ನ 300 ಜನರನ್ನು ಯುದ್ಧ ಪ್ರಾರಂಭವಾಗುತ್ತಿರುವ ಸಂದರ್ಭದಲ್ಲಿ ಅಲ್ಲಿಂದ ಹಿಂದಿರುಗಿಸಿಕೊಂಡು ಹೋದನು. ಆಗ ಮುಸ್ಲಿಮರ ಸಂಖ್ಯೆ 1000 (ಸಾವಿರ) ಇದ್ದದ್ದು ಈತನು ತನ್ನ ಜನರನ್ನು ಹಿಂದಿರುಗಿಸಿದ ಕಾರಣ ಕೇವಲ 700ಕ್ಕೆ ಇಳಿಯಿತು.

5ನೆ ಹಿಜರಿಯಲ್ಲಿ ಬನೂ ಮುಸ್ತಲಿಖ್ ಯುದ್ಧವಾಯಿತು. ಆ ಸಂದರ್ಭದಲ್ಲಿ ಅನ್ಸಾರ್ ಹಾಗೂ ಮುಹಾಜಿರೀನರ ಮಧ್ಯೆ ಒಂದು ತಪ್ಪು ತಿಳುವಳಿಕೆಯ ಕಾರಣದಿಂದ ಯುದ್ಧವಾಗುವ ಸಾಧ್ಯತೆ ಇತ್ತು ಆದರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ದೂರ ದೃಷ್ಟಿಯ ಕಾರಣ ಈ ಅಪಾಯಕಾರಿಯಾದ ಸಂಗತಿಯಿಂದ ಮುಸ್ಲಿಮರನ್ನು ರಕ್ಷಿಸಲಾಯಿತು. ಅಬ್ದುಲ್ಲಾ ಬಿನ್ ಉಬಯ್ಯ್‌ಗೆ ಈ ಘಟನೆಯ ಬಗ್ಗೆ ತಿಳಿಯಿತು. ಅವನು ಈ ಕಲಹವನ್ನು ಪುನಃ ಉತ್ತೇಜಿಸಲು ಪ್ರಯತ್ನಿಸಿದನು. ಅವನು ತನ್ನ ಸಂಗಡಿಗರನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಮತ್ತು ಮುಸ್ಲಿಮರ ವಿರುದ್ಧ ಬಹಳ ಉದ್ರೇಕಿಸಿದನು. ಆ ದುಷ್ಟನು ಇಲ್ಲಿಯ ತನಕ ಹೇಳಿದನು: **ಲ ಇನ್ ರಜಅ್‌ನಾ ಇಲಲ್ ಮದೀನತಿ ಲ ಯುಖ್‌ರಿಜನ್ನಲ್ ಅಅಝ್ಝು ಮಿನ್‌ಹಲ್ ಅಝುಲ್ಲ. (ಅಲ್‌ಮುನಾಫಿಖೂನ್:9)** ಪವಿತ್ರ ಖುರ್‌ಆನಿನಲ್ಲಿ ಸೂರ ಮುನಾಫಿಖೂನಿನಲ್ಲಿದೆ ನೋಡಿರೀ! ನಾವು ಮದೀನಕ್ಕೆ ತಲುಪೋಣ ಅನಂತರ ಅತ್ಯಂತ ಗೌರವಾರ್ಹ ವ್ಯಕ್ತಿ ಅತ್ಯಂತ ಹೀನ ವ್ಯಕ್ತಿಯನ್ನು ನಗರದಿಂದ ಹೊರ ಹಾಕುವನು? ಅಷ್ಟರಲ್ಲೆ ಸ್ವಲ್ಪ ಸಮಯ ಕಳೆದಾಗ ಅಬ್ದುಲ್ಲಾ ಬಿನ್ ಉಬಯ್‌ನ ಪುತ್ರ ಹಝ್ರತ್ ಅಬ್ದುಲ್ಲಾ(ರ) ಗಾಬರಿಗೊಂಡು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಬಂದರು. ಅವರು ನಿಷ್ಠಾವಂತ ಸಹಾಬಿಯಾಗಿದ್ದರು. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ತಾವು ನನ್ನ ತಂದೆಯ ಧಿಕ್ಕಾರ ಭಾವ ಮತ್ತು ಕಲಹಗಾರಿಕೆ ಕಾರಣ ಅವರನ್ನು ಹತ್ಯೆ ಮಾಡಲು ಇಚ್ಛಿಸುತ್ತೀರೆಂಬ ಸಮಾಚಾರವನ್ನು ನಾನು ಆಲಿಸಿದೆ. ನೀವು ಹಾಗೆ ತೀರ್ಮಾನ ಮಾಡಿದ್ದರೆ ನನಗೆ ಅನುಮತಿ ನೀಡಿರಿ. ಈಗಲೇ ನಾನು

ನನ್ನ ತಂದೆಯ ತಲೆ ಕಡಿದು ತಮ್ಮ ಪಾದಗಳಲ್ಲಿ ಹಾಕುವೆನು. ನೀವು ಬೇರೆ ಯಾರಿಗೂ ಹಾಗೆ ಮಾಡಲು ಆಜ್ಞೆ ನೀಡಬೇಡಿರಿ. ಏಕೆಂದರೆ ಹಾಗೆ ಮಾಡಿದರೆ ಅಜ್ಞಾನ ಕಾಲದ ಯಾವುದಾದರೂ ರಕ್ತನಾಳ ಮುಂದೊಂದು ದಿನ ನನ್ನ ದೇಹದಲ್ಲಿ ಉತ್ತೇಜಿಸುವಾಗ ನಾನು ನನ್ನ ತಂದೆಯ ಹಂತಕನಿಗೆ ಏನಾದರೂ ಹಾನಿ ಉಂಟುಮಾಡಬಹುದು. ಹಾಗೆ ಮಾಡಿದರೆ ನಾನು ಅಲ್ಲಾಹನ ಸಂತೃಪ್ತಿ ಆಶಿಸುತ್ತಿದ್ದು ಕೂಡ ನರಕಕ್ಕೆ ಬೀಳುವೆನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರನ್ನು ಸಮಾಧಾನ ಪಡಿಸಿ ಹೇಳಿದರು: ಖಂಡಿತವಾಗಿಯೂ ನಾವು ಹಾಗೆ ನಿರ್ಧರಿಸಿಲ್ಲ. ನಾನು ನಿಮ್ಮ ಪಿತನೊಂದಿಗೆ ಮೃದುವಾಗಿಯೂ ಔದಾರ್ಯದಿಂದಲೂ ವರ್ತಿಸುವೆನು. ಗಮನಿಸಬೇಕಾದ ವಿಷಯವೇನೆಂದರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಈ ಸಂದರ್ಭದಲ್ಲಿ ಕಪಟ ವಿಶ್ವಾಸಿಗಳ ಸರದಾರನಾದ ಅಬ್ದುಲ್ಲಾ ಬಿನ್ ಉಬೈ ಬಿನ್ ಸುಲೂ ಅವರ ಪುತ್ರ ಅಬ್ದುಲ್ಲಾ(ರ) ರವರೊಂದಿಗೆ ಎಂತಹ ಪ್ರೀತಿ ಮತ್ತು ಸಹಾನುಭೂತಿಯಿಂದ ವರ್ತಿಸಿದರು.

ಕಪಟ ವಿಶ್ವಾಸಿಗಳು ಒಂದು ಅತ್ಯಂತ ಕೊಳಕು ಸುಳ್ಳು ಆರೋಪವನ್ನು ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾರ ವಿರುದ್ಧ ಮಾಡಿದ್ದರು, ಇಫ್‌ಕ್ ಘಟನೆ ಸಂಭವಿಸಿತು. ಆ ಸುಳ್ಳನ್ನು ಸೃಷ್ಟಿಸಿದವನು ಸಹ ಅಬ್ದುಲ್ಲಾ ಬಿನ್ ಉಬಯ್ಯ್ ಆಗಿದ್ದನು. ಇದು ಸಹ ಬನೂ ಮುಸ್ತಲಿಖ್ ಯುದ್ಧದಿಂದ ಮರಳಿ ಬರುತ್ತಿದ್ದ ಕಾಲದ್ದಾಗಿದೆ. ಆದರೆ ಈ ಕಪಟ ವಿಶ್ವಾಸಿಗಳ ನಾಯಕನು ಹಝ್ರತ್ ಆಯಿಶ(ರ)ರ ವಿರುದ್ಧ ಅಂತಹ ಅಪವಾದ ಹೊರಿಸಿದ್ದರೂ ಅವನೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಗೆ ವರ್ತಿಸಿದರು? ಹಝ್ರತ್ ಅಬ್ದುಲ್ಲಾ(ರ) ಅವರ ತಂದೆ ಅಬ್ದುಲ್ಲಾ ಬಿನ್ ಅಬಿಯವರು ನಿಧನ ಹೊಂದಿದಾಗ ಅವರು ಪ್ರವಾದಿ(ಸ) ಅವರ ಸೇವೆಯಲ್ಲಿ ಹಾಜರಾಗಿ ತನ್ನ ತಂದೆಯನ್ನು ದಫನ್ ಮಾಡಲು ಪ್ರವಾದಿ(ಸ) ಅವರ ಅಂಗಿಯನ್ನು ಕೇಳಿದರು ಹೀಗೆ ಮಾಡಿದರೆ ತನ್ನ ತಂದೆಯೊಂದಿಗೆ ಅಲ್ಲಾಹನು ಪ್ರಶ್ನಿಸಿದಾಗ ಸರಳತೆ ಉಂಟಾಗಬಹುದು ಎಂದು ಯೋಚಿಸಿದರು. ಅದಕ್ಕೆ ಪ್ರವಾದಿ(ಸ) ಅವರು ತಮ್ಮ ಅಂಗಿಯನ್ನು ನೀಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವನ ಜನಾಝ ನಮಾಝ್ ನಿರ್ವಹಿಸಲು ನಿಂತಾಗ ಹಝ್ರತ್ ಉಮರ್(ರ) ಅವರ ಬಳಿಗೆ ತಕ್ಷಣ ಹೋಗಿ ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ತಾವು ಅಬ್ದುಲ್ಲಾನ ಜನಾಝ ನಮಾಝ್ ನಿರ್ವಹಿಸುವಿರೇನು? ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಗುಳು ನಗುತ್ತಾ ನನ್ನೊಡನೆ ದೂರ ಸರಿಯಲು ಹೇಳಿದರು. ನಾನು ಬಹಳ ಒತ್ತಾಯಿಸಿದಾಗ ಅವರು ಹೇಳಿದರು: ನನಗೆ ಅಧಿಕಾರ ನೀಡಲಾಗಿದೆ. ಆ ಅಧಿಕಾರ ನಾನು ವಹಿಸಿಕೊಂಡಿದ್ದೇನೆ. ನಾನು ಅವನಿಗೋಸ್ಕರ ಎಪ್ಪತ್ತು ಸಾರಿಗಿಂತ ಹೆಚ್ಚು ಸಾರಿ ಕ್ಷಮೆಯನ್ನು ಯಾಚಿಸಿದರೆ ಅವನು ಕ್ಷಮಿಸಲ್ಪಡುವನಾದರೆ ನಾನು ಖಂಡಿತವಾಗಿ ಅವನಿಗೋಸ್ಕರ ಎಪ್ಪತ್ತಕ್ಕಿಂತ ಹೆಚ್ಚು ಸಾರಿ ಕ್ಷಮೆಯನ್ನು ಯಾಚಿಸುವೆನು. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವನ ಜನಾಝ ನಮಾಝ್ ನಿರ್ವಹಿಸಿದರು. ತದನಂತರ ಅಲ್ಲಾಹನು ಇಂತಹವರ ಜನಾಝ ನಮಾಝನ್ನು ನಿರ್ವಹಿಸುವುದಕ್ಕೆ ನಿಷೇಧಿಸಿದಾಗ ಪ್ರವಾದಿ(ಸ) ಅವರು ಮುನಾಫಿಕೀನರ ಜನಾಝ ನಮಾಝ್ ನಿರ್ವಹಿಸಲಿಲ್ಲ. ಇಂತಹ ವರದಿಗಳು ಸಹೀಹ್ ಬುಖಾರಿಯಿಂದಲೂ ವರದಿ ಆದರೂ ಇದು ಅಧಿಕೃತ ಎಂದೆನಿಸುವುದಿಲ್ಲ. ಪ್ರವಾದಿ(ಸ) ಅವರು ರಹಮತುಲ್ಲಿಲ್ ಆಲಮೀನ್ ಆಗಿದ್ದರು. ಕೇವಲ ಇಂತಹ ವರ್ತನೆಯ ಕಾರಣದಿಂದ ಆಗಿರಲಿಲ್ಲ. ಏಕೆಂದರೆ ಒಂದನೆಯದು ಕೆಲವರ ಪ್ರಕಾರ ಆ ಸಂದರ್ಭದಲ್ಲಿ ಬದರ್ ಯುದ್ಧದಲ್ಲಿ ಅವನು ಮುಸ್ಲಿಮ್ ಸಹಾ ಆಗಿರಲಿಲ್ಲ. ಒಂದು ವೇಳೆ ಅವನು ತನ್ನ ಅಂಗಿ ತೆಗೆದು ನೀಡಿದ್ದರೂ ಪ್ರವಾದಿ(ಸ) ಅವರು ಸಹ ಅವನ ಮೇಲೆ ಬಹಳಷ್ಟು ಉಪಕಾರಗಳು ಮಾಡಿದ್ದರು. ಇದು ದಯೆಯ ವರ್ತನೆ ಆಗಿತ್ತು. ಹೀಗಾಗಿ ನನ್ನ ಪ್ರಕಾರ ಹಝ್ರತ್ ಅಬ್ದುಲ್ಲಾ(ರ) ಅವರ ಕಾರಣದಿಂದ ಪ್ರವಾದಿ(ಸ) ಅವರು ದಯೇ ತೋರಿದರು. ಏಕೆಂದರೆ ಅವನ ಪುತ್ರ ಹಝ್ರತ್ ಅಬ್ದುಲ್ಲಾ(ರ) ಅವರು ಪ್ರತಿಯೊಂದು ವಿಷಯಗಳಲ್ಲಿ ಇಸ್ಲಾಮಿನ ವಿಶಾಲತೆ ತೋರಿಸಿದ್ದರು, ಪ್ರವಾದಿ(ಸ) ಅವರೊಂದಿಗೆ ವಿನಯ ತೋರಿಸಿದರು, ತನ್ನ ಈಮಾನನ್ನು ಸಂರಕ್ಷಿಸಿದರು, ತನ್ನ ತಂದೆಯೊಂದಿಗೆ ಕಠೋರವಾಗಿ ವರ್ತಿಸಿದರು. ಆದ್ದರಿಂದ ಪುತ್ರನ ಮನಸ್ಸನ್ನು ನೋಯಿಸಬಾರದೆಂದು ಅಥವಾ ಪ್ರವಾದಿ(ಸ) ಅವರು ತನ್ನ ಅಂಗಿಯನ್ನು ನೀಡಿದ್ದರಿಂದ ಆಸೆ ಆಯಿತು. (ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಖುತ್‌ಬ ಜುಮುಅ 15–11–2019)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

“ನಾನು ಯಾವಾಗಲೂ ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್(ಸ) (ಸಾವಿರ ಸಾವಿರ ಇಷ್ಟಾಶೀರ್ವಾದಗಳೂ ಶಾಂತಿಯೂ ಅವರ ಮೇಲೆ ಸುರಿಯಲ್ಪಡಲಿ) ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು! ಅವರ ಉನ್ನತಸ್ಥಾನದ ಕೊನೆ ಎಲ್ಲಿದೆಯೆಂದು ತಿಳಿಯಲು ಸಾಧ್ಯವಿಲ್ಲ. ಅವರ ಪವಿತ್ರ ಪ್ರಭಾವದ ಅಂದಾಜು ಮಾಡುವುದು ಸಹ ಮನುಷ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಅವರ ಸ್ಥಾನಮಾನಗಳನ್ನು ಗುರುತಿಸಬೇಕಾದ ರೀತಿಯಲ್ಲಿ ಗುರುತಿಸಲಾಗಿಲ್ಲ ಎಂಬುದು ದುಃಖಕರವಾದ ಸಂಗತಿಯಾಗಿದೆ. ಏಕಾದೇವಾರಾಧನೆ ಲೋಕದಿಂದ ಕಣ್ಮರೆಯಾಗಿದ್ದಾಗ ಅದನ್ನು ಮರಳಿ ತಂದ ಒಬ್ಬನೇ ಒಬ್ಬ ಪಹಿಲ್ವಾನ್ ಅವರೇ ಆಗಿದ್ದಾರೆ. ಅವರು ದೇವನೊಂದಿಗೆ ಅತ್ಯಂತ ಉನ್ನತ ಮಟ್ಟದ ಪ್ರೀತಿಯನ್ನು ಹೊಂದಿದ್ದರು. ಮಾನವರ ಹಿತಕಾಂಕ್ಷೆಯಲ್ಲಿ ಅತ್ಯುನ್ನತ ಮಟ್ಟವನ್ನು ತಲಪಿ ಅವರ ಜೀವ ಕರಗಿತು. ದೇವನಿಗೆ ಅವರ ಹೃದಯದ ರಹಸ್ಯ ತಿಳಿದಿದ್ದುದರಿಂದ ಅವರಿಗೆ ಎಲ್ಲ ಪ್ರವಾದಿಗಳ ಮೇಲೆಯೂ (ಅವರ) ಹಿಂದಿನ ಮತ್ತು ಅನಂತರದ ಎಲ್ಲರ ಮೇಲೆಯೂ ಅವನು ಶ್ರೇಷ್ಠತೆಯನ್ನು ಅನುಗ್ರಹಿಸಿದನು. ಅವರ ಅಭಿಲಾಷೆಗಳನ್ನು ಅವರ ಜೀವಿತದಲ್ಲಿಯೇ ಅವನು ಈಡೇರಿಸಿಕೊಟ್ಟನು.” (ಹಖೀಖತುಲ್ ವಹಿ, ರೂಹಾನಿ ಖಝಾಇನ್ ಸಂಪುಟ 22, ಪುಟ 118 – 119)

اَللّٰهُمَّ صَلِّ عَلٰى مُحَمَّدٍ وَّعَلٰى اٰلِ مُحَمَّدٍ وَبَارِكْ وَسَلِّمْ اِنَّكَ حَمِيْدٌ مَّجِيْدٌ۔
وَاٰخِرُ دَعْوَانَا اَنِ الْحَمْدُ لِلّٰهِ رَبِّ الْعَالَمِيْنَ۔

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ಅಲಾ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್. ವಆಖಿರುದ್ದಅ್‌ವನಾ ಅನಿಲ್ ಹಮ್‌ದು ಲಿಲ್ಲಾಹಿ ರಬ್ಬಿಲ್ ಆಲಮೀನ್.**

**(ಮನ್ಸೂರ್ ಅಹ್ಮದ್ ಅಸ್ರೂರ್)**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನನ್ನ ನೇತಾರರೂ ನನ್ನ ಮಾಲಿಕರೂ ಪ್ರವಾದಿಗಳೆಲ್ಲರಿಗೂ ಅಭಿಮಾನವಾಗಿರುವವರೂ ಸೃಷ್ಟಿಗಳಲ್ಲಿ ಶ್ರೇಷ್ಠರೂ ದೇವನಿಂದ ಆಯ್ಕೆಗೊಂಡವರೂ ಆದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮಾರ್ಗವನ್ನು ನಾನು ಅನುಸರಿಸದೆ ಇರುತ್ತಿದ್ದರೆ ನನಗೆ ಈ ಅನುಗ್ರಹ ದೊರೆಯುವುದು ಅಸಾಧ್ಯವಾಗುತ್ತಿತ್ತು. ನಾನು ಪಡೆದುದೆಲ್ಲವೂ ಅವರನ್ನು ಹಿಂಬಾಲಿಸಿದುದರಿಂದ ಪಡೆದುದಾಗಿವೆ. ಆ ಪೈಗಂಬರನ್ನು(ಸ) ಅನುಸರಣೆ ಮಾಡದೆ ದೇವನನ್ನು ತಲಪಲು ಮತ್ತು ಪರಿಪೂರ್ಣ ಜ್ಞಾನ ಗಳಿಸಲು ಯಾವುದೇ ಮನುಷ್ಯನಿಗೆ ಸಾಧ್ಯವಿಲ್ಲವೆಂದು ನಾನು ಅನುಭವಸಿದ್ಧವಾದ ಪರಿಪೂರ್ಣ ಜ್ಞಾನದಿಂದ ಅರಿತಿರುವೆನು. ಹಝ್ರತ್ ಪೈಗಂಬರನ್ನು(ಸ) ನಿಷ್ಠಾಪೂರ್ಣವಾಗಿ ಅನುಸರಿಸುವುದರಿಂದ ಎಲ್ಲದಕ್ಕಿಂತಲೂ ಮೊದಲು ನಿಮ್ಮ ಹೃದಯದಲ್ಲುಂಟಾಗುವ ಪರಿವರ್ತನೆ ಏನೆಂದು ನಿಮಗೆ ನಾನು ತಿಳಿಸಲು ಇಲ್ಲಿ ಬಯಸುತ್ತೇನೆ: ನಿಮ್ಮ ಹೃದಯ ನಿಷ್ಕಳಂಕವಾಗುತ್ತದೆ; ಐಹಿಕ ಸುಖದ ಪ್ರೇಮ ನಿಮ್ಮ ಹೃದಯಗಳಿಂದ ದೂರ ಸರಿಯುತ್ತದೆ. ನಿಮ್ಮ ಹೃದಯ ಅನಂತವಾದ ದೈವಿಕ ಆನಂದವನ್ನು ಆಶಿಸುತ್ತಾ ಇರುತ್ತದೆ.ಅನಂತರ ನಿಷ್ಕಳಂಕವಾದ ಹೃದಯದ ಕಾರಣದಿಂದ ಪವಿತ್ರ ಮತ್ತು ಪರಿಪೂರ್ಣವಾದ ದೈವಿಕ ಪ್ರೇಮ ಲಭಿಸುತ್ತದೆ. ಈ ವರದಾನಗಳೆಲ್ಲ ಹಝ್ರತ್ ಪೈಗಂಬರನ್ನು(ಸ) ಅನುಸರಣೆ ಮಾಡುವುದರಿಂದ ವಾರಿಸುಹಕ್ಕಾಗಿ ದೊರೆಯುತ್ತವೆ."

***(ಹಖೀಖತುಲ್ ವಹ್ಯ್; ರೂಹಾನೀ ಖಝಾಇನ್ ಸಂಪುಟ 22, ಪುಟ 64 – 65)***

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.

**ಸರೆದಾರಮ್ ಫಿದಾ ಎ ಖಾಕೆ ಅಹ್ಮದ್(ಸ)**
**ದಿಲಮ್ ಹರ್ ವಖ್ತೆ ಖುರ್‌ಬಾನೆ ಮುಹಮ್ಮದ್(ಸ)**

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ರಚನೆ

ಅಜಬ್ ನೂರೇಸ್ತ್ ದರ್ ಜಾನೆ ಮುಹಮ್ಮದ್(ಸ)
ಅಜಬ್ ಲಾಲೇಸ್ತ್ ದರ್‌ಕಾನೆ ಮುಹಮ್ಮದ್(ಸ)

ಮುಹಮ್ಮದ್(ಸ) ರವರ ಜೀವದಲ್ಲಿ ಒಂದು ಅಪೂರ್ವ ಪ್ರಕಾಶವಿದೆ. ಮುಹಮ್ಮದ್(ಸ) ರವರ ಗಣಿಯಲ್ಲಿ ಒಂದು ಅಗಾದವಾದ ವಿಸ್ಮಯಕರವಾದ ಮುತ್ತು ಇದೆ.

ಅಜಬ್ ದಾರಮ್ ದಿಲೆ ಆಂ ನಾ ಕಿಸಾಂರಾ
ಕೆ ರೂತಾಬಂದ್ ಅಝ್ ಖ್ವಾನೆ ಮುಹಮ್ಮದ್(ಸ)

ನಾನು ಆ ಅಯೋಗ್ಯರ ಮನಸ್ಸಿನ ಬಗ್ಗೆ ಅಚ್ಚರಿಪಡುತ್ತೇನೆ.ಅವರು ಮುಹಮ್ಮದ್(ಸ) ರವರು ಹಾಸಿದ ಕರವಸ್ತ್ರದಿಂದ (ದಸ್ತರ್ಖಾನಿಯಿಂದ) ಮುಖ ತಿರುಗಿಸುತ್ತಾರೆ.

ನದಾನಮ್ ಹೇಚ್ ನಫ್ಸೆ ದರ್ದ್ ವ ಆಲಮ್
ಕೆ ದಾರದ್ ಶೌಕತ್ ವ ಶಾನೆ ಮುಹಮ್ಮದ್(ಸ)

ಎರಡೂ ಲೋಕಗಳಲ್ಲಿ ನಾನು ಮುಹಮ್ಮದ್(ಸ) ರವರಂತಹ ಯಾವ ವೈಭಯುತ ವ್ಯಕ್ತಿಯನ್ನು ಕಂಡಿಲ್ಲ.

ಖುದಾ ಖುದ್ ಸೋಝ್ ದಾಂ ಕರ್ಮದನಿರಾ
ಕೆ ಬಾಶದ್ ಅಝ್ ಅದುವ್ವಾನೆ ಮುಹಮ್ಮದ್(ಸ)

ಮುಹಮ್ಮದ್(ಸ) ರವರ ಶತ್ರುಗಳೊಂದಿಗೆ ಕೈಜೋಡಿಸುವ, ಅಂತಹ ಕ್ರಿಮಿಗಳನ್ನು ಅಲ್ಲಾಹು ಸ್ವಯಂ ಸುಟ್ಟು ಹಾಕುವನು.

ಅಗರ್ ಖ್ವಾಹಿ ನಿಜಾತ್ ಅಝ್ ಮಸ್ತಿ ಏ ನಫ್ಸ್
ಬಯಾ ದರ್ ಝ್ಯೈಲೆ ಮಸ್ತಾನೆ ಮುಹಮ್ಮದ್(ಸ)

ನೀನು ನಿನ್ನ ಆತ್ಮದ ಮೋಹ ಜಾಲದಿಂದ ಮುಕ್ತಿ ಬಯಸುವವನಾದರೆ ಮುಹಮ್ಮದ್(ಸ) ರವರನ್ನು ಸ್ನೇಹಿಸುವವರೊಂದಿಗೆ ಸೇರು.

ಅಙರ್ ಖ್ವಾಹಿ ಕೆ ಹಖ್ ಗೋಯದ್ ಸನಾಯತ್
ಬಶವಾಝು ದಿಲ್ ಸನಾ ಖ್ವಾನೆ ಮುಹಮ್ಮದ್(ಸ)

ಅಲ್ಲಾಹನು ನಿನ್ನನ್ನು ಪ್ರಶಂಸಿಸಬೇಕೆಂದು ನೀನು ಬಯಸುವವನಾದರೆ, ಮನದಾಳದಿಂದ ಮುಹಮ್ಮದ್(ಸ) ರವರನ್ನು ಸ್ತುತಿಸುವವನಾಗು.

ಅಗರ್ ಖ್ವಾಹಿ ದಲೀಲೆ ಆಶಿಖಸ್ ಬಾಶ್
ಮುಹಮ್ಮದ್ ಹಸ್ತ್ ಬುರ್‌ಹಾನೆ ಮಿಹಮ್ಮದ್(ಸ)

ನೀನು ಅವರ ಸತ್ಯ ಸಾಕ್ಷ್ಯಗಳನ್ನು ಬಯಸುವವನಾದರೆ ಅವರ ಪ್ರೇಮಿಯಾಗು. ಏಕೆಂದರೆ ಮುಹಮ್ಮದ್(ಸ) ರ ಸಾಕ್ಷ್ಯ ಸ್ವಯಂ ಮುಹಮ್ಮದ್(ಸ) ಆಗಿರುತ್ತಾರೆ.

ಸರೆದಾರಮ್ ಫಿದಾ ಎ ಖಾಕೆ ಅಹ್ಮದ್(ಸ)
ದಿಲಮ್ ಹರ್ ವಖ್ತೆ ಖುರ್‌ಬಾನೆ ಮುಹಮ್ಮದ್(ಸ)

ಅಹ್ಮದ್(ಸ) ರವರ ಪಾದದಡಿಯ ಮಣ್ಣಿನ ಮೇಲೆ ನನ್ನ ಶಿರ ಸಮರ್ಪಿತವಿದೆ. ಮತ್ತು ನನ್ನ ಮನವು ಮುಹಮ್ಮದ್(ಸ) ಪ್ರೀತಿಗೆ ಬಲಿಯಾಗಲು ಯಾವಗಲು ಸಿದ್ಧವಿದೆ.

ದಿಗರ್ ಉಸ್ತಾದ್ ರಾನಾಮೆ ನದಾನಮ್
ಕೆ ಖ್ವಾಂದಮ್ ದರ್ ದಬಿಸ್ತಾನೆ ಮುಹಮ್ಮದ್(ಸ)

ನಾನು ಇನ್ನಾವುದೇ ಗುರುವಿನ ಹೆಸರು ತಿಳಿದಿಲ್ಲ. ನಾನಂತೂ ಕೇವಲ ಮುಹಮ್ಮದ್(ಸ) ರವರ ಪಾಠ ಶಾಲೆಯ ವಿದ್ಯಾರ್ಥಿಯಾಗಿದ್ದೇನೆ.

ಅಲಾಅಯ್ ದುಶ್ಮನೆ ನಾದಾಂ ವ ಬೇರಾಹ್
ಬಿತರ್ಸ್ ಅಝ್ ತೇಗೆ ಬುರ್‍ರಾನೆ ಮುಹಮ್ಮದ್(ಸ)

ಎಲೈ ಮೂರ್ಖ ಮತ್ತು ದಾರಿ ತಪ್ಪಿದ ಶತ್ರುವೇ, ಎಚ್ಚರವಾಗಿರು ಮತ್ತು ಮುಹಮ್ಮದ್(ಸ) ಸೀಳಿ ಹಾಕುವ ಖಡ್ಗದಿಂದ ಭಯಪಡು.

ಅಲಾಅಯ್ ಮುಂಕಿರಝ್ ಶಾನೆ ಮುಹಮ್ಮದ್(ಸ)
ಹಮ್ ಅಝ್ ನೂರೆ ನುಮಾಯಾನೆ ಮುಹಮ್ಮದ್(ಸ)

ಎಚ್ಚರವಿರಲಿ! ಎಲೈ ಮುಹಮ್ಮದ್(ಸ) ರವರ ವೈಭವ ಹಾಗು ಮುಹಮ್ಮದ್(ಸ) ರವರ ಬೆಳಗುತ್ತಿರುವ ಪ್ರಕಾಶವನ್ನು ಧಿಕ್ಕರಿಸುವವನೆ.

ಕರಾಮತ್ ಗರ್‌ಚೆ ಬೆ ನಾಮ್ ವ ನಿಶಾನಸ್ತ್
ಬಯಾಬನ್ಗರಝು ಗುಲ್ಮಾನೆ ಮುಹಮ್ಮದ್(ಸ)

ಇದೀಗ ಪವಾಡವೆಂಬುದು ಮಾಯವಾಗಿರುತ್ತದೆ. ಆದರೆ ನೀನು ಬಾ ಮತ್ತು ಅದನ್ನು ಮುಹಮ್ಮದ್(ಸ) ರವರ ಗುಲಾಮರಲ್ಲಿ ನೋಡು.

❋❋❋

EDITOR
TARIQ AHMED IDRIS
Tel: 80503-30779
Website : akhbarbadrqadian.in
: www.alislam.org/badr
E-mail :
kannadabadar@gmail.com

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

ಕನ್ನಡ ಬದರ್ ವಾರ ಪತ್ರಿಕೆ **Weekly BADAR Qadian**

Qadian - 143516 Distt. Gurdaspur (Pb.) INDIA

Vol. 01 Thursday 13 - August 2020 Issue. 31

MANAGER
NAWAB AHMAD
Tel : (0091) 94170-20616
SUBSCRIPTION
ANNUAL: Rs. 500/-
WEIGHT: 50-100 gms / issue

عَنْ اَبِی هُرَیْرَةَ رَضِیَ اللهُ عَنْهُ اَنَّ النَّبِیَّ صَلَّی اللهُ عَلَیْهِ وَسَلَّمَ قَالَ

”صَلَاةٌ فِی مَسْجِدِی هٰذَا

خَیْرٌ مِنْ اَلْفِ صَلَاةٍ فِیمَا سِوَاهُ اِلَّا الْمَسْجِدَ الْحَرَامَ“

(صحیح بخاری، کتاب فضل الصّلوٰة فی مکة والمدینة)

ಹಝ್‌ರತ್ ಅಬೂ ಹುರೈರ (ರ) ವರದಿ ಮಾಡುತ್ತಾರೆ:
ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು
ಹೇಳಿದರು: ನನ್ನ ಈ ಮಸೀದಿಯಲ್ಲಿ (ಅಂದರೆ ಮಸ್ಜಿದೆ
ನಬವಿಯಲ್ಲಿ) ಒಂದು ಹೊತ್ತಿನ ನಮಾಝ್ ಅನ್ಯ
ಮಸೀದಿಗಳಲ್ಲಿನ ಒಂದು ಸಾವಿರ ನಮಾಝ್‌ಗಳಿಗಿಂತ
ಉತ್ತಮವಾಗಿದೆ, ಮಸ್ಜಿದೆ ಹರಾಮ್ ಹೊರತು ಪಡಿಸಿ.

(ಸಹೀಹ್ ಬುಖಾರಿ, ಕಿತಾಬ್ ಫಸ್ಲುಸ್ಸಲಾತ್ ಫೀ ಮಕ್ಕ ವಲ್ ಮದೀನ)



Printed & Published by: Jameel Ahmed Nasir On Behalf Of Nigran Board Of Badar, Name Of Owner: Nigran Board Of Badar. And Printed at Fazle-Umar Printing Press, Harchowal Road, Qadian. Dist. Gurdaspur-143516, Punjab. And Published at Office Of Weekly Badar Mohalla Ahmadiyya, Qadian. Dist. Gurdaspur-143516, Punjab. INDIA. Editor: Tariq Ahmed Idris.